ಏಪ್ರಿಲ್ 30-ಮೇ 7, 2000 ಬೆಲೆ ರೂ. 4.00


ಮೇ ವಿಶೇಷ ಸಂಚಿಕೆ

ದುಡಿವ ಜನರ ಪ್ರಾಣಮಿತ್ರ

ಪೆಕ್ಕೊರಂಗ



ಶೇರು ಮಾರುಕಟ್ಟೆ ಒಡೆದ ಗುಳ್ಳೆ



ಬೆಲೆ ಏರಿಕೆ: ಪ್ರತಿಭಟನೆಯ ಸುಂಟರಗಾಳಿ



ಆಲಮಟ್ಟಿ ವಿವಾದ ನ್ಯಾಯಸಮ್ಮತ ತೀರ್ಪು

ಮಹಿಳೆ ಮತ್ತು ಮೇ ದಿನ

ಭಿನ್ನಮತೀಯರಿಗೆಲ್ಲಾ ಒಂದೊಂದು ಕುರ್ಚಿ


ಕೆಲವು ಆಯೋಗಗಳಿಗೆ ಹಾಗೂ ಮಂಡಳಿಗಳಿಗೆ ಮುಖ್ಯಸ್ಥರನ್ನು ನೇಮಕ ಮಾಡಿರುವ ಮುಖ್ಯ ಮಂತ್ರಿಯವರ ಉದ್ದೇಶಗಳು ಪ್ರಶಾರ್ಹ್ಯ. ಮುಖ್ಯವಾಗಿ ಗಡಿ ಕಾವಲು ಸಮಿತಿಯ ಅಧ್ಯಕ್ಷರಾಗಿ ಮಾಜಿ ಶಾಸಕ ವಾಟಾಳ್ ನಾಗರಾಜ್, ಕರ್ನಾಟಕದ ತೆರಿಗೆ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಮಾಜಿ ಮುಖ್ಯ ಮಂತ್ರಿ ವೀರಪ್ಪ ಮೊಯ್ಲಿ, ಕರ್ನಾಟಕ ಆಡಳಿತ ಸುಧಾರಣಾ ಆಯೋಗಕ್ಕೆ ಹಿರಿಯ ಕಾಂಗ್ರೆಸ್ ನಾಯಕ ಹಾರ್‍ನಳ್ಳಿ ರಾಮಸ್ವಾಮಿಯವರ ನೇಮಕಾತಿ ಪ್ರಮುಖವಾಗಿವೆ.

ಕೃಷ್ಣರವರ ಸರ್ಕಾರ ಉದಾರೀಕರಣ, ಜಾಗತೀಕರಣದ ಮಂತ್ರಗಳನ್ನೇ ತಮ್ಮ ಜೀವನಸಾರವನ್ನಾಗಿಸಿಕೊಂಡಿದೆ. ವಿದೇಶಿ ಸಂಸ್ಥೆಗಳ ಸಾಲಗಳಲ್ಲೇ ಕರ್ನಾಟಕದ ಅಭಿವೃದ್ಧಿ ಸಾಧ್ಯವೆಂದು ಎಲ್ಲರನ್ನು ನಂಬಿಸಹೊರಟಿದ್ದಾರೆ. ಆ ಸಂಸ್ಥೆಗಳು ನೆಯ್ದಿರುವ ರಕ್ತ ಹೀರುವ ಜಾಲಕ್ಕೆ ರಾಜ್ಯದ ಜನರನ್ನು ತಳ್ಳುತ್ತಿದ್ದಾರೆ. ವಿಶ್ವಬ್ಯಾಂಕ್, ಐ.ಎಂ.ಎಫ್.ಗಳು ತಮ್ಮ ಆದೇಶಗಳನ್ನೇ ಪಾಲಿಸುವಂತೆ ಮೂಗುಹಿಡಿದು ಘರ್ಜಿಸುತ್ತಿದ್ದಾರೆ. ಪ್ರಸಕ್ತ ತೆರಿಗೆ ಹಾಗೂ ಆಡಳಿತ ಪದ್ಧತಿಯಲ್ಲಿ ಭಾರೀ ಸುಧಾರಣೆ ಆಗತ್ಯವಿದ್ದು, ಅವುಗಳನ್ನು ಪುನರ್ ರೂಪಿಸಬೇಕೆಂದೂ ವಿಶ್ವಬ್ಯಾಂಕ್ ಒತ್ತಾಯಿಸಿತ್ತು. ಹಾಗೆಯೇ ವಿಶ್ವಬ್ಯಾಂಕ್‌ನ ತಂತ್ರ ಹೂಡಿದ್ದು ಈಗಿನ ತೆರಿಗೆಗಳನ್ನು ಪದ್ಧತಿಯನ್ನು ಅಧ್ಯಯನ ಮಾಡಲು ರಾಜ್ಯಕ್ಕೆ ಆಗಮಿಸಿತ್ತು. ಸರ್ಕಾರವೇ ಅನಗತ್ಯ ಹೊರೆಯೆಂದೂ, ಅದನ್ನು ಕಿರಿದುಗೊಳಿಸಲೇಬೇಕೆಂಬ ದಬಾವಣೆ ಈ ವಿದೇಶಿ ಹಣ ಕಾಸು ಸಂಸ್ಥೆಗಳ ಇನ್ನೊಂದು ಅಣತಿ. ಸರ್ಕಾರದ ಬಹುತೇಕ ಕೆಲಸ-ಕಾರ್ಯಗಳನ್ನು ಜನ ಕಲ್ಯಾಣ ಯೋಜನೆ, ಅಭಿವೃದ್ಧಿಯಂತಹ ವಿಷಯಗಳನ್ನು ಖಾಸಗಿಯವರಿಗೆ ಒಪ್ಪಿಸಬೇಕು ಎಂಬುದು ಒಳಗೊಂಡಿದೆ. ವಿಶ್ವ ಬ್ಯಾಂಕ್‌ನ ಷರತ್ತುಗಳನ್ನು ಒಪ್ಪಿಕೊಂಡ ಮೇಲೆಯೇ ಹೊಸ ಸಾಲ ನೀಡಿಕೆಯ ಭರವಸೆಯ ಪ್ರಕಟವಾಗಿತ್ತು. ಆದರೆ ಕೃಷ್ಣ ರವರು ಷರತ್ತುಗಳೇನೂ ಇಲ್ಲವೆಂದು ಈ ಸಾಲಗಳು ಉದ್ಧಾರದ ಕೊಡುಗೆಗಳೆಂದು ಜನರನ್ನು ನಂಬಿಸಲು ಮುಂದಾಗಿದ್ದರು. ಮತ್ತು ಈ ಸಾಲ ಎತ್ತುವ ತಮ್ಮ ಸಾಮರ್ಥ್ಯವೇ ತಮ್ಮ ಸರ್ಕಾರದ ಅಮೋಘ ಸಾಧನೆ ಎಂದು ಬಜೆಟ್ ಮಂಡನೆ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ನಾಚಿಕೆಯಿಲ್ಲದೇ ಬೀಗಿದ್ದರು. ತಮ್ಮ ಷರತ್ತುಗಳನ್ನು ಹೇಗೆ ಜಾರಿಗೊಳಿಸುತ್ತಾರೆ ಎಂದು ಖಾತ್ರಿಯಾದ ಮೇಲೆಯೇ ಐ.ಎಂ.ಎಫ್. ಸಾಲ ನೀಡುವುದು. ಈ ಆಯೋಗಗಳ ರಚನೆಯೇ ಮುಂದೆ ಜನರ ಮೇಲೆ ಬರಲಿರುವ ಭೀಕರ ತೆರಿಗೆಗಳ ಹೇರಿಕೆ, ಉದ್ಯೋಗಗಳ ಕಡಿತ ಮತ್ತು ಜನಹಿತ ಕಾರ್ಯಗಳು ಮೇಲೆ ಘೋರ ಗದಾ ಪ್ರಹಾರಗಳ ಸೂಚನೆ.

ಈ ಆಯೋಗಳನ್ನು ನೇಮಿಸುವಲ್ಲಿ ಕೃಷ್ಣರವರ ರಾಜಕೀಯ ಉದ್ದೇಶವೂ ಅಡಗಿದೆ. ಇವರಲ್ಲಿ ಮೊಯ್ಲಿ, ಹಾಗೂ ವಾಟಾಳ್ ನಾಗರಾಜ್‌ರವರು ಕಳೆದ ಪಾರ್ಲಿಮೆಂಟ್, ವಿಧಾನಸಭಾ ಚುನಾವಣೆಗಳಲ್ಲಿ ಜನತೆಯಿಂದ ತಿರಸ್ಕೃತವಾಗಿ ಸೋತವರು. ಈ ಮಾಜಿಗಳಿಗೆ ಏನಾದರೊಂದು ಅಧಿಕಾರದ ಕುರ್ಚಿಗೆ ಆತುಕೊಂಡಿರದಿದ್ದರೆ ಹುಚ್ಚು ಹಿಡಿದೀತೆಂಬಷ್ಟು ತಲ್ಲಣಗಳು. ವಾಟಾಳ್ ಹಿಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷತೆಗೆ ನಡೆಸಿದ ಲಾಬಿ ಯತ್ನ ಸಫಲವಾಗದೇ ಅವರನ್ನು ತೃಪ್ತಿಗೊಳಿಸುವ ಸಲುವಾಗಿ ಈ ಹೊಸ ಹುದ್ದೆ ರಚನೆಯಾಗಿದೆ. ನಾಡು-ನುಡಿಯ ಅಭಿವೃದ್ಧಿಯ ಬಗ್ಗೆ ಬಾಷಾದುರಭಿಮಾನ ಮತ್ತು ಅನ್ಯ ಭಾಷಿಕರ ದ್ವೇಷಗಳೇ ಕನ್ನಡಪರವೆಂದು ವಾಟಾಳ್ ನಿಲುವು ಜಗಜ್ಜಾಹೀರ. ಇನ್ನು ಅವರಿಗೆ ದೊರೆತ ಈ ಸಂಪುಟ ದರ್ಜೆಯ ಅಧಿಕಾರ ಗಡಿನಾಡಿನ ಸಮಸ್ಯೆಗಳಿಗೆ ಪರಿಹಾರವಾಗುವ ಬದಲು ನೆರೆಯ ರಾಜ್ಯಗಳ ನಡುವೆ ಸಂಘರ್ಷ ಹೊತ್ತಿ ಉರಿಯಲು ಕಾರಣವಾಗಬಹುದು. ಇನ್ನು ಮೊಯ್ಲಿ, ಹಾರ್‍ನಳ್ಳಿಯವರು ಕೃಷ್ಣರವರ ಟೀಕಾಕಾರರು, ಭಿನ್ನಮತೀಯರು. ಇತ್ತೀಚಿನ ದಿನಗಳಲ್ಲಿ ಬಹಿರಂಗವಾಗಿಯೇ ತಮ್ಮ ಟೀಕಾಸ್ತ್ರಗಳನ್ನು ಕೃಷ್ಣರ ಮೇಲೆ ಪ್ರಯೋಗಿಸಿದ್ದರು. ಈ ಇಬ್ಬರ ನೇಮಕ ಕೃಷ್ಣರ ವಿರುದ್ಧ ಎದ್ದಿರುವ ಪಕ್ಷದೊಳಗಿನ ಬಂಡಾಯವನ್ನು ಶಮನಗೊಳಿಸಲು ನಡೆಸಿದ ಸಂಧಾನದ ಮೊದಲ ಹೆಜ್ಜೆ.

ಕೃಷ್ಣರ ಸರ್ಕಾರ ಇನ್ನೂ ಒಂದು ವರ್ಷವನ್ನು ಪೂರೈಸಿಲ್ಲ. ಆದರೆ ಈ ಸರಕಾರದ ನಿರ್ಧಾರಗಳು ಮತ್ತು ಕೇಂದ್ರ ಸರ್ಕಾರದ ಕ್ರಮಗಳು ರಾಜ್ಯ ಜನರ ಬವಣೆಗಳನ್ನು ಹೆಚ್ಚಿಸಿವೆ. ಅತೃಪ್ತಿಯೂ ಬೆಳೆಯುತ್ತಿದೆ. ಇವುಗಳನ್ನು ಗ್ರಹಿಸಿ ಕಿಂಚಿತ್ತು ಪರಿಹಾರ ಒದಗಿಸುವ ಚಿಂತೆಯೇ ಅವರಿಗೆ ಇಲ್ಲವಾಗಿದೆ. ಪಕ್ಷದೊಳಗಿನ ಭಿನ್ನ ಮತೀಯರನ್ನು ಅಷ್ಟಿಷ್ಟು ತೃಪ್ತಿಗೊಳಿಸಿಕೊಂಡು ಸಾಗು ಹಾಕಿದರೆ ಸಾಕು ಎಂಬ ನಿಯಮ ಅವರದು. ಹೀಗಾಗಿ ಇನ್ನು ಅದೆಷ್ಟು ನಿಗಮಗಳಿಗೆ ನೇಮಕಾತಿ ಮಾಡಿ, ಈ ಬಿಳಿಯಾನೆಗಳನ್ನು ಸಾಕಿ ಹೊತ್ತು ತಿರುಗುವ ದಾರುಣ ಸ್ಥಿತಿ ನಾಡಿನ ಜನತೆಯ ಪಾಲಿಗೆ ಬರಲಿದೆಯೋ. ಕೃಷ್ಣರವರು ಇಟ್ಟಿರುವ ಈ ಹೆಜ್ಜೆಗಳು ಖಂಡನಾರ್ಹ.

- ಎಸ್.ವೈ.ಗುರುಶಾಂತ್



ಕಳೆದಸಂಚಿಕೆಯಲ್ಲಿ ಕಾಂಗ್ರೆಸ್ ಎಡಬಿಡಂಗಿತನದ ಬಗ್ಗೆ ಹಾಗೂ ಗಾಂಧೀಜಿಯವರ ಬಹಿರಂಗ ಪತ್ರದ ಬಗ್ಗೆ ಓದಿರುವಿರಿ ಈ ಸಂಚಿಕೆಯಲ್ಲಿ 1957 ರಲ್ಲಿ ಕೇರಳದ ಮುಖ್ಯಮಂತ್ರಿಯಾಗಿ ಕಾಂ. ಇ.ಎಂ.ಎಸ್. ನೇತೃತ್ವದ ಕಮ್ಯುನಿಸ್ಟ್ ಪಕ್ಷ ಅಧಿಕಾರ ಸ್ವೀಕರಿಸಿದ ಬಗ್ಗೆ ಮತ್ತು ಬಂಗಾಲದಲ್ಲಿ ಈ ಬಗ್ಗೆ ಹೊಸ ಚೇತನದೊಡನೆ ಕಮ್ಯುನಿಸ್ಟ್ ಪಕ್ಷ ಮತ್ತಷ್ಟು ಸಕ್ರಿಯವಾಗಿ ಜನಪರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಬಗ್ಗೆ ಓದಿರಿ.

ಕೇರಳ ಜನ ಹೊಸೆದ ಹೊಸ ಇತಿಹಾಸ

ಆ ಕಾಲಘಟ್ಟದಲ್ಲಿ, ಪಶ್ಚಿಮ ಬಂಗಾಳದಲ್ಲಿ ನಾವು ಯಶಸ್ವಿ ಆಗದಿದ್ದರೂ ಕೇರಳ ಒಂದು ಇತಿಹಾಸವನ್ನು ನಿರ್ಮಾಣ ಮಾಡುತ್ತಿತ್ತು. ದೇಶದಲ್ಲಿ ಪ್ರಥಮ ಬಾರಿಗೆ ಜನರು ಕಮ್ಯುನಿಸ್ಟ್ ನೇತೃತ್ವದ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಮುಂಬರುವ ದಿನಗಳಲ್ಲಿ ನಿಭಾಯಿಸಲು ನಮ್ಮ ಮುಂದೆ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಿಸಿದರು.

ನನಗಿನ್ನೂ ಚೆನ್ನಾಗಿ ನೆನಪಿದೆ, ಅದು 1957 ರ ಮಾರ್ಚ್ ಮೂರನೇವಾರ. ಕೇರಳದಲ್ಲಿನ ಯಶಸ್ಸಿನ ಸುದ್ದಿ ತಲುಪುತ್ತಲೇ ಕಾಕಾ-ಬಾಬು (ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲೊಬ್ಬರಾದ ಮುಜಾಫರ್ ಅಹಮದ್‌ರವರು) ತಿರುವನಂತಪುರಕ್ಕೆ ಒಂದು ಅಭಿನಂದನೆ ಸಂದೇಶವನ್ನು ಟೆಲಿಗ್ರಾಂ ಮೂಲಕ ಕಳಿಸಿದರು.

ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷ ಸಾಧಿಸಿದ ಯಶಸ್ಸನ್ನು ನಾವು ಈಗಷ್ಟೇ ಕೇಳಿದೆವು. ಪಶ್ಚಿಮ ಬಂಗಾಳದಲ್ಲಿನ ಪಕ್ಷದ ಎಲ್ಲಾ ಸದಸ್ಯರ ಪರವಾಗಿ ಮತ್ತು ರಾಜ್ಯದ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ ಪರವಾಗಿ ನಾವು ನಿಮ್ಮನ್ನು ಅಭಿನಂದಿಸುತೇವೆ"-ಇದು ಸಂದೇಶದ ಒಕ್ಕಣೆ. ಕಮ್ಯುನಿಸ್ಟರು 60 ಸ್ಥಾನಗಳಲ್ಲಿ ಗೆದ್ದಿದ್ದರು. ಕಮ್ಯುನಿಸ್ಟ್ ಬೆಂಬಲಿತ ಪಕ್ಷೇತರರು ಐದು, ಪಿ.ಎಸ್.ಪಿ. ಒಂಬತ್ತು ಮತ್ತು ಕಾಂಗ್ರೆಸ್ 43 ಸ್ಥಾನಗಳಲ್ಲಿ ಗೆದ್ದಿತ್ತು. ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆ 126.

ಕಾಮ್ರೇಡ್ ಇ.ಎಂ.ಎಸ್. ನಂಬೂದರಿಪಾಡ್ ಶಾಸಕ ಪಕ್ಷದ ನಾಯಕರಾಗಿ ಹಾಗೂ ಅಚ್ಯುತ ಮೆನನ್ ಉಪನಾಯಕರಾಗಿ ಆಯ್ಕೆಯಾದರು. ಕಾ. ಇ.ಎಂ.ಎಸ್. ದೇಶದ ಪ್ರಥಮ ಕಮ್ಯುನಿಸ್ಟ್ ಮುಖ್ಯಮಂತ್ರಿಯಾದ ಕೀರ್ತಿಗೆ ಪಾತ್ರರಾದರು.

ಕೆ.ಪಿ.ಗೋಪಾಲನ್, ಟಿ.ಎ.ಮಜೀದ್, ಪಿ.ಕೆ.ಸಾಥನ್, ಜೋಸೆಫ್ ಮುಂಡಶೇರಿ, ವಿ.ಆರ್.ಕೃಷ್ಣ ಅಯ್ಯರ್, ಕೆ.ಆರ್.ಗೌರಿ, ಡಾ. ಎ.ಆರ್.ಮೆನನ್ ಮತ್ತು ಕೆ.ಸಿ.ಜಾರ್ಜ್ ಮೊದಲಾದವರು ಇ.ಎಂ.ಎಸ್. ಮಂತ್ರಿಮಂಡಲದಲ್ಲಿದ್ದರು.

ದೇಶದಲ್ಲಿ ಮೊದಲ ಬಾರಿಗೆ ಕಮ್ಯುನಿಸ್ಟ್ ಸರಕಾರ ಸ್ಥಾಪನೆಯಾಗಿದ್ದು ಮತ್ತು ಪ.ಬಂಗಾಳದಲ್ಲಿ ಸಿಪಿಐ ಬಲಿಷ್ಟವಾಗುತ್ತಿರುವುದರ ಸಂಭ್ರಮವನ್ನು ಆಚರಿಸಲು ಏಪ್ರಿಲ್ 7 ರಂದು ಒಂದು ಸಭೆ ಕರೆದೆವು. ಕಾಂ. ಮುಝಫರ್ ಅಹ್ಮದ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೇರಳ ಮಲಬಾರ್ ಜಿಲ್ಲೆಯ ಹುತಾತ್ಮರ ಸ್ಮರಣೆಯಲ್ಲಿ ಬರೆದ ಪ್ರಖ್ಯಾತ ಗೀತೆಯ ಗಾಯನದೊಂದಿಗೆ ಸಭೆ ಆರಂಭವಾಯಿತು.

ನಾನೊಂದು ನಿರ್ಣಯವನ್ನು ಮಂಡಿಸಿದೆ "ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷದ ವಿಜಯದೊಂದಿಗೆ ನಾವು ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಕೇರಳ ಜನತೆಗೆ ನಮ್ಮ ಅಭಿನಂದನೆಗಳು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಸೆಣಸಲು ಈ ರಾಜ್ಯದ ಪ್ರಜಾಸತ್ತಾತ್ಮಕ ಮತ್ತು ಶಾಂತಿಪ್ರಿಯ ಶಕ್ತಿಗಳಲ್ಲಿ ಬಲವಾದ ಸಂಬಂಧ ಬೆಸೆಯಲು ನಾವು ಸಂಕಲ್ಪ ಮಾಡುತ್ತೇವೆ" ಎಂದು ನಿರ್ಣಯದಲ್ಲಿ ಹೇಳಲಾಗಿತ್ತು.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೇಲೆ ಇ.ಎಂ.ಎಸ್. 16 ಅಂಶಗಳ ಕಾರ್ಯಕ್ರಮವೊಂದನ್ನು ಪ್ರಕಟಿಸಿದರು. ಪ್ರಮುಖ ಭೂಸುಧಾರಣೆಗಳು, ರೈತರಿಗೆ ಅವರ ಜಮೀನಿನ ಮೇಲಿನ ಹಕ್ಕು ಮತ್ತು ಕೃಷಿ, ಕೈಗಾರಿಕೆಯ ಬೆಳವಣಿಗೆಗೆ ಸಂಬಂಧಿಸಿದ ವಿಚಾರಗಳೂ ಅದರಲ್ಲಿ ಸೇರಿದ್ದವು. ರಾಜ್ಯದ ಆರ್ಥಿಕತೆಯ ಪ್ರಗತಿಯಲ್ಲಿ ಸಕ್ರಿಯ ಪಾತ್ರ ವಹಿಸುವಂತೆ ಅವರು ಕೈಗಾರಿಕೋದ್ಯಮಿಗಳಿಗೆ ಕರೆ ನೀಡಿದರು. ಹೊಸ ಸರಕಾರ ಪ್ರಾಮಾಣಿಕವಾಗಿ ಕೆಲಸ ಮಾಡಲು ಆರಂಭಿಸಿತು.



ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಇ.ಎಂ.ಎಸ್.

ಐತಿಹಾಸಿಕ ಕ್ರಮ

ಕೆಲವೇ ದಿನಗಳಲ್ಲಿ ಒಂದು ಐತಿಹಾಸಿಕ ಆಧ್ಯಾದೇಶವನ್ನು ಇ.ಎಂ.ಎಸ್. ಸರಕಾರ ಹೊರಡಿಸಿತು. ಅದು 10 ಲಕ್ಷ ಕಾರ್ಮಿಕರಿಗೆ ಮತ್ತು ಐದು ಲಕ್ಷ ಪಾಲುದಾರ ಹಿಡುವಳಿದಾರರಿಗೆ ಕೃಷಿ ಹಕ್ಕನ್ನು ನೀಡಿತು. ಒಂದು ಲಕ್ಷ ಎಕರೆ ಕೃಷಿ ಜಮೀನನ್ನು ಭೂರಹಿತ ಕೃಷಿಕರಿಗೆ ಹಂಚಲಾಯಿತು.

ಎಲ್ಲಾ ರಾಜಕೀಯ ಕೈದಿಗಳನ್ನು ಕೇರಳ ಸರಕಾರ ಬಿಡುಗಡೆ ಮಾಡಿತು. ಯಾವುದೇ ಪ್ರಜಾಸತ್ತಾತ್ಮಕ ಹೋರಾಟವನ್ನು ಮುರಿಯಲು ಪೋಲೀಸರನ್ನು ಬಳಸುವುದಿಲ್ಲ ಎಂದೂ ಸರಕಾರ ಘೋಷಿಸಿತು.

ಹಿಂದಿನ ಕಾಂಗ್ರೆಸ್ ಸರಕಾರಗಳ ಆಡಳಿತದ ದೀರ್ಘ ಅನುಭವಕ್ಕೆ ಹೋಲಿಸಿದರೆ ಇವೆಲ್ಲವೂ ಉದಾತ್ತ ಪ್ರಯತ್ನಗಳಾಗಿದ್ದವು. ಇದೊಂದು ಮಹತ್ವದ ಹೊಣೆಗಾರಿಕೆಯಾಗಿತ್ತು; ಒಂದು ಕಡೆ ಸರಕಾರ ಬಂಡವಾಳಶಾಹಿ-ಜಮೀನ್ದಾರಿ ರಾಜಕೀಯ ಸ್ವರೂಪದ ಒಳಗಡೆ ಕೆಲಸ ಮಾಡಬೇಕು, ಇನ್ನೊಂದೆಡೆ ಜನತೆಯ ಹೋರಾಟಕ್ಕೆ ಕ್ರಾಂತಿಕಾರಿ ಪಾತ್ರ ನೀಡುವ ಜವಾಬ್ದಾರಿಯೂ ಸರಕಾರದ ಮೇಲಿತ್ತು.

1952 ರಲ್ಲಿ ಕಮ್ಯುನಿಸ್ಟ್ ಪಕ್ಷ ಲೋಕಸಭೆಯ 60 ಸ್ಥಾನಗಳಿಗೆ ಸ್ಪರ್ಧಿಸಿ 27 ರಲ್ಲಿ ಗೆದ್ದಿತು. 57 ರಲ್ಲಿ 122 ರಲ್ಲಿ ಸ್ಪರ್ಧಿಸಿ 29 ಕ್ಷೇತ್ರಗಳಲ್ಲಿ ಜಯ ಪಡೆಯಿತು. ಈ ಬಾರಿ ಹೆಚ್ಚು ಸ್ಥಾನಗಳು ಬಾರದಿದ್ದರೂ ಪಕ್ಷ ಪಡೆದ ಮತಗಳ ಸಂಖ್ಯೆ ದುಪ್ಪಟ್ಟುಗೊಂಡಿತ್ತು.

ಚುನಾವಣೆಗಳ ನಂತರ ಪಶ್ಚಿಮ ಬಂಗಾಳ ವಿಧಾನಸಭೆಯ ಕಮ್ಯುನಿಸ್ಟ್ ಗುಂಪಿನ ನಾಯಕನಾಗಿ ನನ್ನನ್ನು ಸರ್ವಾನುಮತದಿಂದ ಆರಿಸಲಾಯಿತು. ಇದೇನೂ ನನಗೆ ಹೊಸ ಅನುಭವವಾಗಿರಲಿಲ್ಲ. ಹಿಂದಿನ ಅಸೆಂಬ್ಲಿಯಲ್ಲಿ ಕೇವಲ 30 ಕಮ್ಯುನಿಸ್ಟ್ ಸದಸ್ಯರಿದ್ದರು. ಆದರೆ ಈಗ ಎಲ್ಲ ಹಂತಗಳಲ್ಲಿ ಜನರು ನಮ್ಮತ್ತ ಧಾವಿಸಿ ಬರುತ್ತಿದ್ದರು. ನಾವು ಅಸೆಂಬ್ಲಿಯಲ್ಲಿ ಏನು ಮಾಡುತ್ತೇವೆ, ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಗಳತ್ತ ಗಮನ ಸೆಳೆಯಲು ಯಾವ ರೀತಿಯಲ್ಲಿ ಪ್ರಯತ್ನಿಸುತೇವೆ ಎಂಬುದರ ಮೇಲೆ ಜನರು ಕಣ್ಣಿಡುತ್ತಿದ್ದರು. ಜನರು ಈಗ ನಮ್ಮಿಂದ ಬಹಳಷ್ಟನ್ನು ನಿರೀಕ್ಷಿಸುತ್ತಿದ್ದರು ಎಂಬುದು ಸ್ಪಷ್ಟವಾಗಿತ್ತು.

ನಾನು ಮುಂದೆ ನಿರ್ವಹಿಸಬೇಕಾದ ಕಾರ್ಯಭಾರವನ್ನು ಎದುರಿಸಲು ಮಾನಸಿಕವಾಗಿ ಸಿದ್ಧನಾಗುತ್ತಿದ್ದೆ. ಯಾವುದೇ ವಿಷಯ ಗಮನಕ್ಕೆ ಬಾರದಂತೆ ಹೋಗಲು ಬಿಡಬಾರದಿತ್ತು ಹಾಗೂ ಸಾಧ್ಯವಾದಾಗಲೆಲ್ಲ ಬಂಗಾಳದ ಬಗ್ಗೆ ದೇಶದ ಗಮನವನ್ನು ಸೆಳೆಯಬೇಕಾಗಿತ್ತು.

ಬಂಕಿಮ್ ಮುಖರ್ಜಿ ಉಪನಾಯಕರಾಗಿದ್ದರು ಹಾಗೂ ಗಣೇಶ್ ಘೋಷ್ ಮುಖ್ಯ ಸಚೇತಕರಾಗಿದ್ದರು.

ತುಂಬ ಕ್ಷುಲ್ಲಕ ಕಾರಣಗಳನ್ನು ಮುಂದೊಡ್ಡಿ ಹಿಂದೆ ನಮಗೆ ಪ್ರತಿಪಕ್ಷ ಸ್ಥಾನಮಾನವನ್ನು ನಿರಾಕರಿಸಲಾಗಿತ್ತು. ನಮ್ಮ ಮಹತ್ವವನ್ನು ಕುಗ್ಗಿಸುವುದೇ ಅದರ ಉದ್ದೇಶವಾಗಿತ್ತು. ಆದರೆ ಈ ಬಾರಿ ಹಾಗಾಗಲಿಲ್ಲ. ಈ ತಂತ್ರಗಳಿಂದ ನಮ್ಮನ್ನು ತಡೆಹಿಡಿಯಲಾಗದು ಎಂಬುದನ್ನು ಕಾಂಗ್ರೆಸ್ ಅರಿಯಿತು. ಅಷ್ಟೇ ಅಲ್ಲ, ಸ್ಥಾನಮಾನದ ನಮ್ಮ ಹಕ್ಕನ್ನು ಕಸಿದುಕೊಂಡದ್ದೇ ಆದಲ್ಲಿ ಜನತೆಯ ಆಕ್ರೋಶವನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಅದು ಅರ್ಥ ಮಾಡಿಕೊಂಡಿತು.

ಕೃಷ್ಣಾ ನದೀ ನೀರಿನ ವಿವಾದ

ನ್ಯಾಯಸಮ್ಮತ ಸುಪ್ರೀಂಕೋರ್ಟ್ ತೀರ್ಪು

ಕರ್ನಾಟಕ ಹಾಗೂ ಆಂಧ್ರದ ಎರಡೂ ರಾಜ್ಯಗಳ ಜನತೆಗೆ ಸೂಕ್ತ ನ್ಯಾಯಸಲ್ಲುವಂತೆ ಹಾಗೂ ದೇಶದ ಹಿತಕಾಯುವಂತೆ ನ್ಯಾಯಸಮ್ಮತ ಹಾಗೂ ಸಮಯೋಚಿತ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿದೆ. ಈ ತೀರ್ಪಿನ ಹೃದಯವೆಂದರೆ ಕರ್ನಾಟಕ ಹಾಗೂ ಆಂಧ್ರ ಸರ್ಕಾರಗಳೆರಡೂ ಕೂಡ ಪರಸ್ಪರ ವಿರುದ್ಧವಾಗಿ ಮತ್ತೊಂದು ರಾಜ್ಯದ ನೀರಿನ ಪಾಲನ್ನು ಕಬಳಿಸುವ ಯೋಚನೆಗಳನ್ನು, ಅದಕ್ಕಾಗಿ ಆರಂಭಿಸಲಾಗಿದ್ದ ಎಲ್ಲಾ ಯೋಜನೆಗಳನ್ನು ಕೈಬಿಡಬೇಕು. ಬಚಾವತ್ ಆಯೋಗದ ಅಂತಿಮ ತೀರ್ಪನ್ನು ಎರಡೂ ರಾಜ್ಯಗಳೂ ಗೌರವಿಸಬೇಕು ಎಂದು.

"ಐಕ್ಯರಂಗ" ಪತ್ರಿಕೆ ಈ ವಿವಾದ ಆರಂಭವಾದಾಗಿನಿಂದ ನಿರಂತರವಾಗಿ ಈ ಸಮಸ್ಯೆಯ ಆಳವನ್ನು ಕರ್ನಾಟಕದ ಜನತೆ ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಾಯವಾಗುವಂತೆ ವಿವರಿಸಿದೆ. ಹಾಗೂ ತನ್ನ ಅಭಿಪ್ರಾಯ ಸೂಚಿಸಿದೆ. "ಐಕ್ಯರಂಗ" ಪತ್ರಿಕೆ ತನ್ನ ಡಿ. 5, 99ರ ಸಂಚಿಕೆಯಲ್ಲಿ ಸೂಚಿಸಿದಂತೆ

(1) ಬಚಾವತ್ ಆಯೋಗದ ತೀರ್ಪಿನಂತೆ ಕರ್ನಾಟಕದ ಪಾಲಾದ 734 ಟಿ.ಎಂ.ಸಿ. ನೀರನ್ನು ಬಳಸಲು ಆಲಮಟ್ಟಿ ಅಣೆಕಟ್ಟಿನಲ್ಲಿ 173 ಟಿ.ಎಂ.ಸಿ. ನೀರನ್ನು ಶೇಖರಿಸಬೇಕು. ಅದಕ್ಕಾಗಿ ಆಲಮಟ್ಟಿ ಅಣೆಕಟ್ಟಿನ ಎರಡನೆ ಹಂತದ ಎತ್ತರವನ್ನು 519.6 ಮೀಟರಿಗೆ ಏರಿಸಲು ಯಾರಿಂದಲೂ ಅಡ್ಡಿ ಬರಬಾರದು.

(2) ಈ ದಿಶೆಯಲ್ಲಿ ಆಂಧ್ರ ಸರ್ಕಾರ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 512 ಮೀ. (509 ಮೀ. ಎಂದೂ ಹೇಳಿತ್ತು) ಸೀಮಿತಗೊಳಿಸುವಂತೆ ಒತ್ತಾಯ ಮಾಡಿದ್ದು ಹಾಗೂ ತೆಲುಗುದೇಶಂ ಪಕ್ಷದ ಬೆಂಬಲ ಪಡೆಯಲು ಕೇಂದ್ರ ಸರ್ಕಾರ ಸಂದರ್ಭ ಸಾಧಕ ನಿಲುವು ತಳೆದದ್ದು ಕರ್ನಾಟಕದ ಜನತೆಗೂ, ದೇಶಕ್ಕೂ ಬಗೆದ ದ್ರೋಹ.

(3) ರಾಷ್ಟ್ರೀಯ ಪಕ್ಷಗಳೆಂಬುವು ಈ ದಿಶೆಯಲ್ಲಿ ಎರಡೂ ರಾಜ್ಯಗಳ ಹಾಗೂ ಒಟ್ಟು ದೇಶದ ಹಿತವನ್ನು ಕಾಯುವಂತೆ ತಮ್ಮ ನಿಲುವುಗಳನ್ನು ರೂಪಿಸುವ ರಾಷ್ಟ್ರೀಯ ಹೊಣೆಯನ್ನು ನಿರ್ವಹಿಸದೆ ಒಂದೊಂದು ರಾಜ್ಯದಲ್ಲಿ ಒಂದೊಂದು ನೀತಿ ಅನುಸರಿಸುತ್ತಿವೆ.

(4) 524.5 ಮೀಟರ್ ಎತ್ತರಕ್ಕೆ ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸಿದರೆ ಅದು ಬಚಾವತ್ ಆಯೋಗದ ತೀರ್ಪಿನಂತೆ ಆಂಧ್ರದ ಪಾಲಿನ 105 ಟಿ.ಎಂ.ಸಿ.ಯಷ್ಟು ಹೆಚ್ಚಿನ ನೀರನ್ನು ಹಿಡಿದಿಡುತ್ತದೆ. ಅದು ಕೇವಲ ವಿದ್ಯುತ್ ಬಳಕೆಗಾಗಿ ಮಾತ್ರ ಉಪಯೋಗಿಸಲ್ಪಟ್ಟು ಮತ್ತೆ ಆಂಧ್ರಕ್ಕೆ ಹರಿಯುತ್ತದೆ ಎಂದರೂ ಕೂಡ ಅದು ಆಂಧ್ರದ ಪಾಲಿನ ನೀರು. ಆದರಿಂದ ಆಂಧ್ರಪ್ರದೇಶದ ನೀರಾವರಿಗೆ ಅಡಚಣೆಯಾಗುವ ಸಂಭವವಿದೆ. ಆದ್ದರಿಂದ ಆಂಧ್ರ ಪಾಲಿನ ನೀರನ್ನು ಹಿಡಿದಿಟ್ಟುಕೊಳ್ಳಬೇಕಾದರೆ ಆಂಧ್ರದ ಜನತೆಯ ಆತಂಕವನ್ನು ಪರಿಹರಿಸಬೇಕು.

(5) ಆಂಧ್ರ - ಕರ್ನಾಟಕ ಸರ್ಕಾರಗಳು ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವ ವಾತಾವರಣ ಸೃಷ್ಟಿಸಬೇಕು. ಭಾವೋದ್ರೇಕಕ್ಕೆ ಎಡೆಮಾಡುವ ಚಳುವಳಿ, ಹೇಳಿಕೆಗಳನ್ನು ನಿಲ್ಲಿಸಬೇಕು.

(6) ಮಾತುಕತೆ ಮಾಡಲು ಸಾಧ್ಯವಿಲ್ಲದಿದ್ದರೆ ಹೆಚ್ಚುವರಿ ನೀರಿನ ಹಂಚಿಕೆಗೆ ಜಲವಿವಾದ ಆಯೋಗವನ್ನು ಈಗಲೇ ನೇಮಿಸಬೇಕು.

ಈ ನಿಲುವನ್ನು ಸುಪ್ರೀಂಕೋರ್ಟ್ ಇಂದು ಎತ್ತಿಹಿಡಿದಿದೆ. ಸುಪ್ರೀಂ ಕೋರ್ಟ್‌ನ ತೀರ್ಪು ಸ್ಪಷ್ಟವಾಗಿ ಈ ನಿರ್ದೇಶನಗಳನ್ನು ನೀಡಿದೆ.

ಅ) ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519.6 ಮೀಟರ್ ಎತ್ತರಕ್ಕೆ ಏರಿಸಬಹುದು.

ಆ) ಕರ್ನಾಟಕ ಹಾಗೂ ಆಂಧ್ರ ಸರ್ಕಾರಗಳೆರಡೂ ಬಚಾವತ್ ಆಯೋಗನೀಡಿದ ಅಂತಿಮ ತೀರ್ಪನ್ನು ಮೀರಿ ಕೈಗೊಂಡಿರುವ ಯೋಜನೆಗಳನ್ನು ಕೈಬಿಡಬೇಕು. (ಕರ್ನಾಟಕದ ವಿಷಯದಲ್ಲಿ ಆಲಮಟ್ಟಿ ಅಣೆಕಟ್ಟನ್ನು 524.5 ಮಿ.ಗೆ ಎತ್ತರಿಸುವುದು. ಆಂಧ್ರದಲ್ಲಿ ತೆಲುಗು ಗಂಗಾ, ಶ್ರೀಶೈಲ ಮೊದಲಾದ ಹಲವು ಯೋಜನೆಗಳು)

ಇ) ಬಚಾವತ್ ಆಯೋಗದ ವರದಿಯಲ್ಲಿ ಸೂಚಿಸಿರುವ ಸ್ಕೀಂ'ಬಿ'

ಜಿ.ಎನ್. ನಾಗರಾಜ್

ಬಚಾವತ್ ಆಯೋಗದ ತೀರ್ಪಲ್ಲ. ಆದ್ದರಿಂದ ಹೆಚ್ಚುವರಿ ನೀರನ್ನು ಒಂದು ಜಲವಿವಾದ ಆಯೋಗ ಮಾತ್ರವೇ ಹಂಚಬಹುದು. ಅದನ್ನು ಸುಪ್ರೀಂ ಕೋರ್ಟ್ ಮಾಡಬರುವುದಿಲ್ಲ.

ಹೆಚ್ಚುವರಿ ನೀರಿನ ಹಂಚಿಕೆ ಮತ್ತು 'ಬಿ' ಸ್ಕೀಂ

ಬಚಾವತ್ ಆಯೋಗ ತನ್ನ ತೀರ್ಪಿನಲ್ಲಿ ಕೃಷ್ಣಾದಲ್ಲಿ ಹರಿಯುವ ಶೇ. 75ರಷ್ಟು ಹೆಚ್ಚಬಹುದಾದ ನೀರನ್ನು 2060 ಟಿ.ಎಂ.ಸಿ. 'ಂದು ಗುರುತಿಸಿದೆ. ಹಾಗೂ ಅದನ್ನು ಮೂರು ರಾಜ್ಯಗಳಿಗೂ ಹಂಚಿಕೆ ಮಾಡಿದೆ. ಇದನ್ನು ಶೇ. 75ರಷ್ಟ ಡಿಪೆಂಡಬಿಲಿಟಿ ಮಟ್ಟ ಎಂದು ಗುರುತಿಸುತ್ತಾರೆ.

ಡಿಪೆಂಡಬಿಲಿಟಿ ಎಂದರೇನು?

ಕೃಷ್ಣಾ ನದಿಯಲ್ಲಿ ಮತ್ತು ಅದರ ಉಪನದಿಗಳಲ್ಲಿ ಹರಿಯುವ ನೀರಿನ ಪ್ರಮಾಣ ಒಂದೇ ತೆರನಾಗಿ ಇರುವುದಿಲ್ಲ. ಅದು ಒಂದು ಒಂದೊಂದು ವರ್ಷ ಒಂದೊಂದು ರೀತಿ ಇರುತದೆ. ಅದರಲ್ಲಿ ನೂರುವರ್ಷದಲ್ಲಿ 75ವರ್ಷಗಳು ಖಾತರಿಯಾಗಿ ಹರಿಯುವ ನೀರಿನ ಪ್ರಮಾಣವೇ ಶೇ. 75 ನೆಚ್ಚಿಕೆಮಟ್ಟ. ಈ ನೆಚ್ಚಿಕೆಯ ಮಟ್ಟದಲ್ಲಿ 2060 ಟಿ.ಎಂ.ಸಿ. ನೀರು ಹರಿಯುತ್ತದೆ. ಎಂದರೆ 25 ವರ್ಷಗಳಲ್ಲಿ ಈ ಪ್ರಮಾಣದ ನೀರು ಬರುವುದಿಲ್ಲ ಎಂದರ್ಥ.

ಶೇ. 50ರ ನೆಚ್ಚಿಕೆ ಮಟ್ಟವನ್ನು ತೆಗೆದುಕೊಂಡರೆ ಇನ್ನೂ ಹೆಚ್ಚು ನೀರು ಹರಿಯುತ್ತದೆ. 50 ವರ್ಷಗಳಲ್ಲಿ ಮಾತ್ರ ದೊರೆಯುವ ಈ ಹೆಚ್ಚಿನ ನೀರೇ ಹೆಚ್ಚುವರಿ ನೀರು. ಇದನ್ನು ಬಚಾವತ್ ಆಯೋಗ 330 ಟಿ.ಎಂ.ಸಿ. ಎಂದು ನಮೂದಿಸಿದೆ. ಈ ಹೆಚ್ಚುವರಿನೀರಿನ ಬಳಕೆಯಾಗಬೇಕಾದರೆ ಕೃಷ್ಣಾ ಪ್ರಾಧಿಕಾರವೊಂದನ್ನು ನೇಮಿಸಿದಾಗ ಮಾತ್ರ ಸಾಧ್ಯವೆಂದಿದೆ. ಈ ಹೆಚ್ಚುವರಿ ನೀರನ್ನು ಹಂಚುವುದು ಸುಲಭವಲ್ಲ. ಏಕೆಂದರೆ ಸುಮಾರು 50 ವರ್ಷಗಳಲ್ಲಿ ಈ ಪ್ರಮಾಣದ ನೀರು ಬಾರದೆ ಹೋದಾಗ ಈ ನಷ್ಟವನ್ನು ಯಾವರಾಜ್ಯ ಎಷ್ಟು ಹಂಚಿಕೊಳ್ಳಬೇಕು ಎಂಬುದು ಪ್ರತಿ ವರ್ಷದ ಕಗ್ಗಂಟಾಗಿ ಉದ್ರೇಕಗಳಿಗೆ ಎಡೆ ಮಾಡಿಕೊಡಬಹುದು. ಅದಕ್ಕಾಗಿ ಈ ಹಂಚಿಕೆಯನ್ನು ಸೂಚಿಸುವ ಕೆಲಸವನ್ನು ಜಲ ಆಯೋಗವೇ ನಿರ್ವಹಿಸಬೇಕೆಂದು ಸುಪ್ರಿಂ ಕೋರ್ಟ್ ತೀರ್ಪು ನೀಡಿದೆ.

ಆದ್ದರಿಂದ ಅಂತಹ ಆಯೋಗವನ್ನು ರಚಿಸಲು ಸಿದ್ಧವಿದೆ ಎಂದು. ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ತಿಳಿಸಿರುವುದರಿಂದ ಅಂತಹ ಆಯೋಗವನ್ನು ರಚಿಸಬೇಕೆಂದು ರಾಜ್ಯ ಸರ್ಕಾರಗಳು ಕೇಳಬಹುದು.

ಈ ಆಯೋಗದ ತೀರ್ಪು ಬರುವವರೆಗೆ ಹೆಚ್ಚುವರಿ ನೀರನ್ನು ಆಂಧ್ರ ಬಳಸಿಕೊಳ್ಳಬಹುದು. ಆದರೆ ಅದರ ಮೇಲೆ ಅದಕ್ಕೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ.

ಇದು ಬಚಾವತ್ ಆಯೋಗದ ತೀರ್ಪಿಗೆ ಅನುಗುಣವಾಗಿದೆ ಹಾಗೂ ಎಲ್ಲ ರಾಜ್ಯಗಳ ಹಿತವನ್ನೂ ರಕ್ಷಿಸುತ್ತದೆ. ಈ ತೀರ್ಪನ್ನು ರಾಜ್ಯ ಸರ್ಕಾರ ಸ್ವಾಗತಿಸಿದೆ ಎಂಬುದು ಒಳ್ಳೆಯದು. ಹಿಂದೆ ರಾಜ್ಯದ ನೀರಾವರಿ ಮಂತ್ರಿ ನಾಗೇಗೌಡರು ಯಕ್ಷಗಾನದ ಶೈಲಿಯಲ್ಲಿ "ನಾವು 524 ಮೀ. ಗೆ ಏರಿಸಿಯೇ ತೀರುತ್ತೇವೆ. ಅದರಲ್ಲಿ ಯಾವ ಅಡಚಣೆಯನ್ನೂ ಸಹಿಸುವುದಿಲ್ಲ" ಎಂದು ಮಾಡಿದ ಆರ್ಭಟದ ನಿಲುವಿನಿಂದ ಆಲಮಟ್ಟಿಯಲ್ಲಿ 173 ಟಿ.ಎಂ.ಸಿ. ನೀರನ್ನು ಶೇಖರಿಸುವುದಕ್ಕೆ ಅಡಚಣೆಯಾಗಿ ನಿಂತಿತ್ತು. ಕೇಂದ್ರದಲ್ಲಿ ಸಂಯುಕ್ತರಂಗ ಸರ್ಕಾರವಿದ್ದಾಗ ಆಲಮಟ್ಟಿ ಅಣೆಕಟ್ಟಿನ ಎತ್ತರದ ವಿವಾದ ಸ್ಫೋಟಗೊಂಡಾಗ ಸಂಯುಕ್ತರಂಗ ನಾಲ್ಕು ಜನ ಮುಖ್ಯ ಮಂತ್ರಿಗಳ ಸಮಿತಿಯೊಂದನ್ನು ಜ್ಯೋತಿಬಸುರವರ ನೇತೃತ್ವದಲ್ಲಿ ನೇಮಿಸಿತು. ಈ ಸಮಿತಿ ನೇಮಿಸಿದ ತಜ್ಞರ ಉಪಸಮಿತಿಯೊಂದು ಈಗ ಸುಪ್ರೀಂ ಕೋರ್ಟ್ ನೀಡಿದ ತೀರ್ಮಾನಗಳಿಗೇ ಬಂದಿತ್ತು. ಆದರೆ ರಾಜ್ಯ ಸರ್ಕಾರ ಅಂದು ಈ ನಿಲುವನ್ನು ಒಪ್ಪದೇ ಇಲ್ಲಿಯವರೆಗೆ ಆಲಮಟ್ಟಿ ಅಣೆಕಟ್ಟಿನಲ್ಲಿ ಹೆಚ್ಚಿನ ನೀರನ್ನು ಸಂಗ್ರಹಿಸಲು ಅದರಿಂದ ಈ 3-4 ವರ್ಷಗಳಲ್ಲಿ ಹೆಚ್ಚಿನ ಪ್ರದೇಶ ನೀರಾವರಿಯಾಗಲು ಇದ್ದ ಅವಕಾಶವನ್ನು ಕಳೆದುಕೊಂಡಂತಾಗಿತ್ತು.

ಆದರೆ ಈ ತೀರ್ಪಿನ ವಿರುದ್ಧ ಕೆಲ ಅವಕಾಶ ರಹಿತ ರಾಜಕಾರಣಿಗಳು ಹಾಗೂ ಬಿಜಾಪುರ ನೀರಾವರಿ ಹೋರಾಟ ಸಮಿತಿ ಆರ್ಭಟಿಸಲಾರಂಭಿಸಿವೆ. ರಸ್ತಾರೋಕೋದಂತಹ ಕ್ರಮಗಳಿಗೆ ಕೈ ಹಾಕಿದ್ದಾರೆ. ವಿಧಾನ ಸಭೆಯಲ್ಲಿ ವಿರೋಧ ಪಕ್ಷಗಳು ಇದನ್ನು ರಾಜಕೀಯವಾಗಿ ಬಳಸಿಕೊಳ್ಳುವುದು ಹೇಗೆ ಎಂದು ಲೆಕ್ಕಹಾಕುವಂತಿದೆ. ಈ ಒತ್ತಡಗಳಿಗೆ ಒಳಗಾಗಿ ರಾಜ್ಯ ಸರ್ಕಾರ ಜನರ ಉದ್ರೇಕವನ್ನು ಬಡಿದೆಬ್ಬಿಸುವ ಕೃತ್ಯಕ್ಕೆ ಕೈಹಾಕಬಾರದು. ಹೆಚ್ಚುವರಿ ನೀರಿನ ಹಂಚಿಕೆಗೆ ಸಂಬಂಧಿಸಿ ಕೇಂದ್ರ ಸರ್ಕಾರಕ್ಕೆ ದೂರು ನೀಡಲು ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರವೂ ಕೂಡ ತಡಮಾಡದೆ ಆಯೋಗವನ್ನು ನೇಮಿಸಿ ಬೇಗನೆ ಹೆಚ್ಚುವರಿ ನೀರನ್ನು ಹಂಚುವಂತೆ ಕ್ರಮಕೈಗೊಳ್ಳಬೇಕು. ಈ ಸಂದರ್ಭದಲ್ಲಿ ತೆಲುಗು ದೇಶಂನ ಎಂ.ಪಿಗಳ ಬೆಂಬಲ ಮಾತ್ರ ಕಣ್ಣಿನ ಮುಂದಿದ್ದು ಕೇಂದ್ರದ ಬಿಜೆಪಿ ಕೂಟ ಸರ್ಕಾರ ಆಯೋಗ ರಚನೆಯನ್ನು ತಡಮಾಡಬಾರದು. ಇದರಿಂದ ವಿದ್ಯುತ್ ತಯಾರಿಕೆ ಹಾಗೂ ಅದರಿಂದ ರಾಜ್ಯದ ಎತ್ತು ನೀರಾವರಿ (ಲಿಫ್ಟ್ ಇರಿಗೇಷನ್) ಯೋಜನೆಗಳಿಗೆ ಅಡ್ಡಿಯಾಗುವ ಬಗ್ಗೆ ರಾಜ್ಯದ ಜನತೆಗೆ ಇರುವ ಆತಂಕ ನಿವಾರಣೆಯಾಗುತ್ತದೆ. ಆಂಧ್ರದ ಜನತೆಯ ಆತಂಕವನ್ನು ನಿವಾರಿಸಿ ಆಲಮಟ್ಟಿಯನ್ನು 524 ಮೀಟರ್‌ಗೆ ಏರಿಸಲು ಹಾಗೂ ಹೆಚ್ಚುವರಿ ನೀರಿನ ಪಾಲನ್ನು ಕರ್ನಾಟಕ ಉಪಯೋಗಿಸಲು ಅವಕಾಶ ನೀಡಿದರೆ ರಾಜ್ಯದ ಜನತೆಗೆ ಸಂತೋಷವಾಗುವುದು ಮಾತ್ರವಲ್ಲ ದೇಶದ ಸಂಪತ್ತು ಹೆಚ್ಚುತ್ತದೆ. ಈ ದೃಷ್ಟಿಯಿಂದ ದೇಶದ ಸರ್ಕಾರ ಕಾರ್ಯನಿರ್ವಹಿಸಬೇಕು. ○

ಮೇ ದಿನ, 2000

ಮೇ ದಿನ ಜಗತ್ತೆಲ್ಲಾ ದುಡಿಯುವ ವರ್ಗದ ಐಕ್ಯಭಾವದ ಸಂಕೇತ. ಒಟ್ಟುಗೂಡಿ ನಡೆಸಿದ, ನಡೆಸಬೇಕಾದ ಮಹಾ ಹೋರಾಟಗಳ ಸಂಕೇತ. ಜಗತ್ತಿನೆಲ್ಲಾ ಬಂಡವಾಳಶಾಹಿಯ ಅಗಾಧ ಶಕ್ತಿಯನ್ನು, ಜಗತ್ತಿನೆಲ್ಲಾ ದುಡಿಯುವ ವರ್ಗ ಏಕೀಭವಿಸಿ ಎದುರಿಸುವ ಮಹಾ ಹೋರಾಟಗಳ ಅಡಿಪಾಯವಿದು.

ಜಗತ್ತಿನೆಲ್ಲೆಡೆಯಲ್ಲಿಯೂ ಮೇ ದಿನಾಚರಣೆಯ ಆರಂಭವೇ ಅಲ್ಲಿನ ಕಾರ್ಮಿಕ ವರ್ಗದ ಪ್ರಜ್ಞಾವಂತಿಕೆಯ ಆರಂಭವನ್ನು ಸೂಚಿಸುತ್ತದೆ. ಕಾರ್ಮಿಕ ವರ್ಗದ ಇತಿಹಾಸದ ಹೆಜ್ಜೆ

ತಂದುಕೊಡುವ ಒಂದು ಕಿರು ಪ್ರಯತ್ನಗಳಾಗಿವೆ ಇಲ್ಲಿನ ಕೆಲವು ಬರಹಗಳು. ಆಳುವ ವರ್ಗದ ದಬ್ಬಾಳಿಕೆ ಪ್ರತಿಬಂಧಗಳನ್ನು ತಪ್ಪಿಸಿಕೊಳ್ಳಲು ಹಲವು ಹತ್ತು ಮೈಲಿ ದೂರ ಪ್ರಯಾಣ ಮಾಡಿ **ಕಾಡಿನಲ್ಲಿ ಆಚರಿಸಿದ ಮೇ ದಿನದ ನೆನಪು** ನಮ್ಮದೇ ರಾಜ್ಯದಲ್ಲಿ ರಾಜಶಾಹೀ ಸರ್ಕಾರದ ನಿರ್ಬಂಧಗಳನ್ನೆದುರಿಸಿ **ಮೇ ದಿನಾಚರಣೆ ಮಾಡಿ ಪ್ರಾಣವನ್ನೇ ಬಲಿಕೊಟ್ಟ** - ಚಿಕಾಗೋದ ಕಾರ್ಮಿಕರ ಬಲಿದಾನವನ್ನು ನೆನಪಿಸುವ **ಘಟನೆ**ಯ ವಿವರ, ಪ್ರತಿ ಮೇ ದಿನ ಭಾಗವಹಿಸಿದವರಲ್ಲಿ ಮೂಡಿಸುವ ಅಂತರ್‍ರಾಷ್ಟ್ರೀಯ ಸೌಹಾರ್ದತೆಯ ಬೀಜ ಮರವಾಗಿ ಹೂವಾಗಿ ನಮ್ಮ ಕೈಯಲ್ಲಿರುವ **ನನ್ನೊಳಗಿನ ಹಾಡು ಕ್ಯೂಬಾ**ದಿಂದ ಆಯ್ದ ಭಾಗ '**ಒಂದು**

ಆರಂಭದ ದಿನಗಳು. ಇವು ಕೆಲವು.

ಹಿಂದಿನ ಮೇ ಸಂಚಿಕೆಯ ಸಂದರ್ಭದಲ್ಲಿ ಅಸ್ಪೃಶ್ಯತೆಯ ಬಗ್ಗೆ ಅರಿತುಕೊಳ್ಳುವ ಪ್ರಯತ್ನ ಮಾಡಿದಂತೆ ಈಸಂಚಿಕೆಯಲ್ಲಿ **ಮೇ ದಿನ ಮತ್ತು ಮಹಿಳೆ** ನಮ್ಮ ಪ್ರಯತ್ನದ ಕೇಂದ್ರ. ಇದಕ್ಕೆ ಸಂಬಂಧಿಸಿದ ಎರಡು ಬರಹಗಳು ಜಗತ್ತಿನ ಪ್ರಥಮ **ಶೋಷಿತೆ** ಮಹಿಳೆ ಕರ್ನಾಟಕದಲ್ಲಿ ಅನುಭವಿಸುತ್ತಿರುವುದನ್ನು ಬಣ್ಣಿಸಿದೆ.

ಜೊತೆಗೆ ಭಾರತದ ದುಡಿಯುವ ಜನಸಮೂಹ ಎದುರಿಸುತ್ತಿರುವ **ಬೆಲೆ ಏರಿಕೆ**ಯ ವಿರುದ್ಧ ಹೋರಾಟದ ಅಲೆಯ ವಿವರ. ಕರ್ನಾಟಕದಲ್ಲಿ, ಕೇರಳದಲ್ಲಿ ಕಾಂಗ್ರೆಸ್ ಜನತಾದಳಗಳನ್ನು ಈ ಚಳುವಳಿ ಸೆಳೆದದ್ದು, ಇಲ್ಲಿ ಚಿತ್ರಿತವಾಗಿದೆ.

ಜಾಗತಿಕಮಟ್ಟದಲ್ಲಿ ಬಂಡವಾಳಶಾಹಿಗೆ ಉಂಟಾದ ತೀವ್ರ ನಡುಕ - **ಶೇರು ಮಾರುಕಟ್ಟೆಯ ಕುಸಿತ**ವನ್ನು, ವಿಶ್ಲೇಷಿಸುವ ಲೇಖನ 'ಐಕ್ಯರಂಗ' ದ ಹೆಮ್ಮೆಯ ಕೊಡುಗೆ.

- ಸಂಪಾದಕ

ಕರ್ನಾಟಕದಲ್ಲಿ ರಕ್ತದೋಕುಳಿಯೊಡನೆ ಮೇ ದಿನಾಚರಣೆ

1886ರಲ್ಲಿ ಮೊದಲ ಬಾರಿ ಮೇ ದಿನಾಚರಣೆ ಮಾಡಿದಂದು ಚಿಕಾಗೋದಲ್ಲಿ ನಡೆದ ಘಟನೆಯನ್ನೇ ನೆನಪಿಸುವಂತಹ ಘೋರ ಹತ್ಯೆ ಕರ್ನಾಟಕದ ಭದ್ರಾವತಿಯಲ್ಲಿ 1942ರ ಮೇ ಮೂರರಂದು ನಡೆದಿದೆ.

ನಾಜೀ ದೈತ್ಯರು ಇಡೀ ಯೂರೋಪನ್ನು ತಮ್ಮ ಬೂಟುಗಾಲಿನಿಂದ ಒರೆಸಿ ಅಡಿಯಾಳಾಗಿಸಿಕೊಂಡು ಕಾರ್ಮಿಕ ವರ್ಗದ ದೇಶವಾಗಿದ್ದ ಸೋವಿಯೆತ್ ಒಕ್ಕೂಟದ ಕಡೆಗೆ ನುಗ್ಗುತ್ತಿದ್ದ ಕಾಲ. ಈ ರಾಕ್ಷಸ ಧಾಳಿಗೆ ಕೆಂಪು ಸೈನ್ಯ ವೀರಾವೇಶದಿಂದ ಹೋರಾಡುತ್ತ ಹಿಮ್ಮೆಟ್ಟುತ್ತಿದ್ದ ಕಾಲ.

ಕರ್ನಾಟಕದ ಉಕ್ಕಿನ ನೆಲೆಯಾದ ಭದ್ರಾವತಿಯ ಕಾರ್ಮಿಕರಿಗೆ ತಮ್ಮದೇ ಜೀವಕ್ಕೆ ಪೆಟ್ಟು ಬಿದ್ದಿದೆಯೆಂದೆನಿಸಿರಬೇಕು. ಅಂದಿನ ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷರ ಆಡಳಿತಕ್ಕಿಂತ ಕ್ರೂರವಾಗಿ ಕಾರ್ಮಿಕರನ್ನು ನಡೆಸಿಕೊಳ್ಳುತ್ತಿದ್ದುದನ್ನು, ಸಂಘಟನೆಯ ಹಕ್ಕು, ಸಭೆ ನಡೆಸುವ ಹಕ್ಕುಗಳನ್ನು ನಿರಾಕರಿಸುತ್ತಿದ್ದುದನ್ನು ನೋಡಿ ನೋಡಿ ಮನಸ್ಸು ರೊಚ್ಚಿಗೆದ್ದಿರಬೇಕು.

ಅಲ್ಲಿಯ ಕಾರ್ಮಿಕ ಸಂಘ ಭದ್ರಾವತಿ ಲೇಬರ್ ಅಸೋಸಿಯೇಷನ್ ನಾಯಕರು ಮೇ ದಿನವನ್ನಾಚರಿಸುತ್ತೇವೆ. ಅದಕ್ಕೆ ಅವಕಾಶ ಕೊಡಿ. ಸಭೆ ಮೆರವಣಿಗೆಗಳನ್ನು ನಡೆಸಲು ಇರುವ ಪ್ರತಿಬಂಧಕಾಜ್ಞೆಯನ್ನು ಹಿಂತೆಗೆಯಿರಿ ಎಂದು ಅಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ವಿನಂತಿಸಿದರು. ಆದರೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಆ ಬಗ್ಗೆ ಚಕಾರವೆತ್ತಲಿಲ್ಲ. ನಂತರ ಮೈಸೂರು ಸಂಸ್ಥಾನದ ಸರ್ಕಾರಕ್ಕೆ ಮನವಿ ಮಾಡಿದರು. ಅದಕ್ಕೂ ಉತ್ತರವಿಲ್ಲ. ಕಾರ್ಮಿಕರ ಸರ್ವಸದಸ್ಯರ ಸಭೆ ನಡೆಸಿ ಸರ್ಕಾರದ ದಬ್ಬಾಳಿಕೆಗೆ ಅಂಜದೆ ಮೇ ದಿನದ ಮೆರವಣಿಗೆಗೆ ಸಭೆ ನಡೆಸಲು ಅನುಮತಿ ಕೇಳುವ ನಿರ್ಣಯವೊಂದನ್ನು ಪಾಸು ಮಾಡಿದರು. ಸರ್ಕಾರಕ್ಕೆ ತಮ್ಮೆಲ್ಲರ ಈ ಒಟ್ಟು ಬಯಕೆಯನ್ನು ನಿವೇದಿಸಿದರು.

ಆದರೆ ಕಲ್ಲು ಮನಸ್ಸಿನ ಸರ್ಕಾರ ಅನುಮತಿ ನೀಡಲೇ ಇಲ್ಲ. ಇದರಿಂದ ಕುದಿದುಹೋದ ಕಾರ್ಮಿಕರು, ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಮೂಲಭೂತ ಹಕ್ಕುಗಳ ಮೇಲಿನ ಈ ನಿರ್ದಯ ಧಾಳಿಯನ್ನು ಎದುರಿಸಿ ಮೇ ದಿನಾಚರಣೆಯನ್ನು ಆಚರಿಸುವುದೇ ಸರಿ. ಏನೇ ಬರಲಿ ಎದುರಿಸುತ್ತೇವೆ ಎಂದು ತೀರ್ಮಾನಿಸಿದರು.

ಮೇ ದಿನದಂದು ಎಲ್ಲಾ ಕಾರ್ಮಿಕರೂ ಸೇರಿ ಶಾಂತವಾಗಿ ಆದರೆ ಶಿಸ್ತಿನಿಂದ ಮೆರವಣಿಗೆಯನ್ನು ಆಚರಿಸಿದರು. ಸ್ಥಳೀಯ ಅಧಿಕಾರಿಗಳ, ಸಂಸ್ಥಾನ ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಿದರು. ಈ ಶಾಂತಿಯುತ ಮೇ ದಿನಾಚರಣೆಯಿಂದ, ಕಾರ್ಮಿಕರ ಐಕ್ಯ ಪ್ರತಿಭಟನೆಯಿಂದ ಬೆಚ್ಚಿ ಬಿದ್ದ ಸರ್ಕಾರ ಅಂದು ಏನೂ ಮಾಡಲಿಲ್ಲ. ಆದರೆ ಮೂರನೇ ತಾರೀಖು ನೇರ ಕಾರ್ಖಾನೆಗೆ ಹೋಗಿ ದುಡಿಯುತ್ತಿದ್ದ ಕಾರ್ಮಿಕರ ಮಧ್ಯದಿಂದ ಕಾರ್ಮಿಕ ಸಂಘದ ಮೂರು ಜನ ಪದಾಧಿಕಾರಿಗಳನ್ನೂ ಸಂಘದ ಕಾರ್ಯದರ್ಶಿ ಪುಟ್ಟಯ್ಯನವರನ್ನೂ ಬಂಧಿಸಿದರು.

ಇವರನ್ನು ಪೋಲೀಸ್ ಠಾಣೆಗೆ ಕರೆದೊಯ್ಯುತ್ತಿದ್ದಂತೆ ಇಡೀ ಕಾರ್ಖಾನೆಯೇ ಅವರನ್ನು ಹಿಂಬಾಲಿಸಿತು. ಠಾಣೆಯನ್ನು ಸೇರುವ ವೇಳೆಗೆ 3000-4000 ಕಾರ್ಮಿಕರು ಜಮಾಯಿಸಿದ್ದರು. ಈ ಕಾರ್ಮಿಕ ಸಮುದಾಯ ಬಯಸಿದ್ದಿಷ್ಟೇ, ತಮ್ಮ ಸಂಘದ ನಾಯಕರಿಗೆ ಹೂ ಹಾರಗಳನ್ನು ಹಾಕಿ ಗೌರವಿಸಬೇಕು. ಇದನ್ನು ಪೋಲೀಸ್ ಅಧಿಕಾರಿಗಳು ಒಪ್ಪಿಬಿಟ್ಟರೆ ಅವರ ಘನತೆಗೆ ಕುಂದು ಬರುವುದಿಲ್ಲವೆ? ಖಂಡ ತುಂಡವಾಗಿ ನಿರಾಕರಿಸಿದರು ಮಾತ್ರವಲ್ಲ, ಲಾಠಿಚಾರ್ಜು ಮಾಡಿದರು. ಕಾರ್ಮಿಕರು ಇದನ್ನು ಎದುರಿಸಿ ನಿಂತಾಗ ಹಲವಾರು ಸುತ್ತು ಗುಂಡು ಹಾರಿಸಿದರು. ಈ ಗುಂಡೇಟಿನಿಂದ ಇಬ್ಬರು ಕಾರ್ಮಿಕರು ಹಾಗೂ ಮೂರು ವರ್ಷದ ಮಗು ಸರೋಜಮ್ಮ ಮಡಿದರು.

ಈ ಘಟನೆಯನ್ನು ಅಂದಿನ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ನಾಯಕ ಕೆ.ಸಿ. ರೆಡ್ಡಿ ಪ್ರಸ್ತಾಪಿಸಿ ವಿಶ್ವದ ಯಾವುದೇ ರಾಷ್ಟ್ರದಲ್ಲಿ ಕಾರ್ಮಿಕರು ಮೇ ದಿನಾಚರಣೆ ಮಾಡಲು ಅಡ್ಡಿಯಿಲ್ಲ. ಸೋವಿಯೆತ್ ಒಕ್ಕೂಟದಲ್ಲಿ ಮೇ ದಿನಾಚರಣೆಗೆ ವಿಶೇಷ ಮಹತ್ವ ನೀಡಿ ಆಚರಿಸುತ್ತಿದೆ ಎಂದು ಹೇಳಿ ಮೈಸೂರು ಸಂಸ್ಥಾನದ ದಬ್ಬಾಳಿಕೆಯನ್ನು ಖಂಡಿಸಿದರು.

- ಜಿ.ಎನ್. ನಾಗರಾಜ್.

ಕರ್ನಾಟಕದ ಕಾರ್ಮಿಕ ಚಳುವಳಿ

ಆರಂಭದ ದಿನಗಳು

ಕರ್ನಾಟಕದ ಟ್ರೇಡ್ ಯೂನಿಯನ್ ಚಳುವಳಿಯನ್ನು ವಿಷದೀಕರಿಸುವುದು ಸ್ವಲ್ಪ ಕಷ್ಟ. ಅದರ ಮೂಲ ಮತ್ತು ಬೆಳವಣಿಗೆಗಳು ಒಂದೇ ತರನಾಗಿರುವುದಿಲ್ಲ. ಒಂದೊಂದು ಕೈಗಾರಿಕೆಯಲ್ಲಿ ಒಂದೊಂದು ತರವಾಗಿದೆ ಮತ್ತು ಬೇರೆ ಬೇರೆ ಜಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಬೆಳೆದಿವೆ. ಮುಖ್ಯವಾಗಿ ಇವುಗಳನ್ನು ನಾಲ್ಕು ಹಂತಗಳಲ್ಲಿ ವಿಂಗಡಿಸಬಹುದು.

1. 2ನೇ ಮಹಾಯುದ್ಧ ಆರಂಭವಾಗುವವರೆಗೆ-1939 ರವರೆಗೆ.
2. 1939 ರಿಂದ ಸ್ವಾತಂತ್ರ್ಯ ಬರುವವರೆಗೆ
3. 1947 ರ ನಂತರದ ಕಾಲಾವಧಿ ಎ.ಐ.ಟಿ.ಯು.ಸಿ. ಹಾಗೂ ಕೆ.ಪಿ.ಟಿ.ಯು.ಸಿ. ಸ್ಥಾಪನೆ
4. 1970 ರಲ್ಲಿ ಸಿ.ಐ.ಟಿ.ಯು ಸ್ಥಾಪನೆ.

ಮೊದಲ ಹಂತದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಸಾಮಾನ್ಯವಾಗಿ ಎಲ್ಲ ಕಾರ್ಮಿಕ ಸಂಘಗಳೂ ಎ.ಐ.ಟಿ.ಯು.ಸಿ. ಅಂದರೆ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂಬ ಸಂಸ್ಥೆಯಲ್ಲಿದ್ದುವು. ಅದರ ಮುಂಚೆ 1928 ರಿಂದ 1935ರ ತನಕ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಕೆಲವು ಸಂಘಟನೆಗಳು ರೆಡ್ ಟ್ರೇಡ್ ಯೂನಿಯನ್ ನಾಯಕತ್ವವನ್ನು ತೆಗೆದು ನಮ್ಮ ನೇತೃತ್ವ ತರಲು ಸಾಧ್ಯವಾಯಿತು.

ಹಳೆಯ ಮೈಸೂರು ರಾಜ್ಯದ ವೈಶಿಷ್ಟ್ಯವೆಂದರೆ ಇಲ್ಲಿ ಕೈಗಾರಿಕಾವಾರಾಗಿ ಯೂನಿಯನ್‌ಗಳ ಬದಲು ಒಂದೊಂದು ಕಾರ್ಖಾನೆಗೆ ಒಂದೊಂದು ಯೂನಿಯನ್‌ಗಳು ಆಗಿವೆ. ಇದಕ್ಕೆ ಮೈಸೂರು ಲೇಬರ್ ಆಕ್ಟ್ ಮುಖ್ಯ ಕಾರಣವಾಗಿದೆ. ಹೀಗಾಗಿ ಕೋಲಾರದಲ್ಲಿ ನಾಲ್ಕು ಚಿನ್ನದ ಗಣಿಗಳಿದ್ದು ನಾಲ್ಕು ಸಂಘಗಳಾದುವು ಬೆಂಗಳೂರಿನಲ್ಲಿ ಮೂರು ಟೆಕ್ಸ್‌ಟೈಲ್ ಮಿಲ್‌ಗಳಿದ್ದು ಮೂರು ಯೂನಿಯನ್‌ಗಳಾದುವು. ಹೀಗೆ ಕಾರ್ಮಿಕ ಸಂಘಟನೆಗಳು ಬಂದರೂ ಅವರ ಜಾಗೃತಿಯು ಕಾರ್ಖಾನೆಯ ಮಟ್ಟದಲ್ಲಿಯೇ ಇರುವಂತೆ ಸರ್ಕಾರದ ಧೋರಣೆಯಿಂದ ಪರಿಣಮಿಸಿತು. ಇದು ಇನ್ನೂ ಆಳವಾಗಿದೆಯೆಂದು ನಾವು ನೋಡುತ್ತೇವೆ.

1939-1940 ರಲ್ಲಿ ಬೆಂಗಳೂರಿನ ಬಟ್ಟೆ ಗಿರಣಿಗಳಲ್ಲಿ ಮೂರು ಸಂಘಗಳು ಬಂದುವು. ಇವು ಕಾಂಗ್ರೆಸ್ ನೇತೃತ್ವದ ಸಂಘಗಳು ಮತ್ತು ಯೂನಿಯನ್‌ಗಳಿಗೂ ಕಾಂಗ್ರೆಸ್ ಧ್ವಜಗಳಿದ್ದುವು. ಭದ್ರಾವತಿಯಲ್ಲೂ ಕಾಂಗ್ರೆಸ್ ನಾಯಕತ್ವದ ಯೂನಿಯನ್ ಇದ್ದರೂ ಅವರು ಕೆಂಪು ಧ್ವಜವನ್ನು ಹಾರಿಸಿದ್ದರು. ಆದರೆ ಅದರಲ್ಲಿ ಕುಡುಗೋಲು ಸುತ್ತಿಗೆ ಚಿಹ್ನೆ ಇರಲಿಲ್ಲ.

1942 ರಲ್ಲಿ ಪ್ರಥಮ ಬಾರಿಗೆ ಕುಡುಗೋಲು ಸುತ್ತಿಗೆ ಚಿಹ್ನೆಯ ಕೆಂಪು ಧ್ವಜವು ಬೆಂಗಳೂರು ಪಕ್ಕದ ಚೆಟ್ಟಿ ಪಾಳ್ಯದ ಬಟ್ಟೆ ಗಿರಣಿ ಯೂನಿಯನ್ ಪಾರ್ಟಿ ನಾಯಕರು ಸ್ಥಾಪಿಸಿದಾಗ ಬಂತು. ಅದರ ನಂತರ 1943 ರಲ್ಲಿ ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಮೈಸೂರು ಮೈನ್ ವರ್ಕರ್ಸ್ ಯೂನಿಯನ್‌ನಲ್ಲಿ ನಾವು ಕಾಂಗ್ರೆಸ್ ನಾಯಕರನ್ನು ಸೋಲಿಸಿ ನಮ್ಮ ನಾಯಕತ್ವದಲ್ಲಿ ಕೆಂಪು ಧ್ವಜದಡಿಯಲ್ಲಿ ಸಂಘಟನೆ ಕಟ್ಟಿದೆವು. ನಂತರ ಚಾಂಪಿಯನ್ ಯೂನಿಯನ್‌ನಲ್ಲೂ ನಮ್ಮ ಧ್ವಜ ಹಾರಾಡಿತು. ಇದರಲ್ಲಿ ಒಂದು ಗಮನಾರ್ಹ ಅಂಶವೆಂದರೆ ಈ ಚಾಂಪಿಯನ್ ಯೂನಿಯನ್ ಅಧ್ಯಕ್ಷರಾಗಿ ಕಾಂಗ್ರೆಸ್ ನಾಯಕರಾದ ದಿವಂಗತ ಕೆ.ಸಿ. ರೆಡ್ಡಿ ಯವರಿದ್ದು ಅವರು ಯಾವತ್ತೂ ನಮ್ಮ ವಿರುದ್ಧ ನಡೆಯದಿದ್ದುದಲ್ಲದೆ ಕಾರ್ಮಿಕ ಹೋರಾಟಗಳಲ್ಲೂ ಸಹಕರಿಸುತ್ತಿದ್ದರು. ನಾವು ಈ ಎರಡು ಯೂನಿಯನ್‌ಗಳನ್ನು ವರ್ಗ ಹೋರಾಟದ ಧೋರಣೆಯಲ್ಲಿ ನಡೆಸಿದ ಪರಿಣಾಮವಾಗಿ ನಮ್ಮ ಪ್ರಭಾವ ಚಿನ್ನದ ಗಣಿಯ ಎಲ್ಲ ಕಾರ್ಮಿಕರ ಮೇಲೂ ಬೀರಲು ಸಾಧ್ಯವಾಯಿತು.

ನಮ್ಮ ಪಾರ್ಟಿಯೂ ಕಾಂಗ್ರೆಸ್ ನಾಯಕತ್ವದಲ್ಲಿದ್ದ ಸಂಘಗಳಲ್ಲಿ ಕೆಲಸ ಮಾಡಿದ್ದಲ್ಲದೆ ನಮ್ಮ ಸ್ವತಂತ್ರ ಸಂಘಟನೆಗಳನ್ನು ಕಟ್ಟಲು ಪ್ರಯತ್ನಿಸಿತು. ಬೀಡಿ ಕಾರ್ಮಿಕರ ಸಂಘಟನೆಗಳು ಬಿಜಾಪುರ, ಹುಬ್ಬಳ್ಳಿ, ಧಾರವಾಡ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಬೆಳೆದವು. ನಗರ ಸಭೆಗಳ ಕಾರ್ಮಿಕರ ಸಂಘಟನೆಯನ್ನು ರಾಜ್ಯದ ಅನೇಕ ಭಾಗಗಳಲ್ಲಿ ಬೆಂಗಳೂರು, ಕೆ.ಜಿ.ಎಫ್., ತುಮಕೂರು, ಮೈಸೂರು, ಬಿಜಾಪುರ ಮಂಗಳೂರು ಮುಂತಾದ ಕಡೆಗಳಲ್ಲಿ ಕಟ್ಟಲಾಯಿತು. ಬೆಂಗಳೂರಿನ ಚರ್ಮ ಹದಮಾಡುವ (ಟ್ಯಾನರಿ) ಕೆಲಸಗಾರರ ಸಂಘಟನೆಯು ಚೆನ್ನಾಗಿ ನಡೆದಿತ್ತು.

ಸುಮಾರು 1945 ರಲ್ಲಿ ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ನಮ್ಮ ನೇತೃತ್ವದಲ್ಲಿ ಕಾರ್ಮಿಕ ಸಂಘಟನೆಯಾಯಿತು. ದಾವಣಗೆರೆಯಲ್ಲೂ ಟೆಕ್ಸ್‌ಟೈಲ್ ಕೆಲಸಗಾರರ ಸಂಘಟನೆ ಆರಂಭವಾಯಿತು. ಹರಿಹರದ ಸಂಘಟನೆಯಲ್ಲಿ ಹೆಚ್ಚು ಸಮಸ್ಯೆಗಳಿರಲಿಲ್ಲ. ಆದರೆ ದಾವಣಗೆರೆಯಲ್ಲಿ ಎಲ್ಲ ರೀತಿಯ ದಬ್ಬಾಳಿಕೆಯನ್ನೆದುರಿಸಬೇಕಾಯಿತು.

ಮೂರನೆಯ ಹಂತದಲ್ಲಿ ಅಂದರೆ ಸ್ವಾತಂತ್ರ್ಯಾ ನಂತರದಲ್ಲಿ ನಮ್ಮ ನೇತೃತ್ವದ ಸಂಘಟನೆಗಳು ಪ್ರಬಲವಾಗಿ ಬೆಳೆದವು. ಈ ಘಟ್ಟದಲ್ಲಿ ಮೈಸೂರು ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂಬ ಸಂಸ್ಥೆಯನ್ನು ರಚಿಸಿದೆವು. ಅದರ ಅಧ್ಯಕ್ಷರಾಗಿ ಕೆ.ಜಿ.ಎಫ್.ನ ಕಾರ್ಮಿಕ ನಾಯಕರಾದ ವಾಸನ್‌ರಿದ್ದರು. ಎಂ.ಸಿ. ನರಸಿಂಹನ್‌ರವರು ಕಾರ್ಯದರ್ಶಿಯಾಗಿದ್ದರು. ಬೆಳಗಾಂ ಜಿಲ್ಲೆಯ ಗೋಕಾಕ್‌ನಿಂದ ಕೋಲಾರ ಚಿನ್ನದ ಗಣಿಯವರೆಗೂ ಮಂಗಳೂರಿಂದ ಮೈಸೂರುವರೆಗೂ ಎಲ್ಲ ಜಿಲ್ಲೆಗಳಲ್ಲೂ ಬೆಳೆದುದಲ್ಲದೆ ಹೈದರಾಬಾದ್ ಪ್ರದೇಶದ ವಿಲೀನವಾಗಿ ಏಕೀಕೃತ ಕರ್ನಾಟಕ ಅಸ್ತಿತ್ವಕ್ಕೆ ಬಂದಾಗ ಸುಮಾರು 1958 ರಲ್ಲಿ ಕೆ.ಪಿ.ಟಿ.ಯು.ಸಿ. ರಚನೆಯಾಗಿ ಕೆಲಸ ಮುಂದುವರೆಯಿತು.

ಕರ್ನಾಟಕದ ಕಾರ್ಮಿಕ ಚಳುವಳಿಯಲ್ಲಿ ಸ್ವಾತಂತ್ರ್ಯಕ್ಕೆ ಮೊದಲೇ ಪ್ರವೇಶಿಸಿದ, ಕಮ್ಯುನಿಸ್ಟ್ ಚಳುವಳಿಯ ಆರಂಭದ ದಿನಗಳಲ್ಲಿ ಎರಡೂವರೆ ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕ ರಾಜ್ಯದ ಕಾರ್ಯದರ್ಶಿಯಾಗಿದ್ದ ಕಾಂ|| ಎನ್.ಎಲ್.ಉಪಾಧ್ಯಾಯರವರು ಈ ಕಾರ್ಮಿಕ ಚಳುವಳಿಯ ವಿವಿಧ ಹಂತಗಳನ್ನು ವಿವರಿಸುತ್ತಾರೆ.

ಕಾಂಗ್ರೆಸ್ ಸಂಸ್ಥೆಯಲ್ಲಿದ್ದರೂ 1936ರ ಬಳಿಕ ಎಲ್ಲರೂ ಎ.ಐ.ಟಿ.ಯು.ಸಿಯನ್ನು ಅಂಗೀಕರಿಸಿದ್ದರು. ಅದರಲ್ಲಿ ಸುಧಾರಣಾವಾದಿಗಳು ಬಲವಾಗಿದ್ದರೂ ಕಮ್ಯೂನಿಸ್ಟರಿಗೆ ಅವರೊಡನೆ ಘರ್ಷಣೆಗಳು ನಡೆಯುತ್ತಿದ್ದರೂ ಕೊನೆಗೆ ಸರ್ವ ಸಮ್ಮತವಾದ ಒಮ್ಮತದ ತೀರ್ಮಾನಗಳಾಗುತ್ತಿದ್ದುವು. ಈ ಸಮಯದಲ್ಲಿ ಟ್ರೇಡ್ ಯೂನಿಯನ್‌ಗಳು ಬೆಳೆಯಲು ಉತ್ತಮ ಅವಕಾಶಗಳು ಒದಗಿದವು. ಕರ್ನಾಟಕದಲ್ಲೂ ಇದನ್ನು ನೋಡಬಹುದು.

ನಮ್ಮ ರಾಜ್ಯವನ್ನು ನೋಡುವಾಗ ದ.ಕನ್ನಡ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಬೀಡಿ, ಕೈಮಗ್ಗ ಕಾರ್ಮಿಕರ ಸಂಘಟನೆ ಕೇರಳ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವ ಮತ್ತು ಸಹಾಯದಿಂದ ಆರಂಭವಾದುದನ್ನು ನೋಡಬಹುದು.


ಮಾಜಿ ಮೈಸೂರು ರಾಜ್ಯದ ಕೆಲವು ಪ್ರದೇಶಗಳಲ್ಲಿ ಈ ಕಾಲದಲ್ಲಿ ಹಲವು ಸಂಘಗಳು ಉದ್ಭವವಾದುವು. ಅವುಗಳಲ್ಲಿ ಮುಖ್ಯವಾಗಿ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ, ಬೆಂಗಳೂರಿನ ಬಟ್ಟೆ ಗಿರಣಿಗಳಲ್ಲಿ, ಭದ್ರಾವತಿಯ ಉಕ್ಕಿನ ಕಾರ್ಖಾನೆಯಲ್ಲಿ, ಮೈಸೂರಿನ ಬಟ್ಟೆ ಗಿರಣಿಯಲ್ಲಿ ಸಂಘಗಳು ಆರಂಭವಾದುವು. ಈ ಸಂಘಗಳು ಕಾಂಗ್ರೆಸ್‌ನವರಿಂದಲೂ ಮತ್ತಿತರ ಎಡ ವಿಚಾರ ವಾದಿಗಳಿಂದ ಸ್ಥಾಪಿಸಲ್ಪಟ್ಟು ಕೆಲವು ಹೋರಾಟಗಳನ್ನು ನಡೆಸಿದವು. ರೈಲ್ವೆಯಲ್ಲೂ ರೈಲ್ವೆ ಕಾರ್ಮಿಕರ ಸಂಘಟನೆಗಳು ರಾಜ್ಯದ ವಿವಿಧ ಭಾಗಗಳಲ್ಲಿ ಕೆಲಸ ನಡೆಸಿವೆ. ಹುಬ್ಬಳ್ಳಿಯಲ್ಲಿ ಟೆಕ್ಸ್‌ಟೈಲ್ ಕಾರ್ಮಿಕರ ಸಂಘಟನೆಯೂ ಇತ್ತು.

2. ಎರಡನೇ ಮಹಾಯುದ್ಧ ಆರಂಭವಾದ ನಂತರ ಸ್ವಾತಂತ್ರ್ಯ ಬರುವವರೆಗೆ ಪಾರ್ಟಿಯ ನೇತೃತ್ವದಲ್ಲಿ ಕಾರ್ಮಿಕ ಸಂಘಟನೆಗಳು ತೀವ್ರವಾಗಿ ಬೆಳೆಯುತ್ತಿದ್ದುದನ್ನು ನೋಡಬಹುದು. ದ.ಕ. ಜಿಲ್ಲೆಯಲ್ಲಿ ಬೀಡಿ, ಕೈಮಗ್ಗಗಳಲ್ಲಿ ಸಂಘಟನೆ ಬೆಳೆದುದಲ್ಲದೆ ಟೈಲ್ ಕೈಗಾರಿಕೆಯಲ್ಲಿ ಬಲಿಷ್ಠ ಸಂಘಟನೆಯು ಬಂತು. ಉಳಿದ ಭಾಗಗಳಲ್ಲೂ ನಮ್ಮ ಪಾರ್ಟಿಯ ನೇತೃತ್ವದಲ್ಲಿ ಸಂಘಟನೆಗಳು ಬೆಳೆದುವು. ಕೆಲವು ಯೂನಿಯನ್‌ಗಳಲ್ಲಿ ಕಾಂಗ್ರೆಸ್

ಈ ಸಂದರ್ಭದಲ್ಲಿ ಟ್ರೇಡ್ ಯೂನಿಯನ್‌ಗಳನ್ನು ಎರಡು ಭಾಗಗಳನ್ನಾಗಿ ನೋಡಬಹುದು. ಒಂದು ಸಣ್ಣ ಕೈಗಾರಿಕೆಗಳ ಕಾರ್ಮಿಕರ ಸಂಘಟನೆ ಮತ್ತು ಹೋರಾಟ. ಇದರಲ್ಲಿ ಸಿಲ್ಕ್ ಫ್ಯಾಕ್ಟರಿಗಳ ಕಾರ್ಮಿಕರ ಹೋರಾಟಗಳನ್ನು ನೋಡಿದರೆ ಈ ಸಂಘಟನೆಯನ್ನು ಮುರಿಯಲು ಮಾಲೀಕರು ಸರ್ಕಾರದ ಬೆಂಬಲದಿಂದ ಯಾವ ಮಟ್ಟಕ್ಕೆ ಹೋಗುತ್ತಾರೆಂಬುದನ್ನು ನೋಡಬಹುದು. ಹಲವು ಸಂದರ್ಭಗಳಲ್ಲಿ ಸಂಘಟನೆಯನ್ನು ಮುರಿಯಲು ಅವರು ಪ್ರಯತ್ನ ಮಾಡಿದ್ದಾರೆ ಕೆಲವು ಕಡೆ ಅವರಿಗೆ ಯಶಸ್ಸಾಗಿದೆ.

ಇದನ್ನು ಬೀಡಿ, ಟ್ಯಾನರಿ, ಹೋಟೆಲ್ ಮತ್ತಿತರ

ಮಾರ್ಕ್ಸ್ ನನ್ನ ಜೊತೆಗಿದ್ದಿದ್ದರೆ



"ಸಮಸ್ತ ಯೂರೋಪ್ ಹಾಗೂ ಅಮೇರಿಕಾದ ಕಾರ್ಮಿಕ ವರ್ಗ ತನ್ನ ಶಕ್ತಿ ಸಾಮರ್ಥ್ಯಗಳ ಪರಾಮರ್ಶೆ ನಡೆಸುತ್ತಿದೆ. ಮೊತ್ತಮೊದಲಬಾರಿಗೆ ಅದು ಒಂದು ಸೇನೆಯಾಗಿ ಒಂದು ಬಾವುಟದಡಿ ಒಂದು ತಕ್ಷಣದ ಉದ್ದೇಶಕ್ಕಾಗಿ - ದುಡಿಯುವ ಜನರ ಅಂತರರಾಷ್ಟ್ರೀಯದ ಜಿನೇವಾ ಸಮ್ಮೇಳನ ಒತ್ತಾಯಿಸಿದಂತೆ, ನಂತರ ಪ್ಯಾರಿಸ್ಸಿನಲ್ಲಿ 1889ರಲ್ಲಿ ನಡೆದ ಅಂತರರಾಷ್ಟ್ರೀಯ ಸಮಾಜವಾದೀ ಕಾಂಗ್ರೆಸ್ ಮತ್ತೊಮ್ಮೆ ಒತ್ತಾಯಿಸಿದಂತೆ 8 ಗಂಟೆಯ ದುಡಿಯುವ ದಿನದ ಕಾನೂನನ್ನು ರೂಪಿಸಬೇಕು ಎಂಬ ಉದ್ದೇಶಕ್ಕಾಗಿ- ಹೋರಾಡುತ್ತಿದೆ. ನಾವೀಗ ನೋಡುತ್ತಿರುವ ದೃಶ್ಯ ಎಲ್ಲಾ ದೇಶಗಳ ಕಾರ್ಮಿಕರು ಪ್ರತಿಯೊಂದು ಅರ್ಥದಲ್ಲಿಯೂ ಒಗ್ಗಟ್ಟಾಗಿದ್ದಾರೆ ಎಂಬುದನ್ನು ಎಲ್ಲಾ ದೇಶಗಳ ಬಂಡವಾಳಶಾಹಿಗಳು ಹಾಗೂ ಭೂಮಾಲಿಕರು ಅರಿತುಕೊಳ್ಳುವಂತೆ ಮಾಡಿದೆ. ಇದನ್ನು ನೋಡಲು ಮಾರ್ಕ್ಸ್ ನನ್ನ ಜೊತೆಗಿದ್ದಿದ್ದರೆ.!...."

- ಫೆಡ್ರಿಕ್ ಎಂಗೆಲ್ಸ್.

ಕ್ಷೇತ್ರಗಳಲ್ಲಿ ನೋಡಿದ್ದೇವೆ. ಕೆಲವು ಸಲ ಕಾರ್ಮಿಕರ ಒಗ್ಗಟ್ಟನ್ನು ಮುರಿಯಲು ಸಾಧ್ಯವಿಲ್ಲದಾಗ ಕೈಗಾರಿಕೆಯನ್ನೇ ಮುಚ್ಚುವ ಕುತಂತ್ರಗಳೂ ನಡೆದಿವೆ.

ದೊಡ್ಡ ಕೈಗಾರಿಕೆಗಳಲ್ಲಿ ಸಂಘಟನೆಯನ್ನು ಮುರಿಯಲು ಬೇರೆ ತಂತ್ರಗಳನ್ನು ಉಪಯೋಗಿಸುತ್ತಾರೆ. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಭಿನ್ನ ಪರಿಸ್ಥಿತಿಯನ್ನು ನೋಡಬಹುದು. ಯುದ್ಧ ಕಾಲದಲ್ಲಿ ಆರಂಭವಾದ ವಿಮಾನ ಕಾರ್ಖಾನೆ

1942 ರಲ್ಲಿ ಪ್ರಥಮ ಬಾರಿಗೆ ಕುಡುಗೋಲು ಸುತ್ತಿಗೆ ಚಿಹ್ನೆಯ ಕೆಂಪು ಧ್ವಜವು ಬೆಂಗಳೂರು ಪಕ್ಕದ ಚೆಟ್ಟಿ ಪಾಳ್ಯದ ಬಟ್ಟೆ ಗಿರಣಿ ಯೂನಿಯನ್‌ಅನ್ನು ಪಾರ್ಟಿ ನಾಯಕರು ಸ್ಥಾಪಿಸಿದಾಗ ಬಂತು.

(ಹೆಚ್.ಎ.ಎಲ್.) ಯಲ್ಲಿ ಹೊರಗಿನವರು ಯಾರೂ ಅಧಿಕಾರ ಸ್ಥಾನದಲ್ಲಿಲ್ಲ. 1953-54 ರಲ್ಲಿ ಕಾಮ್ರೇಡ್ ಆನಂದನ್ ನಂಬಿಯಾರ್‌ರವರನ್ನು ಅಧ್ಯಕ್ಷರನ್ನಾಗಿ ತರಲು ಪ್ರಯತ್ನ ನಡೆಯಿತು.

ಚುನಾವಣೆ ನಡೆದು ಅವರನ್ನು ಬಹುಮತದಿಂದ ಕಾರ್ಮಿಕರು ಆರಿಸಿದರೂ ಕೆಲವರು ಇದನ್ನು ವಿರೋಧಿಸಿ ಕೋರ್ಟಿನಲ್ಲಿ ಕೇಸ್ ನಡೆಸಿದರು. ಕೊನೆಗೆ ಹೊರಗಿನವರು ಯಾರೂ ಯೂನಿಯನ್‌ನಲ್ಲಿ ಅಧಿಕಾರ ಸ್ಥಾನದಲ್ಲಿರ ಕೂಡದೆಂದು ತೀರ್ಮಾನವಾಗಿ ಅವರನ್ನು ಅಧ್ಯಕ್ಷರನ್ನಾಗಿ ತರುವ ಯೋಜನೆಯನ್ನು ನಾವು ಕೈ ಬಿಡಬೇಕಾಯಿತು. ಆದರೆ ಐ.ಟಿ.ಐ.ನಲ್ಲಿ ಸೋಷಲಿಸ್ಟ್ ಕೆ.ಕಣ್ಣನ್‌ರವರು ಅಧ್ಯಕ್ಷರಾಗಿಯೂ ನಮ್ಮ ಪಾರ್ಟಿಯಿಂದ ಎ.ಎನ್. ಸಿಂಗ್ ಎಂಬವರು ಕಾರ್ಯದರ್ಶಿಯಾಗಿಯೂ ಹೊರಗಿನವರು ಇದ್ದರು. ಹೆಚ್.ಎಂ.ಟಿ.ಯಲ್ಲಿ ಎಂ.ಎಸ್. ಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಸಂಘಟನೆಯನ್ನು ಕಟ್ಟಲಾಯಿತು. ಬಿ.ಇ.ಎಲ್. ನಲ್ಲೂ ಕೃಷ್ಣನ್ ರವರ ಅಧ್ಯಕ್ಷತೆಯಲ್ಲಿ ಸಂಘ ಸ್ಥಾಪನೆಯಾಗಿ ಈ ಸಂಘಗಳಿಗೆ ಮಾನ್ಯತೆಯೂ ದೊರಕಿತು. ಈ ಸಂಘಟನೆಗಳನ್ನು ಕಟ್ಟಲು ನಮ್ಮ ಕಾಮ್ರೇಡ್ಸ್ ಪಟ್ಟ ಶ್ರಮವನ್ನು ಊಹಿಸಲೂ ಸಾಧ್ಯವಿಲ್ಲ.

1957 ರವರೆಗೆ ಒಂದು ಕಡೆ ನಮ್ಮ ಪಾರ್ಟಿ ಕೆಲಸ ಮಾಡುತ್ತಿದ್ದರೆ ಕಾಂಗ್ರೆಸ್ಸಿನವರು ಐ.ಎನ್.ಟಿ.ಯು.ಸಿ. ಸಂಘಟನೆಗಳನ್ನು ಕಟ್ಟುತ್ತಿದ್ದರು. ಅದೇ ಕಾಲದಲ್ಲಿ ಸೋಷಿಯಲಿಸ್ಟರೂ ಕಾರ್ಮಿಕ ಸಂಘಟನೆಗಳಲ್ಲಿದ್ದರು. ಅವರಲ್ಲಿ ಅನೇಕರು ಕಮ್ಯೂನಿಸ್ಟ್ ವಿರೋಧಿಗಳಾಗಿದ್ದರು. ಹೆಚ್.ಎಂ.ಎಸ್. ಅವರ ಕೇಂದ್ರವಾಗಿತ್ತು. ಕ್ರಮೇಣ ಜನಸಂಘದವರ ಬಿ.ಎಂ.ಎಸ್. ಸಂಘಗಳು ಹುಟ್ಟಿದವು. ದೊಡ್ಡ ಕೈಗಾರಿಕೆಗಳಲ್ಲಿ ಅವರು ಕಾಣಿಸದಿದ್ದರೂ ಸಣ್ಣ ಕೈಗಾರಿಕೆಗಳಲ್ಲಿ ಮತ್ತು ಸಿನಿಮಾ, ಹೋಟೆಲ್ ಮುಂತಾದ ಉದ್ಯಮಗಳಲ್ಲಿ ಅವರು ಸಂಘಟನೆ ಮಾಡಿದರು. ಅವರೆಲ್ಲ ಕಮ್ಯೂನಿಸ್ಟ್ ವಿರೋಧಿಗಳಲ್ಲದೆ ನಮ್ಮ ಸಂಘಟನೆಗಳನ್ನು ಮುರಿಯುವುದರಲ್ಲಿ ಆಸಕ್ತರಾದರು. ಹೀಗೆ ನಾವು ಸರ್ಕಾರದ ದಬ್ಬಾಳಿಕೆಯನ್ನೆದುರಿಸಿ, ಮಾಲಿಕರ ಮತ್ತು ಅವರ ಏಜಂಟರ ಗೂಂಡಾಗಳ ಧಾಳಿಗಳನ್ನೆದುರಿಸಿ ಕಾರ್ಮಿಕರಿಗೋಸ್ಕರ ಹೋರಾಟ ನಡೆಸುತ್ತಿರುವಾಗ ಐ.ಎನ್.ಟಿ.ಯು.ಸಿ.ಯ, ಎಚ್.ಎಂ.ಎಸ್. ರವರ ಮತ್ತು ಬಿ.ಎಂ. ಎಸ್. ರವರನ್ನು ಎದುರಿಸಿ ಹೋರಾಟ ನಡೆಸಬೇಕಾಯಿತು. ಆದರೂ ಕೆ.ಪಿ.ಟಿ.ಯು.ಸಿ ಸಂಘಟನೆಯು ಬೆಂಗಳೂರಿನ ಕಿರ್ಲೋಸ್ಕರ್, ಸ್ಯಾಂಕಿ ಸಿಗರೇಟ್ ಫ್ಯಾಕ್ಟರಿಗಳಲ್ಲೂ ಬೆಳೆಯಿತು.

1950ರ ನಂತರ ಬೆಂಗಳೂರಿನ ಸುತ್ತಲೂ ಹೊಸ ಕೈಗಾರಿಕೆಗಳು ಬೆಳೆದುವು. ಇಂಜನಿಯರಿಂಗ್, ಕೆಮಿಕಲ್ಸ್, ರಬ್ಬರ್ ಮುಂತಾದ ಹಲವಾರು ಕಾರ್ಖಾನೆಗಳು ತುಮಕೂರು ರಸ್ತೆಯಲ್ಲೂ ಮೈಸೂರು ರಸ್ತೆಯಲ್ಲೂ, ಕೃಷ್ಣರಾಜಪುರ, ವೈಟ್‌ಫೀಲ್ಡ್ ಗಳಲ್ಲಿ ಬಂದುವು. ಕಾರ್ಖಾನೆಗಳ ಕಾರ್ಮಿಕರು ಕೆ.ಪಿ.ಟಿ.ಯು.ಸಿ.ಯ ನೇತೃತ್ವದಲ್ಲಿ ಸಂಘಟಿಸಲ್ಪಟ್ಟರು. ರಾಜ್ಯದ ಇತರ ಭಾಗಗಳಲ್ಲೂ ಕೈಗಾರಿಕೆಗಳು ಆರಂಭವಾದುವು. ಕಾರ್ಮಿಕ ಸಂಘಟನೆಗಳ ಸ್ವರೂಪವೇ ಬದಲಾಗುತ್ತಾ ಬಂತು.

ಆದರೆ ರಾಜ್ಯ ಮಟ್ಟದಲ್ಲಿ ಕೈಗಾರಿಕಾ ವಾರಾಗಿ ಸಂಘಟನೆ ಯಾವುದೂ ಬೆಳೆಯಲಿಲ್ಲ. ಮುನಿಸಿಪಲ್ ಕೆಲಸಗಾರರ ಕಾರ್ಮಿಕ ಸಂಘಗಳ ಫೆಡರೇಷನ್ ನಮ್ಮ ನೇತೃತ್ವದಲ್ಲೊಂದಾಗಿತ್ತು. ಸೋಷಿಯಲಿಸ್ಟ್ ರವರ ಸಕ್ಕರೆ ಕಾರ್ಖಾನೆಗಳ ಕಾರ್ಮಿಕ ಸಂಘಗಳ ಫೆಡರೇಷನ್ ಇನ್ನೊಂದು. ಬಸ್ ಸಾರಿಗೆ ಕಾರ್ಮಿಕರ ಸಂಘಟನೆಯನ್ನು ರಾಜ್ಯ ವ್ಯಾಪಿಯಾಗಿ ಮಾಡುವ ಪ್ರಯತ್ನವೂ ನಡೆಯಿತು.

ರಾಜ್ಯ ವ್ಯಾಪಿಯಾಗಿ ನಡೆದ ಹೋರಾಟಗಳಲ್ಲಿ ಸರ್ಕಾರಿ ನೌಕರರ ಸಂಘಟನೆ ಮತ್ತು ಹೋರಾಟವು

ಏಕೀಕೃತ ಕರ್ನಾಟಕ ಅಸ್ತಿತ್ವಕ್ಕೆ ಬಂದ 1954 ರಲ್ಲಿ ಕೆ.ಪಿ.ಟಿ.ಯು.ಸಿ. ರಚನೆಯಾಗಿ ಚಳುವಳಿ


ಸ್ಮರಣೀಯವಾಗಿದೆ. ನಿಷ್ಕ್ರಿಯವಾಗಿದ್ದ ಸರ್ಕಾರಿ ನೌಕರರಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಿ ಕ್ರಿಯಾಶೀಲ ಸಂಘಟನೆಯನ್ನಾಗಿ ಮಾಡಲು ಹೋರಾಟ ಮಾಡಿ ಅದರಲ್ಲಿ ತನ್ನ ನೌಕರಿಯನ್ನು ಕಳೆದುಕೊಂಡು ಕಷ್ಟನಷ್ಟಗಳನ್ನನುಭವಿಸಿದವರು ಶ್ರೀಮತಿ ಮೇರಿ ದೇವಾಸಿಯಾರವರು.

ಹಿಂದೆ ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಬಂದಮೇಲೆ ಒಂದು ರಾಜ್ಯಾದ್ಯಂತ ನಡೆದ ಹೋರಾಟವೆಂದರೆ ವಿದ್ಯುಚ್ಛಕ್ತಿ ಇಲಾಖೆಯ ಕಾರ್ಮಿಕರ ಮುಷ್ಕರ. ತಮ್ಮ ಬೇಡಿಕೆಗಳಿಗೋಸ್ಕರ ರಾಜ್ಯ ವ್ಯಾಪಿಯಾದ ಹೋರಾಟವನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅದರ ಪರಿಣಾಮವಾಗಿ ಅವರ ಅನೇಕ ಬೇಡಿಕೆಗಳು ಈಡೇರಿದುವು.

ಬ್ಯಾಂಕ್‌ಗಳಲ್ಲಿ ದುಡಿಯುವ ನೌಕರರ ಸಂಘಟನೆಯು ಎ.ಐ.ಬಿ.ಇ.ಎ. ಯವರ ನೇತೃತ್ವದಲ್ಲೂ ಎಲ್.ಐ.ಸಿ. ನೌಕರರು ತಮ್ಮ ಸಂಘಟನೆಯಲ್ಲೂ ಬಂದು ಹೋರಾಟ ನಡೆಸುತ್ತಿದ್ದರು.

○

ಮೇ ದಿನದ ಬಗ್ಗೆ ಲೆನಿನ್



"..ಎಂಟು ಗಂಟೆಯ ದುಡಿಯುವ ದಿನದ ಬೇಡಿಕೆ ಎಲ್ಲಾ ಕಾರ್ಮಿಕ ವರ್ಗದ ಬೇಡಿಕೆ. ಇದು ಕೆಲವು ಮಾಲಿಕರೆದುರು ಕೆಲವು ಕಾರ್ಮಿಕರು ಇಟ್ಟಿರುವ ಬೇಡಿಕೆಯಲ್ಲ. ಸದ್ಯದ ಸಮಸ್ತ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯ ಪ್ರತಿನಿಧಿಗಳಾದ ಪ್ರಭುತ್ವದ ಅಧಿಕಾರಿಗಳ, ಸಮಸ್ತ ಬಂಡವಾಳಶಾಹೀ ವರ್ಗದ ಉತ್ಪಾದನಾ ಸಾಧನಗಳ ಒಡೆಯರ ಎದುರು ಇಟ್ಟಿರುವ ಬೇಡಿಕೆಯಿದು. ಇದು ಅಂತರರಾಷ್ಟ್ರೀಯ ಸಮಾಜವಾದೀ ಆಂದೋಲನದೊಂದಿಗೆ ಐಕ್ಯವಾಗುವ ಒಂದು ಘೋಷಣೆ. ಕಾರ್ಮಿಕರು ಈ ಬೇಡಿಕೆಯನ್ನು ಪುಕ್ಕಟೆ ರೈಲು ಟಿಕೇಟು, ಕಾವಲುಗಾರನ ವಜಾ ಮುಂತಾದ ಬೇಡಿಕೆಗಳ ಮಟ್ಟಕ್ಕೆ ಇಳಿಸದಂತೆ ಮಾಡಬೇಕಾದರೆ ಅವರು ಈ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವಂತೆ ಮಾಡಬೇಕು. ವರ್ಷವಿಡೀ ಕಾರ್ಮಿಕರು ಒಂದೆಡೆ ಒಮ್ಮೆ ಇನ್ನೊಂದೆಡೆ ಇನ್ನೊಮ್ಮೆ ವಿಧ-ವಿಧವಾದ ಭಾಗಶಃ ಬೇಡಿಕೆಗಳನ್ನು ತಮ್ಮ ಮಾಲಿಕರ ಮುಂದಿಟ್ಟು ಅದಕ್ಕಾಗಿ ಹೋರಾಡುತ್ತಾರೆ. ಕಾರ್ಮಿಕರಿಗೆ ಈ ಹೋರಾಟಗಳಲ್ಲಿ ನೆರವು ನೀಡುವಾಗ ಸಮಾಜವಾದಿಗಳು ಸದಾ ಈ ಹೋರಾಟಗಳಿಗೂ ಎಲ್ಲಾ ದೇಶಗಳ ಕಾರ್ಮಿಕ ವರ್ಗದ ವಿಮೋಚನಾ ಹೋರಾಟಗಳಿಗೂ ಇರುವ ಸಂಬಂಧವನ್ನು ವಿವರಿಸಬೇಕು. ಮತ್ತು ಮೇ ದಿನ, ತಾವು ಈ ಸಂಬಂಧವನ್ನು ಅರಿತುಕೊಂಡಿದ್ದೇವೆ ಎಂದು ಕಾರ್ಮಿಕರು ಘೋಷಿಸುವ ಹಾಗೂ ದೃಢ ನಿರ್ಧಾರದಿಂದ ಈ ಹೋರಾಟದಲ್ಲಿ ಸೇರಿಕೊಳ್ಳುತ್ತೇವೆ ಎಂದು ಸಾರುವ ದಿನವಾಗಬೇಕು.

- ಲೆನಿನ್

1900ರ ಮೇ ದಿನದ ಕರಪತ್ರದ ಮುನ್ನುಡಿಯಲ್ಲಿ

ಕಾಡಿನಲ್ಲಿ ಕಾರ್ಮಿಕರ ಹಬ್ಬ!

ಎಮೆಲ್ಯಾನೊವ್ಕ ಹಳ್ಳಿ ಪೀಟರ್ಸ್‌ಬರ್ಗ್‌ನಿಂದ ಸುಮಾರು ಮೂರು ವೆರ್ಸ್ಟ್‌ಗಳ ದೂರದಲ್ಲಿ ಹೆದ್ದಾರಿಯಿಂದ ಸ್ವಲ್ಪ ಆಚೆಗೆ ಇದ್ದಿತು. ಈ ಹಳ್ಳಿಯ ಹಿಂದೆ ಕಾಡು, ಈ ಕಾಡು ಫಿನ್ಲೆಂಡ್ ಖಾರಿಯ ತೀರದಲ್ಲಿ ಇದ್ದಕ್ಕಿದ್ದಂತೆ ಕೊನೆಗಾಣುತ್ತಿದ್ದಿತು.

ಎಮೆಲ್ಯಾನೊವ್ಕ ಒಂದು ಸಾಮಾನ್ಯ ಪುಟ್ಟ ಹಳ್ಳಿ. ಜನ ಸಂಖ್ಯೆ ಅಲ್ಪ. ಜನ ಶಾಂತಿ ಪ್ರಿಯರು. ಈ ಹಳ್ಳಿಯ ಇತಿಹಾಸ ವಿಶಿಷ್ಟವಾದುದೇನೂ ಆಗಿರಲಿಲ್ಲ. ಏಕೆಂದರೆ ಅಲ್ಲಿ ಅಂಥ ಗಮನಾರ್ಹ ಘಟನೆಗಳಾವುವೂ ನಡೆದಿರಲಿಲ್ಲ. ಅಲ್ಲಿನ ಕಾಡೂ ಮಾಮೂಲಿನದೇ- ಫೈನ್ ಹಾಗೂ ಬರ್ಚ್ ಮರಗಳು, ಮುಳ್ಳುಗಳಿಂದ ಕೂಡಿದ ರಾಸ್ಪ್ ಬೆರಿ ಪೊದೆಗಳು ಮತ್ತು ಹೇಸೆಲ್‌ನಟ್ ಗಿಡಗಳ ಪೊದೆಗಳು. ಆ ಮಾರ್ಗದಲ್ಲಿ ಪ್ರಯಾಣ ಹೋಗುತ್ತಿದ್ದವರು ಹೆದ್ದಾರಿ ಬಿಟ್ಟು ಈ ಹಳ್ಳಿಗೆ ಬಂದುದೇ ಅಪರೂಪ. ಆದರೆ ಒಂದು ದಿನ...

ಒಂದು ದಿನ ಸಾಂಕ ಲಾಪಿನ್ ಎಂಬ ಈ ಹಳ್ಳಿಯ ಹುಡುಗ ಕಾಡಿನ ಬಳಿ ಆಡುತ್ತಿದ್ದಾಗ ಇಬ್ಬರು ಅಪರಿಚಿತ ವ್ಯಕ್ತಿಗಳನ್ನು ಕಂಡ. ಅವರು ಹೊಲವನ್ನು ದಾಟಿ, ಸುತ್ತಮುತ್ತ ಎಲ್ಲ ದಿಕ್ಕುಗಳಲ್ಲೂ ನೋಡುತ್ತ ಕೊನೆಗೆ ಹೇಸೆಲ್ ಪೊದೆ ಗಳ ಹಿಂದೆ ಅಡಗಿಕೊಂಡರು.

"ಇವರು ಯಾರಿರಬಹುದು?" ಸಾಂಕ ಆಶ್ಚರ್ಯಪಟ್ಟ. "ಯುವಕರು ಗಟ್ಟಿ ಮುಟ್ಟಾಗಿದ್ದಂತೆ ಕಾಣುತ್ತಾರೆ. ದರೋಡೆಕೋರ ರಿರಬಹುದೇ?" ಹುಡುಗ ಆ ಹೇಸೆಲ್ ಪೊದೆಗಳ ಬಳಿಗೆ ಅವರಿಗೆ ಕಾಣದಂತೆ ಹೋಗಲು ಬಯಸಿದ, ಆದರೆ ಅಷ್ಟು ಧೈರ್ಯ ತಂದುಕೊಳ್ಳದಾದ. ಸ್ವಲ್ಪ ದೂರದಿಂದಲೇ ಸಾಗಿ ಹೋಗಿ ಖಾರಿಯತ್ತ ಓಡಿ ಹೋದ. ಅಲ್ಲಿ ಅವನಿಗೆ ಮತ್ತೊಂದು ಆಶ್ಚರ್ಯ ಕಾದಿತ್ತು: ಒಂದು, ಎರಡು, ಮೂರು ದೋಣಿಗಳು ತೀರಕ್ಕೆ ಆತು ನಿಂತಿದ್ದವು. ಜನ ಅದರಿಂದ ಇಳಿಯುತ್ತಿದ್ದರು. ಅವರೂ ಎಲ್ಲ ಕಡೆಗಳಲ್ಲೂ ದೃಷ್ಟಿ ಹಾಯಿಸುತ್ತ ಕಾಡಿನ ಕಡೆಗೆ ನಡೆದರು.



ಪೋಲೀಸನ ಗಮನವನ್ನು ಬೇರೆಡೆಗೆ ಸೆಳೆದು ಪೋಸ್ಟರ್ ಅಂಟಿಸುತ್ತಿರುವ ಕಾರ್ಮಿಕ

ಸಾಂಕ ಹಳ್ಳಿಗೆ ಹಿಂದಿರುಗಿ ಓಡಿದ. ತನ್ನ ಮಿತ್ರ ಪಾಷ್ಕ ದುದರೋವ್‌ನನ್ನು ಕಂಡ.

"ಪಾಷ್ಕ, ಪಾಷ್ಕ" ಅವನು ಪಿಸುಮಾತಿನಲ್ಲಿ ಹೇಳಿದ. "ಯಾರೋ ಪರಕೀಯರು ಬಂದಿದ್ದಾರೋ. ಸುಮಾರು ಇನ್ನೂರು ಮಂದಿ!"

"ಸುಳ್ಳು ಹೇಳ ಬೇಡ!"

"ಪ್ರಮಾಣ ಮಾಡಿ ಹೇಳ್ತೇನೆ. ನಿಜವಾಗಲೂ!"

ಇಬ್ಬರು ಮಿತ್ರರೂ ಖಾರಿಯ ಬಳಿಗೆ ಓಡಿದರು. ಪಾಷ್ಕ ನೋಡಿದ. ಹೌದು ಅಲ್ಲಿ ದೋಣಿಗಳಿವೆ!

ಇಬ್ಬರೂ ಕಾಡಿಗೆ ಓಡಿದರು. ಕಾಣದಂತೆ ಪೊದೆಯಿಂದ ಪೊದೆಗೆ ಹೋದರು. ಕೊನೆಗೆ ಒಂದು ತೆರವು ಪ್ರದೇಶದಲ್ಲಿ- ಜನರ ಗುಂಪು! ಜನ ಒಬ್ಬ ವಿಶಾಲ ಎದೆಯ ವ್ಯಕ್ತಿಯ ಸುತ್ತ ಅರೆವೃತ್ತಾಕಾರದಲ್ಲಿ ನಿಂತಿದ್ದರು. ಆ ವ್ಯಕ್ತಿ ಒಂದು ಕೆಂಬಾವುಟವನ್ನು ಬಿಚ್ಚಿ ಹಾರಿಸಿದ. ಆಮೇಲೆ ಮಾತನಾಡ ತೊಡಗಿದ.

ಸ್ತಂಭೀಭೂತರಾಗಿ ಬಾಲಕರು ಸದ್ದಿಲ್ಲದೆ ಪೊದೆಗಳ ಹಿಂದೆಯೇ ಅಡಗಿ ಕುಳಿತು ಎಲ್ಲವನ್ನೂ ವೀಕ್ಷಿಸಿದರು.

"ಪೀಟರ್ಸ್‌ಬರ್ಗ್‌ನ ಕಾರ್ಮಿಕರೇ! ನಾವಿಲ್ಲಿ ಇಂದು ನೆರೆದಿರುವುದು..." ಭಾಷಣಕಾರನ ಮಾತುಗಳು ಬಾಲಕರತ್ತ ತೇಲಿಕೊಂಡು ಬರುತ್ತಿದ್ದವು. "ಇಂದು ನಾವು ಕೆಲವರೇ ಇದ್ದೇವೆ. ಆದರೆ ಜನಸಮೂಹಗಳು ಜಾಗೃತಗೊಳ್ಳುವ ಕಾಲ ದೂರವೇನಿಲ್ಲ..."

ಭಾಷಣಕಾರ ಹೀಗೆ ಬಹಳ ಹೊತ್ತು ಮಾತನಾಡುತ್ತಲಿದ್ದು ಕೊನೆಗೆ ಈ ಮಾತುಗಳಿಂದ ತನ್ನ ಭಾಷಣವನ್ನು ಮುಕ್ತಾಯಗೊಳಿಸಿದ:

"ನಮ್ಮ ಶ್ರಮಜೀವಿ ವರ್ಗದ ಹಬ್ಬದ ದಿನ ಚಿರಾಯುವಾಗಲಿ!"

"ಏನೋ ಅವನು ಹೇಳುತ್ತಿರೋದು?" ಪಾಷ್ಕ ಹೆಗಲು ಕೊಡಹಿದ.

ಮೊದಲ ಭಾಷಣಕಾರರ ನಂತರ ಅನೇಕ ಇತರರು ಒಬ್ಬರಾದ ಮೇಲೊಬ್ಬರು ಎದ್ದು ನಿಂತು ಮಾತನಾಡಿದರು. ಅವರು ಕಾರ್ಮಿಕರ ದುಸ್ಥಿತಿಯ ಬಗೆಗೆ, ನವ ಬಾಳಿಗಾಗಿ ಹೋರಾಡುವ ಬಗೆಗೆ, ಆ ಹಬ್ಬದ ದಿನದ ಬಗೆಗೆ, ಮಾತನಾಡಿದರು.

ಬಾಲಕರು ಪೊದೆಯ ಕೆಳಗೇ ಸುಮಾರು ಎರಡು ಗಂಟೆ ಕಾಲ, ಸಭೆ ಮುಗಿಯುವವರೆಗೂ, ಇದ್ದರು. ಕಾರ್ಮಿಕರು ಸಣ್ಣ ಸಣ್ಣ ಗುಂಪುಗಳಲ್ಲಿ ಚೆದರ ತೊಡಗಿದರು. ಸ್ವಲ್ಪ ಹೊತ್ತು ಕಾದನಂತರ ಬಾಲಕರೂ ಎದ್ದು ಹೊರಟರು. ಹೋಗುತ್ತ ಈ ಜನ ಯಾರಾಗಿದ್ದಿರ ಬಹುದು, ಅವರು ಹೇಳುತ್ತಿದ್ದಂಥ ಆ ಹಬ್ಬದ ದಿನ ಯಾವುದು, ಎಂದು ಅವರು ಊಹಿಸ ಯತ್ನಿಸಿದರು.

ಬಾಲಕರು ಎಮೆಲ್ಯಾನೊವ್ಕಗೆ ಹಿಂದಿರುಗಿ ಹಿರಿಯರಿಂದ ಇವಕ್ಕೆ ಉತ್ತರ ತಿಳಿಯಲು ನಿರ್ಧರಿಸಿದರು.

ಸಾಂಕ ತನ್ನ ತಂದೆಯ ಬಳಿಗೆ ಹೋಗಿ ಆ ಸಭೆಯ ಬಗೆಗೆ ಮತ್ತು ಕೆಂಬಾವುಟದ ಬಗೆಗೆ ಹೇಳಿದ.

"ನಿಜವೇ ನೀನೇನು ಸೃಷ್ಟಿಸಿ ಹೇಳುತ್ತಿಲ್ಲವಷ್ಟೆ?" ತಂದೆ ಸಂಶಯ ವ್ಯಕ್ತಪಡಿಸುತ್ತ ಅವನನ್ನು ಕೇಳಿದ.

"ಸೃಷ್ಟಿಸಿ ಹೇಳೋದೆ! ನಾವು ಅವರನ್ನು ಕಣ್ಣಾರೆ ಕಂಡೆವು. ನಾವು ಪೊದೆಗಳ ಹಿಂದೆ ಅಡಗಿಕೊಂಡಿದ್ದೆವು."

ಅವನ ತಂದೆ ಭುಜ ಹಾರಿಸಿದ. ಅವನಿಗೇ ಈ ವಿಷಯ ಯಾವುದೂ ತಿಳಿದಿರಲಿಲ್ಲ. ಮಾಮ ಯೆಗೋರ್‌ನ ಬಳಿಗೂ ಹೋಗಿ ಕೇಳಿದರು. ಆದರೆ ಯಾರಿಗೂ ಈ ಕಾರ್ಮಿಕರ ಹಬ್ಬದ ದಿನದ ಬಗೆಗೆ ಏನೂ ತಿಳಿದಿದ್ದಂತೆ ಕಂಡುಬರಲಿಲ್ಲ.

ಕೊನೆಗೆ ಇಬ್ಬರೂ ವೃದ್ಧ ಅನೂಚ್ಕಿನ್‌ನ ಬಳಿಗೆ ಹೋದರು. ಅವನು ಹಳ್ಳಿಯಲ್ಲೇ ಅತ್ಯಂತ ಹಿರಿಯನಾಗಿದ್ದ. ಅವನು ಖಂಡಿತ ಇದರ ಬಗೆಗೆ ತಿಳಿದಿದ್ದಿರಬೇಕು. ಅನೂಚ್ಕಿನ್ ವಿವರಿಸ ತೊಡಗಿದ: ನಾನಾ ರೀತಿಯ ಹಬ್ಬದ ದಿನಗಳಿವೆ: ಕ್ರಿಸ್‌ಮಸ್ ಹಬ್ಬ, ಈಸ್ಟರ್ ಹಬ್ಬ, ತ್ಸಾರ(ರಷ್ಯಾದ ಚಕ್ರವರ್ತಿ)ನ ಹುಟ್ಟಿದ ಹಬ್ಬ, ತ್ಸಾರಳ ಹುಟ್ಟಿದ ಹಬ್ಬ...

"ಅವಲ್ಲ, ಅವಲ್ಲ!" ಬಾಲಕರು ಮಧ್ಯೆ ನುಡಿದರು.

"ಕಾರ್ಮಿಕರ ಹಬ್ಬದ ದಿನ ಅಂದರೇನು?

"ಕಾರ್ಮಿಕರ ಹಬ್ಬದ ದಿನ ಅಂದರೇನು?"

"ಕಾರ್ಮಿಕರದೇ?!" ವೃದ್ಧ ಯೋಚಿಸಲು ಒಂದು ನಿಮಿಷ ತಡೆದ. ತನ್ನ ತಲೆಯ ಹಿಂದೆ ಕೆರೆದುಕೊಂಡ. ಆಮೇಲೆ ತನಗೇನೂ ತಿಳಿಯದೆನ್ನುವಂತೆ ಕೈ ಆಡಿಸಿದ. "ಅಂಥ ಯಾವುದೇ ಹಬ್ಬದ ದಿನದ ವಿಷಯ ನಾನೆಂದೂ ಕೇಳಿಲ್ಲ."

ಹೀಗೆ ಆ ಇಬ್ಬರು ಮಿತ್ರರೂ ಆ ಹಬ್ಬದ ದಿನದ ಬಗೆಗೆ ಏನೂ ತಿಳಿಯದೇ ಉಳಿದರು.

ಎಮೆಲ್ಯಾನೊವ್ಕ ಹಳ್ಳಿಯ ಬಳಿ ನಿಜಕ್ಕೂ ಜರುಗಿದ್ದುದು ಈ ಕೆಳಗಿನ ಘಟನೆಯಾಗಿದ್ದಿತು: ರಷ್ಯನ್ ಕಾರ್ಮಿಕರು ಮೊಟ್ಟಮೊದಲ ಬಾರಿಗೆ ಮೇ ದಿನೋತ್ಸವವನ್ನು ಆಚರಿಸುತ್ತಿದ್ದರು. ಅದು 1891 ನೆಯ ಇಸವಿ, ಬಹಳ ಕಾಲದ ಹಿಂದೆ.

ಆದರೆ ದೀರ್ಘ ಕಾಲದನಂತರವಷ್ಟೇ ಸಾಂಕ ಹಾಗೂ ಪಾಷ್ಕ ಮೇ ದಿನೋತ್ಸವದ ಬಗೆಗೆ, ಅದನ್ನು ಯಾಕೆ ಆಚರಿಸಲಾಗುತ್ತದೆ ಎಂಬುದರ ಬಗೆಗೆ, ತಿಳಿದುದು. ಬೆಳೆದು ದೊಡ್ಡವರಾಗಿ ಸ್ವತಃ ಕಾರ್ಮಿಕರಾದಾಗಲಷ್ಟೆ ಅವರು ಅದನ್ನು ಕಂಡು ಕೊಂಡುದು.

ಮೇ ದಿನ ಮತ್ತು

ಶಿಕ್ಷಣ ಹಾಗೂ ಉದ್ಯೋಗ ವಂಚಿತೆ

ಕರ್ನಾಟಕದ ಮಹಿಳೆ

ಶರತ್‌ಚಂದ್ರ

ಮಹಿಳೆಯರು ಕಾರ್ಮಿಕವರ್ಗದ ಅವಿಭಾಜ್ಯ ಅಂಗ. ಮಹಿಳೆಯರಿಗೆ ಕಾರ್ಮಿಕರಾಗಿ ವಿಶಿಷ್ಟ ಸಮಸ್ಯೆಗಳಿವೆ. ಮೇ ದಿನದಂದು ಕಾರ್ಮಿಕವರ್ಗ ಈ ಕಡೆಗೆ ಗಮನ ಹರಿಸಬೇಕು. ಇದು ಮಾತ್ರವಲ್ಲ, ಲಿಂಗ ಅಸಮಾನತೆಯಿಂದ ಶಿಕ್ಷಣದಲ್ಲಿ ಮತ್ತು ಆಮೂಲಕ ಉದ್ಯೋಗದಲ್ಲಿ ಸಮಾನತೆಯಿಂದ ಮರಳಿ ವಂಚಿತಳಾಗುತ್ತಿರುವುದು ಕಾರ್ಮಿಕ ವರ್ಗ ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ಪ್ರಥಮ ಶೋಷಿತೆ ಮಹಿಳೆಯ ಶಿಕ್ಷಣ, ಉದ್ಯೋಗದ ಪರಿಸ್ಥಿತಿ ಕಡೆಗೆ ಮೇ ದಿನದ ಸಂದರ್ಭದಲ್ಲಿ ಕಾರ್ಮಿಕ ಚಳುವಳಿಯ ಗಮನ ಸೆಳೆಯುವ ಲೇಖನ. ಶಿಕ್ಷಣ, ಉದ್ಯೋಗ ಪಡೆಯಲು ಮಹಿಳೆ ಮೊದಲು ಬದುಕಿರಬೇಕು. ಅದಕ್ಕೂ ಹಲವು ತೊಡಕುಗಳಿರುವ ಸಮಾಜದ ಬಗ್ಗೆ ಲೇಖನ ಗಮನ ಸೆಳೆಯುತ್ತಿದೆ.

ಮಹಿಳೆಗೆ ಸಮಾನ ಸಮೃದ್ಧ ಬದುಕು ಸಿಗಬೇಕಾದರೆ ಶಿಕ್ಷಣ ಮತ್ತು ಉದ್ಯೋಗಾವಕಾಶ ಮುಖ್ಯವಾಗಿ ಬೇಕು. ಇವೆಲ್ಲಕ್ಕಿಂತಲೂ ಮೊದಲು ಹೆಣ್ಣು ಮಗು ಬದುಕುಳಿಯುವುದೇ ಒಂದು ಸಾಹಸ. ಹೆಣ್ಣು ಶಿಶು ಹತ್ಯೆಯಂತಹ ಘೋರ ಪದ್ಧತಿಗಳು ಪ್ರಚಲಿತವಿಲ್ಲದಿದ್ದರೂ, ಹೆಣ್ಣಿನ ಆರೋಗ್ಯದ ಬಗ್ಗೆ ನಿರ್ಲಕ್ಷ್ಯದಿಂದ ಬದುಕುಳಿಯುವುದೇ ಹೆಣ್ಣಿಗೆ ದೊಡ್ಡ ಹೋರಾಟ.

ಒಂದು ವರ್ಷದೊಳಗೆ ಹೆಣ್ಣು ಮಗು ಸಾಯುವ ಸಂಭವ, ಗಂಡುಮಗುವಿಗಿಂತ ಹೆಚ್ಚು. 34 ವಯಸ್ಸಿನವರೆಗೆ ಹೆಣ್ಣಿನ ಸಾವಿನ ಪ್ರಮಾಣ ಗಂಡಿಗಿಂತ ಹೆಚ್ಚಾಗಿದೆ. ಕೋಷ್ಟಕ-1ಬದುಕುಳಿಯಲು ಹೆಣ್ಣಿನ ಹೋರಾಟವನ್ನು ಚಿತ್ರಿಸುತ್ತದೆ.

ಹೆಣ್ಣಿನ ಬದುಕುಳಿಯುವ ಹೋರಾಟದ ತೀವ್ರತೆಯನ್ನು ಹಲವು ಅಂಕೆ ಸಂಖ್ಯೆಗಳಿಂದ ನೋಡಬಹುದು. ಸ್ವಾಭಾವಿಕವಾಗಿ ಮಹಿಳೆಯ ಆಯುಷ್ಯ ಪುರುಷರಿಗಿಂತ 5 ವರ್ಷ ಹೆಚ್ಚಿರಬೇಕು. ಅಂದರೆ ಸಮಾನ ಆರೋಗ್ಯ ಸೇವೆ, ಆಹಾರ ಇತ್ಯಾದಿ ಅವಕಾಶ ಇದ್ದರೆ ಒಟ್ಟಾರೆ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಹೆಚ್ಚಿರಬೇಕು. ಆದರೆ ಕರ್ನಾಟಕದ ಹೆಚ್ಚು ಕಡಿಮೆ ಎಲ್ಲಾ ಜಿಲ್ಲೆಗಳಲ್ಲಿ (ದಕ್ಷಿಣ ಕನ್ನಡ ಜಿಲ್ಲೆ ಬಿಟ್ಟು) ಪ್ರತಿ ಸಾವಿರ ಪುರುಷರಿಗೆ 903 (ಬೆಂಗಳೂರು-ನಗರ) ದಿಂದ 999 (ಹಾಸನ) ಮಹಿಳೆಯರು ಇದ್ದಾರೆ. ರಾಜ್ಯದಲ್ಲಿ ಸರಾಸರಿ ಸಾವಿರ ಪುರುಷರಿಗೆ ಕೇವಲ 960 ಮಹಿಳೆಯರಿದ್ದಾರೆ. (1991 ರ ಅಂಕಿ ಸಂಖ್ಯೆ) ಅಲ್ಲದೆ ಈ ಪ್ರಮಾಣ ಕ್ರಮೇಣ ಇಳಿಯುತ್ತಿದೆ.

ಕೋಷ್ಟಕ 1 ರಿಂದ 15 ರಿಂದ 34 ವಯಸ್ಸಿನ ನಡುವೆ ಶೇ.26 ಮಹಿಳೆಯರು ಸತ್ತರು. ಆದರೆ ಅದೇ ವಯಸ್ಸಿನ ಪುರುಷರು ಶೇಕಡಾ 15 ರಷ್ಟು ಮರಣ ಹೊಂದಿದ್ದಾರೆ. ಅದೇ ರೀತಿ ಒಟ್ಟು ಮಹಿಳೆಯರ ಸಾವಿನಲ್ಲಿ 1 ವರ್ಷದ ಕೆಳಗಿನ ಕೂಸುಗಳ ಸಂಖ್ಯೆ ಶೇ. 13.6 ಆದರೆ, ಗಂಡು ಮಕ್ಕಳಲ್ಲಿ ಸಾವಿನಲ್ಲಿ ಆ ಸಂಖ್ಯೆ ಶೇ. 12.8 15 ರಿಂದ 34 ತಾಯಾಗುವ ವಯೋಮಾನ ಎಂದು ನೆನೆಸಿಕೊಂಡರೆ, ಆ ಮಂದಿ ಸಾಯುವುದು ಉತ್ತಮ ಆರೋಗ್ಯ ಸೇವೆ ಇಲ್ಲದಿರುವುದರಿಂದ ಎಂದು ಸ್ಪಷ್ಟವಾಗುತ್ತದೆ.

ಕೋಷ್ಟಕ -1 ಕರ್ನಾಟಕದಲ್ಲಿ ಗಂಡು-ಹೆಣ್ಣುಗಳ ಸಾವಿನ ಪ್ರಮಾಣ -ವಯಸ್ಸಿಗೆ ಅನುಗುಣವಾಗಿ.			
ವಯೋಮಾನ (ವರ್ಷಗಳಲ್ಲಿ)	ಗಂಡು ಶೇ	ಹೆಣ್ಣು ಶೇ.	ಒಟ್ಟು ಶೇ.
1 ರವರೆಗೆ	12.8	13.6	13.1
1-4	2.8	3.7	3.1
5-14	3.3	4.4	3.7
15-24	5-9	12.03	8-2
25-34	9.0	13.9	10.8
35-44	10.9	8.7	10.1
45-54	14.3	9.1	12.4
55-64	14.8	10.8	13.4
65-69	5.9	4.9	5.5
70ರಮೇಲೆ	12.5	11.2	12.0
ಇಲ್ಲ	7.9	7.4	7.7
ಒಟ್ಟು	100	100	100

ಶಿಕ್ಷಣ ಅವಕಾಶದಲ್ಲಿ ಅಸಮಾನತೆ

ಇದೇ ರೀತಿ ಶಿಕ್ಷಣ ಅವಕಾಶದಲ್ಲಿ ಅಸಮಾನತೆ ಸಹ ಮಹಿಳಾ ಸಾಕ್ಷರತೆಗೂ, ಪುರುಷರ ಸಾಕ್ಷರತೆಗೂ ಇರುವ ವ್ಯತ್ಯಾಸದಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ. 1991ರ ಜನಗಣತಿ ಪ್ರಕಾರ ಮಹಿಳಾ ಸಾಕ್ಷರತೆ ಶೇಕಡಾ 44 ಆದರೆ ಪುರುಷರ ಸಾಕ್ಷರತೆ ಶೇಕಡ 67. ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಮಹಿಳಾ ಸಾಕ್ಷರತೆಯಲ್ಲಿ ಅಗಾಧ ವ್ಯತ್ಯಾಸವಿದೆ. 1991ರ ಜನಗಣತಿ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಸಾಕ್ಷರತೆ ಶೇ. 34.8. ನಗರ ಪ್ರದೇಶದಲ್ಲಿ ಶೇ. 65.7 ದಲಿತ, ಆದಿವಾಸಿ ಮಹಿಳೆಯರಲ್ಲಿ ಸಾಕ್ಷರತೆ ಇನ್ನೂ ಕಡಿಮೆ ನಗರ ಪ್ರದೇಶದಲ್ಲಿ ಶೇಕಡಾ 26, ಗ್ರಾಮೀಣ ಪ್ರದೇಶದಲ್ಲಿ ಶೇಕಡಾ 24. ಜಿಲ್ಲಾವಾರಾಗಿ ಬಹಳ ವ್ಯತ್ಯಾಸವಿದೆ. ಬೆಂಗಳೂರು ನಗರ (ಶೇ.68.8) ದಕ್ಷಿಣ ಕನ್ನಡ (ಶೇ. 68)ಗಳಲ್ಲಿ ಮಹಿಳಾ ಸಾಕ್ಷರತೆ ಅತಿಹೆಚ್ಚಿದ್ದರೆ, ಅತ್ಯಂತ ಕಡಿಮೆ ಮಹಿಳಾ ಸಾಕ್ಷರತೆ ಇರುವುದು ಗುಲ್ಬರ್ಗಾ (ಶೇ. 24.5) ರಾಯಚೂರು (ಶೇ. 22)ಗಳಲ್ಲಿ.

ಸಾಕ್ಷರತೆಯಲ್ಲಿ ವ್ಯತ್ಯಾಸ (ಪುರುಷರು ಮತ್ತು ಮಹಿಳೆಯರ ನಡುವೆ) ಕೊಡಗು (ಶೇ. 14.1), ಬೆಂಗಳೂರು ನಗರ (ಶೇ. 14.1)ಗಳಲ್ಲಿ ಅತ್ಯಂತ ಕಡಿಮೆ ಅತ್ಯಂತ ಹೆಚ್ಚು ಮಹಿಳಾ ಸಾಕ್ಷರತೆಯಿರುವಲ್ಲೂ ಶೇಕಡಾ 14 ರಷ್ಟು ಸಾಕ್ಷರತೆಯಲ್ಲಿ ವ್ಯತ್ಯಾಸವಿದೆ ಎಂದು ಗಮನಿಸಬೇಕಾದ್ದು. ಕೋಷ್ಟಕ-2ರಲ್ಲಿ ಪುರುಷ ಮತ್ತು ಮಹಿಳಾ ಸಾಕ್ಷರತೆಯಲ್ಲಿರುವ ವ್ಯತ್ಯಾಸ (ಪುರುಷರ ಸಾಕ್ಷರತೆ ಯಾವಾಗಲೂ ಹೆಚ್ಚು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ) ಕೊಡಲಾಗಿದೆ.

ಕೋಷ್ಟಕ-2ರಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು.

ಎಲ್ಲಾ ಜಿಲ್ಲೆಗಳಲ್ಲಿ ನಗರ ಪ್ರದೇಶಗಳಿಗೂ, ಗ್ರಾಮೀಣ ಪ್ರದೇಶಗಳಿಗೂ ಸಾಕ್ಷರತಾ ಪ್ರಮಾಣದ ವ್ಯತ್ಯಾಸದಲ್ಲಿ ತೀವ್ರ ಅಂತರವಿದೆ. ನಗರ ಪ್ರದೇಶದಲ್ಲಿ ಸಾಕ್ಷರತಾ ಪ್ರಮಾಣ ವ್ಯತ್ಯಾಸ ಕಡಿಮೆ ಇದೆ. ಅದರಲ್ಲೂ ರಾಯಚೂರು, ಗುಲ್ಬರ್ಗಾ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ಈ ವ್ಯತ್ಯಾಸ ಅಷ್ಟಾಗಿ ಇಲ್ಲ. ಅತ್ಯಂತ ಹೆಚ್ಚು ವ್ಯತ್ಯಾಸ ಇರುವ ಜಿಲ್ಲೆಗಳೆಂದರೆ ಬಿಜಾಪುರ (29.63) ಬೀದರ (ಶೇ. 28.44) ಬೆಳಗಾಂ(ಶೇ. 27.96), ಗುಲ್ಬರ್ಗಾ (ಶೇ. 27.59) ರಾಯಚೂರು (ಶೇ.27.38) ಬೆಂಗಳೂರು ನಗರದಂತಹ ಜಿಲ್ಲೆಯಲ್ಲಿ ನಗರ ಪ್ರದೇಶಕ್ಕೂ ಗ್ರಾಮೀಣ ಪ್ರದೇಶಕ್ಕೂ ವ್ಯತ್ಯಾಸವಿದೆ.

ಮಹಿಳಾ ಸಾಕ್ಷರತೆಗೂ ಜನಸಂಖ್ಯಾ ಏರಿಕೆ ಪ್ರಮಾಣಕ್ಕೂ, ಆರೋಗ್ಯ ಸೇವೆಗಳ ಬಗ್ಗೆ ಹೆಚ್ಚಿನ ಅರಿವಿಗೂ ನೇರ ಸಂಬಂಧ ಇದೆ ಎಂದು ಹಲವು ಅಧ್ಯಯನಗಳು ಹೊರಗೆಡಹಿವೆ. ಹೆಚ್ಚೇನೂ ತಲಾ ಆದಾಯವಿಲ್ಲದ, ಆರೋಗ್ಯಸೇವೆಯೂ ಭಾರಿ ಹೆಚ್ಚೇನೂ ಇಲ್ಲದ ಪ್ರದೇಶಗಳಲ್ಲೂ, ಜನಸಂಖ್ಯಾ ಇಳಿಕೆ ಮತ್ತು ಒಟ್ಟಾರೆ ಆರೋಗ್ಯ ಮಹಿಳಾ ಸಾಕ್ಷರತೆ ಹೆಚ್ಚಿಸುವುದರಿಂದ ಸಾಧಿಸಬಹುದು ಎಂದು ಕೇರಳ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳ ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ.

ಬಡತನ, ಮಹಿಳಾ ಶ್ರಮದ ಮೇಲೆ ಮನೆಯ ಅವಲಂಬನೆ, ಹತ್ತಿರ ಸ್ಕೂಲ್ ಲಭ್ಯವಿಲ್ಲದಿರುವುದು, ಮಹಿಳಾ ಶಿಕ್ಷಕಿಯರು ಲಭ್ಯವಿಲ್ಲದಿರುವುದು, ಮಹಿಳಾ ಸಾಕ್ಷರತೆಯನ್ನು ಹೆಚ್ಚಿಸುವಲ್ಲಿ ಇರುವ ತೊಡಕುಗಳು. ಇದನ್ನು ನೋಡಿದರೆ ಮಹಿಳಾ



ಸಾಕ್ಷರತೆ ಹೆಚ್ಚುವುದಿಲ್ಲ. ಹೆಣ್ಣು ಮಕ್ಕಳನ್ನು ಶಾಲೆಗೆ ಸೇರಿಸುವುದು, ಉಳಿಸಿಕೊಳ್ಳಲು ಅತ್ಯಂತ ಸೃಜನಶೀಲ ಕ್ರಮಗಳ ಅಗತ್ಯ ಎಂದು ಈ ವರೆಗಿನ ಸಾಕ್ಷರತಾ ಚಳುವಳಿಗಳ ಅನುಭವ. ಮಹಿಳೆಗೆ ಸಮಾಜದಲ್ಲಿ ಮಾತ್ರವಲ್ಲ, ಮನೆಯೊಳಗೂ ಎಲ್ಲಾ ಸಂಪನ್ಮೂಲಗಳನ್ನು ಪಡೆಯಲು ಸಮಾನ ಅವಕಾಶವಿರುವುದಿಲ್ಲ. ಕುಟುಂಬದಲ್ಲಿ (ಬಡತನವಿರಲಿ, ಸಿರಿತನವಿರಲಿ) ಲಭ್ಯವಿರುವ ಆಹಾರ, ನೀರು ಇತ್ಯಾದಿಯಲ್ಲೂ ಮಹಿಳೆಯ ಪಾಲು ಯಾವಾಗಲೂ ಕಡಿಮೆ. ತಾಯಿ ಸಹ ಗಂಡು ಮಗುವಿಗೆ ಹೆಚ್ಚು ಪೌಷ್ಟಿಕ ಆಹಾರ ಕೊಡುತ್ತಾಳೆ. ಉಳಿದರೆ, ಉಳಿದಷ್ಟು ಮಗಳಿಗೆ, ಕುಟುಂಬದ ಬಡತನದಲ್ಲೂ, ಮಹಿಳೆಗೆ ಅಸಮಾನ ಹಂಚಿಕೆ. ಕುಟುಂಬಕ್ಕೆ ನೀರು, ಮೇವು, ಶೌಚಾಲಯ ವ್ಯವಸ್ಥೆ, ಉರುವಲು ಅಭಾವ ಇದ್ದರೆ, ಅದರ ಹೆಚ್ಚಿನ ಪರಿಣಾಮ ಮಹಿಳೆ ಮೇಲೆ. ನೀರು, ಮೇವು ಉರುವಲು ಇಡೀ ಕುಟುಂಬಕ್ಕೆ ಒದಗಿಸುವುದು, ಅದಕ್ಕೆ ಅಗತ್ಯವಿದ್ದಲ್ಲಿ ಮೈಲುಗಟ್ಟಲೆ ನಡೆಯುವುದು ಮಹಿಳೆಯ ಪಾಲಿಗೆ. ಕುಟುಂಬ ವಾಸಿಸುವ ಪರಿಸರದಲ್ಲಿ ಏರುಪೇರಿನ ಪ್ರಭಾವ ಸಹ ಮಹಿಳೆಯರ ಮೇಲೆ ಹೆಚ್ಚು. ಕಾಡು, ನೀರು, ನೆಲದ ಸಂಪನ್ಮೂಲಗಳು ನಷ್ಟವಾಗುತ್ತಾ ನಶಿಸುತ್ತಾಹೋದಂತೆಯೇ ಪರಿಣಾಮ ಬಿರುವುದು, ಮಹಿಳೆಯ ಮೇಲೆ ಹೆಚ್ಚು.

ಮಹಿಳೆಯ ಉದ್ಯೋಗ, ಆದಾಯ, ವೇತನ

ಮಹಿಳೆಯ ಕೆಲಸ ಮನೆಯಲ್ಲಿರಲಿ, ಕೃಷಿ ಮುಂತಾದ ಕುಟುಂಬದ ಆರ್ಥಿಕ ಚಟುವಟಿಕೆಯಲ್ಲಿರಲಿ ಯಾವಾಗಲೂ ಲೆಕ್ಕಕಿಲ್ಲದೆ ಹೋಗುತ್ತದೆ. ಮಹಿಳೆಯ ಉದ್ಯೋಗದ ಬಗ್ಗೆ ಇರುವ ಅಂಕಿ-ಸಂಖ್ಯೆಗಳಲ್ಲೂ ಇದು ಸ್ಪಷ್ಟವಾಗಿ ಕಾಣುತ್ತದೆ. ಮಹಿಳೆಯರೇ ಸೇರಿದಂತೆ ಸಾಮಾನ್ಯವಾಗಿ ಮಹಿಳೆಯ ದುಡಿಮೆಯನ್ನು 'ಉತ್ಪಾದಕ ದುಡಿಮೆ' ಎಂದು ಯಾರೂ ಪರಿಗಣಿಸುವುದಿಲ್ಲ. ಅದಕ್ಕೆ ತಕ್ಕ ವೇತನ / ಆದಾಯ ಆಕೆಗೆ ಸಲ್ಲಬೇಕೆಂಬುದಕ್ಕೂ ಗಮನ ಕೊಡುವುದಿಲ್ಲ. ಆದ್ದರಿಂದ ಮಹಿಳೆಯ ದುಡಿಮೆ, ವೇತನ, ಆದಾಯದ ಬಗೆಗೆ ಯಾವುದೇ ಇಲಾಖೆ ಸಹ ನಿಜ ಪರಿಸ್ಥಿತಿಯನ್ನು ಪೂರ್ಣವಾಗಿ ಪ್ರತಿಬಿಂಬಿಸುವುದಿಲ್ಲ;

ಮಹಿಳೆಯ ದುಡಿಮೆಗೆ ವೇತನ / ಕೂಲಿ ಕೊಡಬೇಕಾದಾಗಲೂ ಯಾವಾಗಲೂ ಪುರುಷರಿಗಿಂತ ಕಡಿಮೆ - ಅದೇ ಕೆಲಸಕ್ಕೆ. ಮುಂದಿನ ಅಂಕಿ-ಸಂಖ್ಯೆಗಳನ್ನೆಲ್ಲ ಮಹಿಳೆಯ ದುಡಿಮೆ ಬಗ್ಗೆ ಜನಜನಿತವಾದ ಪಕ್ಷಪಾತವನ್ನು ಗಮನದಲ್ಲಿಟ್ಟುಕೊಂಡು ನೋಡಬೇಕು.

ವೇತನ/ಆದಾಯ ಬರುವ ದುಡಿಮೆಯಲ್ಲಿ ಪಾಲುಗೊಂಡಿರುವುದು. ಮಹಿಳೆಯರ ಪ್ರಮಾಣ ಶೇ. 29. (ಪುರುಷರಿಗೆ ಈ ಪ್ರಮಾಣ ಶೇ. 53) ನಗರ ಪ್ರದೇಶದಲ್ಲಿ ಮಹಿಳೆಯರ ದುಡಿಮೆಯ ಪ್ರಮಾಣ ಇನ್ನೂ ಕಡಿಮೆ. ಶೇ.13 ರಷ್ಟು ಮಹಿಳೆಯರು ಮಾತ್ರ ವೇತನ / ಆದಾಯ ಬರುವ ದುಡಿಮೆಯಲ್ಲಿ ತೊಡಗಿದ್ದಾರೆ. (ಪುರುಷರಿಗೆ ಈ ಪ್ರಮಾಣ ಶೇ. 50)

ಮಹಿಳೆಯರಿಗೆ ಸಂಘಟಿತ ವಲಯದಲ್ಲಿ ಉದ್ಯೋಗ ಸಿಗುವುದೇ ಕಡಿಮೆ, ಸಿಕ್ಕಾಗಲೂ, ಉದ್ಯೋಗ ಕಡಿತವಾಗುವುದು ಮಹಿಳೆಯರದ್ದೇ ಮೊದಲು. ಮಹಿಳೆಗೆ ಉದ್ಯೋಗ ಸಿಗುವುದು ಕೊನೆಗೆ, ಉದ್ಯೋಗ ಕಳೆದುಕೊಳ್ಳುವುದರಲ್ಲಿ

ಪುಟ 12 ಕ್ಕೆ

ಕೋಷ್ಟಕ -2 ಕರ್ನಾಟಕದಲ್ಲಿ ಪುರುಷ ಮತ್ತು ಮಹಿಳಾ ಸಾಕ್ಷರತೆ ನಡುವೆ ವ್ಯತ್ಯಾಸ ಜಿಲ್ಲಾವಾರು (1991ರ ಜನಗಣತಿ ಪ್ರಕಾರ)			
ಜಿಲ್ಲೆ	ಪುರುಷ ಮತ್ತು ಮಹಿಳಾ ಸಾಕ್ಷರತೆ ನಡುವೆ ವ್ಯತ್ಯಾಸ (ಶೇಕಡಾದಲ್ಲಿ)		
	ಒಟ್ಟು	ಗ್ರಾಮೀಣ	ನಗರ
ಬೆಂಗಳೂರುನಗರ	14.13	23.88	12.60
ಬೆಂ. ಗ್ರಾಮೀಣ	23.36	25.18	14.88
ಬೆಳಗಾಂ	27.96	30.16	20.55
ಬಳ್ಳಾರಿ	26.74	28.39	22.61
ಬೀದರ್	28.44	29.34	22.85
ಬಿಜಾಪುರ	29.63	30.80	25.61
ಚಿಕ್ಕಮಗಳೂರು	19.25	20.40	12.70
ಚಿತ್ರದುರ್ಗ	23.52	29.94	16.15
ದಕ್ಷಿಣ ಕನ್ನಡ	16.44	17.65	12.66
ಧಾರವಾಡ	26.17	29.57	19.89
ಗುಲ್ಬರ್ಗಾ	27.59	28.26	23.99
ಹಾಸನ	23.67	25.95	12.94
ಕೊಡಗು	14.13	14.63	10.67
ಕೋಲಾರ	24.94	27.73	15.48
ಮಂಡ್ಯ	22.48	23.77	15.09
ಮೈಸೂರು	18.28	20.48	12.78
ರಾಯಚೂರು	27.38	27.78	24.94
ಶಿವಮೊಗ್ಗ	19.82	22.14	12.88
ತುಮಕೂರು	24.56	26.02	14.72
ಉತ್ತರ ಕನ್ನಡ	19.62	21.27	14.33
ರಾಜ್ಯ (ಒಟ್ಟು)	22.92	25.54	16.30

ಮಹಿಳಾ ಅಸಮಾನತೆ

ಜಗತ್ತಿನ ಪ್ರಥಮ ಶೋಷಿತೆ ಮಹಿಳೆ-ಇಂದು

ವಿಶ್ವ ಶ್ರಮಿಕರ ದಿನಾಚರಣೆ ಮೇ ಒಂದು. ಹೊಸ ಶತಮಾನದ ಪ್ರಥಮ ಮೇ ದಿನವನ್ನು ನಾವೀಗ ಆಚರಿಸುತ್ತಿದ್ದೇವೆ.

ಶ್ರಮಿಕರ ದಿನ ಎಂದ ಮೇಲೆ ಮಹಿಳೆಯರನ್ನು ಹೊರತುಪಡಿಸಿ ವಿಚಾರಮಾಡಲು ಹೇಗೆ ಸಾಧ್ಯ? ಜನಸಂಖ್ಯೆಯಲ್ಲಿ ಅರ್ಧಪಾಲನ್ನು ಹೊಂದಿರುವ ಮಹಿಳೆಯರು, ಲೆಕ್ಕಕ್ಕೆ ತೆಗೆದುಕೊಳ್ಳದ ಕೌಟುಂಬಿಕ ದುಡಿತದಿಂದ ಹಿಡಿದು ಗಗನದಲ್ಲಿ ಹಾರಾಡುವ ವಿಮಾನಗಳ ವರೆಗೆ ಎಷ್ಟೆಲ್ಲಾ ಕಾಣಿಕೆಯನ್ನು ದೇಶಕ್ಕೆ ನೀಡುತ್ತಿಲ್ಲ. ಅಪಾರ ಶ್ರಮವನ್ನು ಎಲ್ಲ ಹಂತಗಳಲ್ಲು ಧಾರೆಯೆರೆಯುವ ಮೂಲಕ ಶೋಷಣೆಯೆಂಬ ನೊಗಕ್ಕೆ ಮೊದಲನೆ ಹೆಗಲಾಗಿ ಸವೆಯುತ್ತಿಲ್ಲ.

ಬಂಡವಾಳಶಾಹಿ ಸಮಾಜಗಳಲ್ಲಿ ಪುರುಷರ ಶೋಷಣೆಗೆ ಒಂದು ಮುಖವಾದರೆ ಮಹಿಳೆಯರ ಶೋಷಣೆಗೆ ನಾನಾ ಮುಖ.

ಎನ್.ಪ್ರಭಾ

ಬಂಡವಾಳಶಾಹಿ ಉತ್ಪಾದನಾ ಸಂಬಂಧಗಳು ಹೆಚ್ಚಾಗಿ ಪುರುಷರ ಶ್ರಮವನ್ನು ಮಾತ್ರ ಲೂಟಿ ಹೊಡೆಯುವಲ್ಲಿ ಮಗ್ನವಾಗಿರುತ್ತವೆ. ಆದರೆ ಮಹಿಳೆಯರ ವಿಚಾರದಲ್ಲಿ ಇನ್ನೂ ಮುಂದೆ ಹೋಗಿ ಅವರ ವಿಚಾರ, ಆಲೋಚನೆ ಸ್ವಂತಿಕೆ, ಮಾನಸಿಕ ಸ್ಥೈರ್ಯ, ಆತ್ಮಾಭಿಮಾನ ಎಲ್ಲವನ್ನೂ ಹೀರುವುದರ ಜೊತೆಗೆ ಒಂದು ಕಡೆ ದುಡಿಯುವ ಯಂತ್ರವಾಗಿ ಮತ್ತೊಂದು ಕಡೆ ಭೋಗವಸ್ತುವನ್ನಾಗಿ ಮಾತ್ರ ಬಳಸಲು ಮುಂದಾಗುತ್ತವೆ.

ವಿಶ್ವದ ಶ್ರಮಿಕರ ಬಂಧು ಎಂಗಲ್ಸ್, ಪ್ರಥಮ ಶೋಷಿತೆ ಮಹಿಳೆ ಎಂದು ವ್ಯಾಖ್ಯಾನಿಸಿದ್ದು 18 ರ ಶತಕದಲ್ಲಿ ಇದೀಗ ನಾವು 21 ನೇ ಶತಮಾನಕ್ಕೆ ಕಾಲಿರಿಸಿ ದ್ದೇವೆ. ಸಮಾಜ ಕ್ರಮಿಸಿದ ಈ ದೀರ್ಘ ಅವಧಿಯಲ್ಲಿ ಎಂಗಲ್ಸ್ ಆಡಿದ ಮಾತುಗಳನ್ನು ಸವೆಸಲಾಗಿದೆಯೆ ಅಥವಾ ಮಾಮೂಲಿ ಪರಿಸ್ಥಿತಿ ಮುಂದುವರೆದಿದೆಯೇ ಇಲ್ಲವೆ, ಶೋಷಣೆ ಇನ್ನು ತೀವ್ರಗೊಂಡಿದೆಯೇ ಇತ್ಯಾದಿಯಾಗಿ ವಿಶ್ಲೇಷಿಸಿಕೊಳ್ಳುವ ಮೂಲಕ ಹಾಗೂ "ಒಟ್ಟು ಸಮಾಜದ ವಿಮೋಚನೆಯಲ್ಲಿಯೇ ಮಹಿಳಾ ವಿಮೋಚನೆ ಅಡಗಿದೆ" ಎಂಬ ಅವರದ್ದೇ ಇನ್ನೊಂದು ಮಾತನ್ನು ನೆನಪಿಸಿಕೊಂಡು ಆ ನಿಟ್ಟಿನಲ್ಲಿ ಸಾಗಿರುವ ಕೆಲಸಗಳ ವಿಮರ್ಶೆಯ ಮೂಲಕ ಮೇ 1 ರ ಶ್ರಮಿಕರ ದಿನಾಚರಣೆಯನ್ನು ಅರ್ಥ ಪೂರ್ಣವಾಗಿ ಆಚರಿಸಬೇಕಾಗಿದೆ. ಮಹಿಳೆಯರೂ ನಿರ್ಣಾಯಕ ಪಾತ್ರವನ್ನು ವಹಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಅದರಲ್ಲೂ ವಿಶೇಷವಾಗಿ ರಾಜಧಾನಿಯ ಮಹಿಳೆಯರು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಅವುಗಳಿಗಿರುವ ನಾನಾ ಮುಖಗಳ ಬಗ್ಗೆ ಪರಿಚಯಿಸುವ ಒಂದು ಕಿರು ಲೇಖನವಿದು.

> ಶ್ರಮಿಕರ ದಿನ ಎಂದ ಮೇಲೆ ಮಹಿಳೆಯರನ್ನು ಹೊರತುಪಡಿಸಿ ವಿಚಾರ ಮಾಡಲು ಹೇಗೆ ಸಾಧ್ಯ?

ದುಡಿಯುವ ಯಂತ್ರವಾಗಿ ಮಹಿಳೆ

ಬೀಡಿ, ಅಗರಬತ್ತಿ, ಗಾರ್ಮೆಂಟ್ಸ್ ಎಲೆಕ್ಟ್ರಾನಿಕ್ಸ್, ಉಲ್ಲನ್, ಸಾರ್ವಜನಿಕ ಕಾರ್ಖಾನೆಗಳು, ರಾಜ್ಯ ಸರ್ಕಾರ ಕೇಂದ್ರ ಸರ್ಕಾರ, ಖಾಸಗಿ ವಲಯಗಳು, ಅಂಗನವಾಡಿ, ಬ್ಯಾಂಕಿಂಗ್, ವಿಮೆ, ವಿಮಾನಯಾನ ಗೃಹಗೆಲಸ, ಕೃಷಿ, ಕಟ್ಟಡ, ರಸ್ತೆ ಚರಂಡಿ ನಿರ್ಮಾಣ, ಸಫಾಯಿ ಕರ್ಮಚಾರಿ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ.

ಸಂಘಟಿತ ಅಸಂಘಟಿತ ಕ್ಷೇತ್ರಗಳೆರಡರಲ್ಲೂ ಲಿಂಗಭೇದದ ಹಲವಾರು ಸೂಚನೆಗಳಿವೆ. ಮಹಿಳೆಯರ ಸರಾಸರಿ ಕೂಲಿ ಪುರುಷರಿಗಿಂತ ಕಡಿಮೆ ಇದೆ. ಬಹಳ ಸಂಖ್ಯೆಯ ಮಹಿಳೆಯರಿಗೆ ಕೆಲಸದ ಖಾತರಿ ಇಲ್ಲ, ಕನಿಷ್ಠ ಕೂಲಿ ಇಲ್ಲ, ಕನಿಷ್ಠ ಅಸಂಘಟಿತ ವಲಯಗಳಲ್ಲಿಯೇ ಅತ್ಯಂತ ಕಡಿಮೆ ಸಂಬಳಕ್ಕೆ ಹೆಚ್ಚಿನ ಮಹಿಳೆಯರು ದುಡಿಯುತ್ತಿದ್ದಾರೆ. ಹೆಚ್ಚು ಪರಿಶ್ರಮವಿರುವ ಕಡಿಮೆ ಕುಶಲತೆಯುಳ್ಳ ಕೆಲಸಗಳನ್ನು ಹೆಚ್ಚಾಗಿ ಮಾಡುವುದು. ಜೊತೆಗೆ ಆಸ್ತಿ ಹೊಂದುವ ಅವಕಾಶವೂ ಇಲ್ಲದೆ ಮಹಿಳೆಯರು ಪುರುಷರಿಗಿಂತ ಉತ್ಪಾದನಾ ಕಾರ್ಯವಿಧಾನದ ಅತ್ಯಂತ ಕೆಳಹಂತಕ್ಕೆ ತಲುಪಿದ್ದಾರೆ.

ಹೆರಿಗೆ ಭತ್ಯೆ, ಹೆರಿಗೆ ರಜೆ, ರಜೆ ದುಡಿಯುವ ಜಾಗಗಳಲ್ಲಿ ಕ್ರೀಚ್ ಸೌಲಭ್ಯಗಳ ತೀವ್ರ ಅಭಾವ, ಉತ್ತಮಗಾಳಿ, ಬೆಳಕು, ವಿಶ್ರಾಂತಿ ಕೊಠಡಿಗಳ ಅಲಭ್ಯತೆ, ಇ.ಎಸ್.ಐ. ಪಿ.ಎಫ್. ಮುಂತಾದ ಕನಿಷ್ಠ ಸೌಲಭ್ಯಗಳೂ ಇಲ್ಲದೆ ಲಕ್ಷಾಂತರ ಮಹಿಳೆಯರು ರಾಜ್ಯಾದ್ಯಂತ ದುಡಿಯುತ್ತಿದ್ದಾರೆ.

ಮಹಿಳೆಯರ ಉದ್ಯೋಗ ಪ್ರಮಾಣ ಪುರುಷರಿಗಿಂತ ಕಡಿಮೆ ಇದೆ. ಪುರುಷರ ಉದ್ಯೋಗ ಪ್ರಮಾಣ ಶೇ. 53 ಆಗಿದ್ದರೆ ಮಹಿಳೆಯರದ್ದು ಶೇ 28. ಮಹಿಳೆಯರ ಕಡಿಮೆ ಭಾಗವಹಿಸುವಿಕೆಯು ಕಾರ್ಮಿಕ ಕ್ಷೇತ್ರದಲ್ಲಿ ಲಿಂಗ ಪಕ್ಷಪಾತವನ್ನು ಸಾರುತ್ತಿದೆ. ಕೆಲಸದ ಜಾಗಗಳಲ್ಲಿ ತೀವ್ರವಾಗುತ್ತಿರುವ ಲೈಂಗಿಕ ಕಿರುಕುಳ ಇತ್ತೀಚಿನ ದಿನಗಳಲ್ಲಿ ಮಹಿಳೆಯರನ್ನು ಕಾಡುತ್ತಿದೆ. ಲೈಂಗಿಕ ಕಿರುಕುಳ ಸೃಷ್ಟಿಸುವ ಅಸಹನೀಯ ಸನ್ನಿವೇಶ ಮಹಿಳೆಯರ ದುಡಿಯುವ ಉತ್ಸಾಹವನ್ನೇ ಕುಗ್ಗಿಸುವಂತೆ ಮಾಡಿದೆ. ಈ ಕುರಿತು ಕೆಳ ನ್ಯಾಯಾಲಯಗಳಿಂದ ಹಿಡಿದು ಸುಪ್ರೀಂ ಕೋರ್ಟ್‌ವರೆಗೆ ಮಹತ್ವದ ತೀರ್ಪುಗಳು ಹೊರಬಿದ್ದಿದ್ದರೂ ಕಿರುಕುಳದ ಪ್ರಕರಣಗಳು ಕಡಿಮೆಯಾಗುತ್ತಿಲ್ಲ.

ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರೆಂದರೆ ಕಷ್ಟವಿಲ್ಲದ ಮಹಿಳೆಯರೆಂದೇ ಸಾಮಾನ್ಯ ನಂಬಿಕೆ. ಇರಬಹುದು ಅಸಂಘಟಿತ ವಲಯದ ಇತರೆ ಉದ್ಯೋಗಸ್ಥ ಮಹಿಳೆಯರಿಗೆ ಹೋಲಿಸಿದರೆ ಆರ್ಥಿಕವಾಗಿ ಇವರು ಸದೃಢವಾಗಿಯೇ ಕಾಣುತ್ತಾರೆ. ಆದರೆ ಇನ್ನಿತರೆ ಕಷ್ಟಗಳು ಇವರನ್ನೂ ಇತ್ತೀಚಿನ ದಿನಗಳಲ್ಲಿ ಪ್ರಮುಖವಾಗಿ ಕಾಡುತ್ತಿರುವ ಸಮಸ್ಯೆಯೆಂದರೆ ಲೈಂಗಿಕ ಕಿರುಕುಳ. ಶಾಲೆ-ಕಾಲೇಜು ಆಸ್ಪತ್ರೆ-ಕಾರ್ಖಾನೆ, ಕಛೇರಿಗಳಲ್ಲಿ ದುಡಿಯುವ ಮಹಿಳೆಯರು ಲೈಂಗಿಕ ಕಿರುಕುಳದ ನಾನಾ ರೀತಿಯ ದೂರುಗಳನ್ನೊತ್ತು ನಮ್ಮ ಬಳಿ ಬರುತ್ತಾರೆ. ಅವುಗಳಲ್ಲಿ ಒಂದು ಉದಾಹರಣೆಯನ್ನು ನಿಮ್ಮ ಮುಂದೆ ಇಡಲು ಇಚ್ಛಿಸುತ್ತೇನೆ. ಅಂಚೆ ಇಲಾಖೆಯ ಬೆಂಗಳೂರು ಶಾಖೆಯೊಂದರಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬರು ದೂರೊಂದನ್ನು ತಂದರು ಅವರ ಮೇಲಧಿಕಾರಿಗಳು ಆಕೆಯನ್ನು ಒಮ್ಮೆ ಛೇಂಬರ್‌ಗೆ ಕರೆದು ಈ ರೀತಿಯಾಗಿ ಉಚ್ಚರಿಸಿದರು Go with Krisna, Eat With krisna Sleep with Krishna You need not worry it is like Eat cricket Drink cricket sleep cricket ಅಷ್ಟೆ (ನೀನು ಕೃಷ್ಣನ ಜೊತೆ ಹೋಗು. ಅವನ ಜೊತೆ ತಿನ್ನು, ಕುಡಿ, ಮಲಗು ನೀನೇನು ಯೋಚನೆ ಮಾಡಬೇಡ ಅದು ಕ್ರಿಕೆಟ್ ತಿನ್ನು, ಕ್ರಿಕೆಟ್ ಕುಡಿ, ಕ್ರಿಕೆಟ್‌ನೊಂದಿಗೆ ನಿದ್ರಿಸು, ಎಂದು ಹೇಳುತ್ತಾರಲ್ಲಾ ಆ ರೀತಿ ಅಷ್ಟೆ) ಎಂದರು.

ಈ ಮುಂಚೆ ಸಾಕಷ್ಟು ರೀತಿಯ ಕಿರಿಕಿರಿಗಳನ್ನು ಅನುಭವಿಸಿದ್ದ ಆಕೆಗೆ ಒಬ್ಬ [illegible] ಮಲಗು ಎಂದು ಹೇಳುವ ಮಟ್ಟಕ್ಕೆ ಆಕೆಯ ಮೇಲಧಿಕಾರಿ ಹೋದದ್ದು ಆಕೆಯನ್ನು ಕೆರಳಿಸಿತು. ಉದ್ಯೋಗ ಹೋದರೂ ಚಿಂತೆಯಿಲ್ಲವೆಂದು ಪ್ರತಿಭಟನೆಗೆ ಮುಂದಾದರು. ಈಕೆ ಮಾತ್ರವೇ ಅಲ್ಲ ಮಹಿಳಾ ಸಹೋದ್ಯೋಗಿಗಳೆಲ್ಲರೂ ಅಧಿಕಾರಿಯ ಉಪಟಳಕ್ಕೆ ಒಳಗಾಗಿದ್ದರು ಸಹ ದೂರು ನೀಡುವ ಅಥವಾ ಎದುರು ಹಾಕಿಕೊಳ್ಳುವ ಧೈರ್ಯ ಮಾಡಿರಲಿಲ್ಲ. ಆದರೆ ಈ ಬಾರಿ ಹಾಗಾಗಲಿಲ್ಲ, ಎಲ್ಲರೂ ಮುಂದಾದರು! ಕಛೇರಿಯ ಉನ್ನತ ಅಧಿಕಾರಿಗಳಿಗೆ ದೂರಿತ್ತರು! ಉನ್ನತ ಅಧಿಕಾರಿಯು ಹಾಗೂ ಕಿರುಕುಳ ನೀಡಿದವನು ಒಂದೇ ಜಾತಿ ಯವರಾಗಿದ್ದ ಕಾರಣಕ್ಕೆ ಕ್ರಮವಹಿಸಲು ಮುಂದಾಗಲಿಲ್ಲ. (ಪುರುಷರ ಹಿತಾಸಕ್ತಿಯೂ ಆಗಿರಬಹುದು) ಕೊನೆಗೆ ಜನವಾದಿ ಮಹಿಳಾ ಸಂಘಟನೆಗೆ ದೂರು ನೀಡಲಾಗಿ ಸಂಘಟನೆಯ ಮುಖಂಡರು ಎಲ್ಲ ಹಂತದ ಅಧಿಕಾರಿಗಳನ್ನು ಭೇಟಿಯಾಗಿ ದೂರು ನೀಡುವುದರೊಂದಿಗೆ ಆರೋಪಿಯನ್ನು ಕೆಲಸದಿಂದ ವಜಾ ಮಾಡಲು ಆಗ್ರಹಿಸಿ ಗಡುವನ್ನು ಸಹ ನೀಡಿ ಬಂದರು. ಜೊತೆಗೆ ಕಛೇರಿಯ ಮುಂದೆ ಪ್ರತಿಭಟನೆ ಮಾಡುವ ಎಚ್ಚರಿಕೆಯನ್ನು ನೀಡಿ ಬಂದರು. ಇಷ್ಟಾದ ನಂತರ ಆರೋಪಿಯನ್ನು ದೂರದ ಊರಿಗೆ ವರ್ಗ ಮಾಡಲಾಯಿತು. ಈಗ ಅಲ್ಲಿನ ಮಹಿಳಾ ನೌಕರರು ನಿರಾಳವಾಗಿ ಉಸಿರಾಡುವಂತಾಗಿದೆ.



ಸರ್ಕಾರಿ ಕಚೇರಿಗಳಲ್ಲೇ ಹೀಗೆಂದರೆ ಇನ್ನು ಗಾರ್ಮೆಂಟ್ಸ್, ಕಟ್ಟಡ, ಎಲೆಕ್ಟ್ರಾನಿಕ್ಸ್, ಖಾಸಗಿ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರ ಪಾಡೇನು? ಲೈಂಗಿಕ ಕಿರುಕುಳಗಳು ಅತ್ಯಾಚಾರಗೈಯ್ಯುವ ವರೆಗೆ ಮುಂದೆ ಹೋದ ಪ್ರಕರಣಗಳು ಸಹ ಸಾಕಷ್ಟು ಸಂಖ್ಯೆಯಲ್ಲಿ ಬೆಳಕಿಗೆ ಬಂದಿವೆ.

ಖಾಸಗಿ ವಲಯಗಳಲ್ಲಿ ಲೈಂಗಿಕ ಕಿರುಕುಳಕ್ಕೆ ಸಹೋದ್ಯೋಗಿಗಳು ಮುಂದಾಗುವುದು ಒಂದು ಕಡೆಯಾದರೆ ಆಡಳಿತ ವರ್ಗದ ಕುಮ್ಮಕ್ಕಿನಿಂದಾಗಿ ನಡೆಯುವ ಕಿರುಕುಳಗಳು ಮತ್ತೊಂದು ಕಡೆ. ಮಹಿಳೆಯರು ಕೊಟ್ಟ ಸೌಲಭ್ಯ, ಕೊಟ್ಟ ಕೂಲಿಗಷ್ಟೇ, ಬಾಯುಮ್ಮುಚ್ಚಿಕೊಂಡು ಯಾವಾಗಲೂ ಕೆಲಸ ಮಾಡಬೇಕೆಂದು ಬಯಸುವ ಮಾಲೀಕ ವರ್ಗ ಹಕ್ಕುಗಳ ಸಲುವಾಗಿ ಮುಂದಾಗುವ ಮಹಿಳೆಯರ ಮೇಲೆ ಹರಿಹಾಯಲು ಉಪಯೋಗ ಮಾಡುವ ನಾನಾ ಅಸ್ತ್ರಗಳಲ್ಲಿ ಲೈಂಗಿಕ ಕಿರುಕುಳವೆಂಬ ಅಸ್ತ್ರ ಪ್ರಮುಖವಾದುದು.

ಇತ್ತೀಚಿನ ದಿನಗಳಲ್ಲಿ ಇವೆಲ್ಲವುಗಳಿಗಿಂತ ದೊಡ್ಡ ಭೀತಿ ಆವರಿಸಿಕೊಂಡಿದೆ. ಅದೆಂದರೆ ಕೆಲಸದ ಅಭದ್ರತೆಯ ಭೀತಿ. 1990 ರಿಂದೀಚೆಗೆ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಖಾಸಗೀಕರಣ, ಉದಾರೀಕರಣದ ಫಲವಾಗಿ ಮಾನವ ಶಕ್ತಿಯ ಉಪಯೋಗವನ್ನು ಕಡಿತ ಗೊಳಿಸಲಾಗುತ್ತಿದೆ. ಉದ್ಯೋಗಾವಕಾಶಗಳನ್ನು ಕಸಿದುಕೊಳ್ಳುವಲ್ಲಿ ಇಂದಿನ ಆಳುವ ಸರ್ಕಾರಗಳು ಮುಂದಾಗಿ ಮಹಿಳೆಯರ ಈಗಿರುವ ಉದ್ಯೋಗಾವಕಾಶಗಳಿಗೂ ಸಂಚಕಾರ ಬಂದಿದೆ.

ಕೆಲಸದ ಅಭದ್ರತೆಯ ಭೀತಿ ಖಾಸಗೀ ಹಾಗೂ ಸಾರ್ವಜನಿಕ ವಲಯದ ಎರಡೂ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ತೀವ್ರವಾಗಿ ಆವರಿಸಿದ್ದು ಬಿಜೆಪಿ ಅಧಿಕಾರಕ್ಕೆ ಬಂದ ನಂತರವಂತೂ ಬೆಂಕಿಯಿಂದ ಬಾಣಲೆಗಾಕಿದಂತಾಗಿದೆ, ಮಹಿಳೆಯರ ಬದುಕು.

ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿದ್ದ ಸಹಸ್ರಾರು ಮಹಿಳೆಯರು ಉದ್ಯೋಗ ಕಸಿದುಕೊಂಡ ಕಾರಣ ಬೀದಿಗೆ ತಳ್ಳಲ್ಪಟ್ಟಿದ್ದಾರೆ. ಎಲೆಕ್ಟ್ರಾನಿಕ್ಸ್ ಉದ್ದಿಮೆಗಳ ಮಹಿಳೆಯರೂ ಉದ್ಯೋಗ ವಂಚಿತೆಯರಾಗಿದ್ದಾರೆ. ಬಿ.ಪಿ.ಎಲ್. ಕಾರ್ಖಾನೆಯ ಉದಾಹರಣೆ ಇಡೀ ರಾಜ್ಯದ ಜನತೆಯ ಮುಂದಿದೆ. ಸಾರ್ವಜನಿಕ ವಲಯದ ಕಾರ್ಖನೆಗಳನ್ನೂ ಖಾಸಗೀಕರಿಸುತ್ತಿರುವುದರಿಂದಾಗಿ ಮಹಿಳೆಯರ ಉದ್ಯೋಗದಲ್ಲಿ ತೀವ್ರ ಕಡಿತ ಪ್ರಾರಂಭವಾಗಿದೆ. ಸರ್ಕಾರಿ ನೇಮಕಾತಿಗಳನ್ನು ನಿಲ್ಲಿಸುವುದರೊಂದಿಗೆ ಇಲ್ಲಿಯೂ ಮಹಿಳೆಯರು ದೂರ ತಳ್ಳಲ್ಪಟ್ಟಿದ್ದಾರೆ.

ಹೊಸ ಉದ್ಯೋಗಗಳ ಸೃಷ್ಟಿ ಇರಲಿ ಇರುವ ಉದ್ಯೋಗಗಳನ್ನಾದರು ಉಳಿಸಿಕೊಳ್ಳಲು ಮಹಿಳೆಯರೇ ಮುಂದಾಗಬೇಕಾದ ಸನ್ನಿವೇಶ ಎದುರಾಗಿದೆ. ಮಹಿಳೆಯರೇ ನಡೆಸುತ್ತಿರುವ ಸಾವಿರಾರು ಕುಟುಂಬಗಳು ದುಡಿಮೆಯ ಆಧಾರವಿಲ್ಲದೆ ಉಪವಾಸಬಿದ್ದಿವೆ. ಉದ್ಯೋಗದ ಉಳಿವಿಗಾಗಿ ಪುರುಷ- ಮಹಿಳೆಯರೆಲ್ಲರ ಹೋರಾಟ ಬೆಳೆದು ಬರದೆ ಉದಾರೀಕರಣದ ದಾಳಿಯನ್ನು ಹಿಮ್ಮೆಟ್ಟಿಸದೆ ಉಪಾಯವಿಲ್ಲ.

2ನೇ ದರ್ಜೆಯ ನಾಗರಿಕಳಾಗಿ ಮಹಿಳೆ

ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯುಳ್ಳ ನಮ್ಮ ದೇಶದಲ್ಲಿ ಇಂದಿಗೂ ಮಹಿಳೆಯರನ್ನು 2ನೇ ದರ್ಜೆಯ ನಾಗರಿಕರೆಂದೆ (Second Citizens) ಪರಿಗಣಿಸುವುದು.

ಬಂಡವಾಳಶಾಹಿಯ ಬೆಳವಣಿಗೆ ಹಾಗೂ ಶ್ರಮದ ಅವಶ್ಯಕತೆಗಾಗಿ, ಜೊತೆಗೆ ಕುಟುಂಬಗಳ ಪೋಷಣೆಯ ಸಲುವಾಗಿ ಮಹಿಳೆಯರನ್ನು ದುಡಿತಕ್ಕೆ ಅಹ್ವಾನಿಸಿದ್ದರೂ, ಮಹಿಳೆ ಉತ್ಪಾದನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದನ್ನು ಹೊರನೋಟಕ್ಕೆ ಕಾಣುತ್ತಿದ್ದರೂ ಅದೇ ಮಹಿಳೆಯ ಸ್ವಾತಂತ್ರ್ಯವಲ್ಲ.

ದುಡಿಮೆಯಲ್ಲಿ ಸಮಪಾಲನ್ನು ಹೊಂದಿರುವ ಮಹಿಳೆ ಆರ್ಥಿಕವಾಗಿ ಸಮಪಾಲನ್ನು ಹೊಂದಿಲ್ಲ. ದುಡಿಮೆಯ ಸ್ವಾತಂತ್ರ್ಯವಿದ್ದ ಮಾತ್ರಕ್ಕೆ ಆರ್ಥಿಕ ಸಾತಂತ್ರ್ಯ ದಕ್ಕಿಲ್ಲ.

ರೈಲು ಬಸ್ಸುಗಳಲ್ಲಿ ಕಾರ್ಖಾನೆ-ಕಚೇರಿಗಳಲ್ಲಿ ಶಾಲಾ-ಕಾಲೇಜುಗಳಲ್ಲಿ ರಸ್ತೆ-ಕ್ರೀಡಾಂಗಣಗಳಲ್ಲಿ ಹೊಲ- ಗದ್ದೆಗಳಲ್ಲಿ ಪುರುಷರ ಜೊತೆ

ಪುಟ 13 ಕ್ಕೆ

ಆತಂಕದ ನಡುವೆಯೂ ನಿರೀಕ್ಷೆಯಲ್ಲಿ ಮಹಿಳೆಯರು



ಶೇರು ಮಾ

ನೀರ ಮೇಲಿನ ಗು

*ಜಗತ್ತಿನೆಲ್ಲೆಡೆ ಶೇರುಮಾರುಕಟ್ಟೆ ಕುಸಿದಿದೆ. ಭಾರತದ ಶೇರುಮಾರುಕಟ್ಟೆಯೂ ಕುಸಿದಿದೆ. ಕೇವಲ ಮೂರು ದಿನಗಳಲ್ಲಿ **40,000** ಕೋಟಿ ರೂನಷ್ಟು ಹಾನಿಯಾಗಿದೆ. ಹಲವು ಜನ ದೊಳ್ಳ ಹೊಟ್ಟೆಯ ಶ್ರೀಮಂತರ ಸಂಪತ್ತು ದಿಢೀರನೇ ಕುಸಿದಿದೆ. ಸಾವಿರಾರು ಜನಸಾಮಾನ್ಯರು ದಿವಾಳಿಯಾಗಿದ್ದಾರೆ. ಅಮೇರಿಕದಿಂದ ಭಾರತದವರೆಗೂ ಆರ್ಥಿಕ ಬೆಳವಣಿಗೆ ಪೆಟ್ಟಾಗಬಹುದು. ಎಷ್ಟು ? ಏನು? ಈ ಶೇರುಮಾರುಕಟ್ಟೆಯ ಕುಸಿತ ಹೀಗೆಯೇ ಮುಂದುವರೆಯುತ್ತಿದೆಯೇ? ಯಾವಾಗ ನಿಲ್ಲಬಹುದು ಎಂದೆಲ್ಲಾ ಊಹಾಪೋಹಗಳು ಪತ್ರಿಕೆಗಳಲ್ಲಿ , ಟಿ.ವಿ.ಗಳಲ್ಲಿ ನಡೆದಿದೆ.*

ಆದರೆ ಭಾರತದ ಜನಸಾಮಾನ್ಯರು ಇದಕ್ಕೂ ತಮಗೂ ಏನೂ ಸಂಬಂಧವಿಲ್ಲವೆಂಬಂತೆ, ಬಾಂಬೆಯ ಶೇರುದಾರರ ಪರದಾಟವೆಂಬಂತೆ ತಮ್ಮ ತಮ್ಮ ದಿನನಿತ್ಯದ ಕೆಲಸಗಳಲ್ಲಿ ಮುಳುಗಿಹೋಗಿದ್ದಾರೆ. ಭಾರತದದ ಜನಸಾಮಾನ್ಯರಿಗಂತೂ ಈ ಶೇರುಮಾರುಕಟ್ಟೆ ಎಂಬ ಪದದ ಪರಿಚಯವಾಗಿದ್ದೇ ಹರ್ಷದ್ ಮೆಹ್ತಾ ಮತ್ತವನ ಜೊತೆಯ ತಲೆಹಿಡುಕರು ಶೇರುಗಳ ಬೆಲೆ ಏರಿಸಿದಾಗ ಹಲವು ಸಾವಿರ ಕೋಟಿ ರೂ ನುಂಗಿ ಬ್ಯಾಂಕುಗಳನ್ನೇ ನೀರಿನಂತೆ ಕುಡಿದಾಗ. ಹರ್ಷದ್ ಮೆಹ್ತಾ ದಗಲ್ಬಾಜಿ ವ್ಯವಹಾರ ಬಯಲಾದಾಗ ಭಾರತದ ಶೇರುಮಾರುಕಟ್ಟೆ ಕುಸಿದಿತ್ತು. ಶೇರುಮಾರುಕಟ್ಟೆಯೊಂದು ದಿಢೀರ್ ಹಣಮಾಡುವ ಸಾಧನ ಎಂದುಕೊಂಡು ತಮ್ಮ ಜೀವನದ ಗಳಿಕೆಯನ್ನು ಹೊಸದಾಗಿ ಹೂಡಿದ್ದ ಸಾವಿರಾರು ಮಂದಿ ಮೇಲು ಮಧ್ಯಮ ವರ್ಗದ ಜನ ತಮ್ಮ ಉಳಿತಾಯವನ್ನೆಲ್ಲಾ ಕಳೆದುಕೊಂಡಿದ್ದರು. ಹಲವರು ದಿವಾಳಿಯಾಗಿದ್ದರು. ಆದರೆ ಈಗ ಶೇರುಮಾರುಕಟ್ಟೆಯ ಈ ಮಹಾನ್ ಕುಸಿತದಿಂದ ಏನು ಪರಿಣಾಮವಾಗಬಹುದು? ಕನ್ನಡದ ಯಾವುದೇ ಪತ್ರಿಕೆಗಿಂತ ಮೊದಲೇ ಶೇರುಮಾರುಕಟ್ಟೆ ಎಂಬ ನೀರ ಮೇಲಿನ ಗುಳ್ಳೆಯ ಸ್ವರೂಪವನ್ನು ಬಿತ್ತರಿಸಿದ 'ಐಕ್ಯರಂಗ'ದ ಮಾಹಿತಿ ತಂತ್ರಜ್ಞಾನ ತಜ್ಞರು ಬರೆದ ಲೇಖನವನ್ನು ಓದಿ.

ಹಲವು ತಿಂಗಳುಗಳಿಂದ ಭಾರಿ ತೇಜಿಯಲ್ಲಿದ್ದ ಶೇರು ಮಾರುಕಟ್ಟೆ ಕುಸಿದಿದೆ. ನ್ಯೂಯಾರ್ಕ್‌ನ 'ನ್ಯಾಸ್‌ಡಾಕ್' ಶೇರು ಬೆಲೆ ಸೂಚಕಕ್ಕೆ ನೆಗಡಿ ಆದಕೂಡಲೇ ಲಂಡನ್, ಬರ್ಲಿನ್, ಟೋಕ್ಯೋಸ್, ಸಿಂಗಾಪುರ್, ಹಾಂಕಾಂಗ್, ಮುಂಬಯಿ ಶೇರು ಬೆಲೆಗಳು ಸೀನಲು ಆರಂಭಿಸಿದವು.

ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ತೀವ್ರ ಕುಸಿತ ಎಂದು ಹೇಳಲಾದ ಈ ಕುಸಿತದ ಅರ್ಥ ಏನು? ಈ ಕುಸಿತ ಏಕಾಯಿತು? ಈ ಕುಸಿತದ ಪರಿಣಾಮಗಳೇನು?

ಶೇರು ಮಾರುಕಟ್ಟೆಯಲ್ಲಿ ತೇಜಿಯೇ ಜಾಗತೀಕರಣದ ನೀತಿಗಳು ಸರಿಯಾಗಿವೆ ಎಂದು ತೋರಿಸುತ್ತವೆ. ಎಲ್ಲೆಲ್ಲೂ ಸುಗ್ಗಿ, ಶ್ರಿಮಂತಿಕೆ ಹರಡುತ್ತದೆ. ಮಾಹಿತಿ ತಂತ್ರಜ್ಞಾನ ಮುಂತಾದ 'ಜ್ಞಾನ-ಆಧಾರಿತ' ಹೊಸ ಆರ್ಥಿಕ ಬಂಡವಾಳಶಾಹಿಯ ಏರುಪೇರು ಮುಗ್ಗಟ್ಟು -ಬಿಕ್ಕಟ್ಟು ರಿಪೇರಿ ಮಾಡಿ ಸತತ ಉತ್ಕರ್ಷಕ್ಕೆ ಹಾದಿ ಮಾಡಿಕೊಟ್ಟಿದೆ ಎಂದು ಪ್ರಚಾರ ಮಾಡುತ್ತಿದ್ದ ಬಂಡವಾಳಶಾಹಿ ಬಾಲಬಡುಕರ ಕನಸು-ಬೊಗಳೆಯಂತೂ ಒಡೆದಿದೆ.

ಈ ಕುಸಿತ ಎರಡು ಸಂಗತಿಗಳನ್ನು ನೆನಪಿಗೆ ತರುತ್ತಿದೆ. ಒಂದು ಕಥೆ ಕಳೆದ ಶತಮಾನದ್ದು, ಇನ್ನೊಂದು ಘಟನೆ ಕಳೆದ ವರ್ಷದ್ದು. ಎರಡೂ ಶೇರು ಮಾರುಕಟ್ಟೆಗೆ ಸಂಬಂಧಿಸಿದ್ದು.

ಶೇರು ಕುಸಿದರೆ ಹಸು ಹಾಲು ಕೊಡುವುದಿಲ್ಲವೇ?

ಅಮೆರಿಕದ ಉತ್ತರದ ಕೈಗಾರಿಕೀಕೃತ ಪ್ರದೇಶದ ಉದ್ಯಮಿಯೊಬ್ಬ ದಕ್ಷಿಣದ ರೈತನ ಮಗಳೊಬ್ಬಳನ್ನು ಮದುವೆಯಾಗುತ್ತಾನೆ. ಆಗ ಅಲ್ಲಿ ಒಂದು ಶೇರು ಮಾರುಕಟ್ಟೆ ಕುಸಿತ ಸಂಭವಿಸುತ್ತದೆ. ಗಂಡ ಇದ್ದಕ್ಕಿದ್ದಂತೆ ಕಂಗಾಲಾಗುತ್ತಾನೆ. ಎಲ್ಲ ಮುಳುಗಿ ಹೋಯಿತು ಎಂಬಂತೆ ಕುಸಿದುಬೀಳುತ್ತಾನೆ. ಇದರಿಂದ ಗಾಬರಿಗೊಂಡ ಆಕೆ ತನ್ನ ಅತ್ತೆಯನ್ನು ಮುಗ್ಧವಾಗಿ ಕೇಳುತ್ತಾಳೆ

"ಇವೆಲ್ಲದರ ಅರ್ಥ ಏನು? ನಮ್ಮೂರಿನಲ್ಲಿ ಹಸು ಹಾಲು ಕೊಡುತ್ತಾ ಹೋಗುತ್ತವೆ. ಗೋಧಿ ಮತ್ತು ಜೋಳ ಬೆಳೆಯುತ್ತಾ ಹೋಗುತ್ತದೆ'

ನ್ಯೂಯಾರ್ಕ್‌ನ ಹಾಸುಗಲ್ಲುಗಳ ಕಿರುಬೀದಿಯ (ಶೇರು ಮಾರುಕಟ್ಟೆ-ವಾಲ್‌ಸ್ಟ್ರೀಟ್) ಘಟನೆಗಳಿಗೂ, ಅವಳ ಜೀವನ ಮತ್ತು ಘಟನೆಗಳಿಗೂ ಸಂಬಂಧ ಕಲ್ಪಿಸುವುದು ಆ ಹಳ್ಳಿಯ ಹುಡುಗಿಗೆ ಕಷ್ಟವಾಗಿತ್ತು. ಇದು 19ನೆಯ ಶತಮಾನದ ಕೊನೆಯಲ್ಲಿ ನ್ಯೂಯಾರ್ಕಿನಲ್ಲಿ ಸಂಭವಿಸಿದ ಶೇರು ಕುಸಿತಕ್ಕೆ ಸಂಬಂಧಿಸಿದ್ದು. ಇಂದು ಪ್ರಪಂಚ ಈ ದಿಶೆಯಲ್ಲಿ ಬಹಳ ಮುಂದು ಸಾಗಿದೆ.


ಇನ್ನೊಂದು ಕಳೆದ ಜುಲೈನಲ್ಲಿ ಅಟ್ಲಾಂಟಾ (ಅಮೆರಿಕಾದ ಒಂದು ಪಟ್ಟಣ) ಮಾರ್ಕ್ ಬ್ಯಾರಂಟನ್ ಇತರಶೇರು ವ್ಯಾಪಾರಿಗಳಂತೆ ಕೆಲಸ ಮಾಡುವ ಆಫೀಸಿಗೆ ಹೋದ. ಅಲ್ಲಿನ ಮ್ಯಾನೇಜರ್ ಮತ್ತು ಆತನ ಸೆಕ್ರೇಟರಿಯನ್ನು ಗುಂಡಿಟ್ಟು ಕೊಂದ. ಆಮೇಲೆ ಇನ್ನೆದು ಜನರನ್ನು ಕೊಂದ. ಪೋಲೀಸರು ಅವನನ್ನು ಹುಡುಕಲು ಆತನ ಮನೆಗೆ ಹೋದಾಗ, ಆಗಲೇ ಅವನ ಹೆಂಡತಿ ಮಕ್ಕಳು ಸತ್ತುಬಿದ್ದಿದ್ದರು. ಪೋಲೀಸರು ಅವನನ್ನು ಹಿಡಕೊಳ್ಳಲು ಹೋದಾಗ ತನಗೆ ತಾನೇ ಗುಂಡು ಹಾರಿಸಿಕೊಂಡು ಸತ್ತ.

ಈತ ಶೇರು ಮಾರುಕಟ್ಟೆ ದಲ್ಲಾಳಿಯಾಗಿದ್ದು, ಇನ್ನೂ ಶೇರು ಮಾರುಕಟ್ಟೆ ತೇಜಿ ಇರುವಾಗಲೇ ಕಳೆದ ಜುಲೈ ತಿಂಗಳಲ್ಲಿ ಸತತವಾಗಿ ಆತನಿಗೆ ಶೇರು ಮಾರುಕಟ್ಟೆಯ ಏರುಪೇರಿನಿಂದ ಭಾರಿ ಹಾನಿಯಾಗಿತ್ತು. ಬ್ಯಾರಂಟನ್ ಉತ್ತಮ ಉದ್ಯೋಗ ಬಿಟ್ಟು, ಶೇರು ವ್ಯಾಪಾರಿಯಾಗಿದ್ದ. ತನ್ನ ಇದ್ದಬದ್ದ - ಎಲ್ಲವನ್ನೂ ಶೇರು ಮಾರುಕಟ್ಟೆಯಲ್ಲಿ ತೊಡಗಿಸಿದ್ದ. ಸತತ ನಷ್ಟದಿಂದ ದಿಕ್ಕೆಟ್ಟ ಆತನ ಪರಿಹಾರ ಇದಾಗಿತ್ತು.

ಶೇರು ಕುಸಿತದ ಅರ್ಥ ಏನು?

90 ರ ದಶಕದಲ್ಲಿ ಅಮೆರಿಕದಲ್ಲಿ ಶೇರು ಮಾರುಕಟ್ಟೆ ಸುಗ್ಗಿ. ಶೇರು ಬೆಲೆಗಳು ಗುರುತ್ವಾಕರ್ಷಣ ನಿಯಮ (ಮೇಲೆ ಹೋದದ್ದು ಕೆಳಗೆ ಬರಲೇಬೇಕು)ವನ್ನೆಲ್ಲಾ ಉಲ್ಲಂಘಿಸಿ ಮೇಲೆ ಹೋದದ್ದೆ ಹೋದದ್ದು. ಈ ಸುಗ್ಗಿ ಹಲವರನ್ನು ಮರುಳುಗೊಳಿಸಿತ್ತು. ಹಲವು ಉದ್ಯೋಗಿಗಳು, ಕಾರ್ಮಿಕರು, ಇಂಜಿನಿಯರುಗಳು, ಡಾಕ್ಟರುಗಳು, ವಕೀಲರು ತಮ್ಮ ಉದ್ಯೋಗಕ್ಕೆ ಶರಣು ಹೊಡೆದು ಶೇರು ವ್ಯಾಪಾರಿಯಾಗಿದ್ದರು ಬೆಳಿಗ್ಗೆ ಶೇರು ಕೊಳ್ಳುವುದು ಸಾಯಂಕಾಲದ ಹೊತ್ತಿಗೆ ಮಾರುವುದು. ಸತತವಾಗಿ ಏರುತ್ತಿರುವ ಶೇರುಗಳ ಮೇಲೆ ಲಾಭ ಮಾಡುವುದು. ಅಮೆರಿಕದಲ್ಲಿ ಲಕ್ಷಾಂತರ ಬ್ಯಾರಂಟನ್‌ಗಳು ಸಿಗುತ್ತಾರೆ.

ಈ ಮೇಲಿನ ಎರಡು ಘಟನೆಗಳು ಶೇರು ಮಾರುಕಟ್ಟೆ ಕುಸಿತದ ಬಗ್ಗೆ ನಮ್ಮ ಧೋರಣೆ ಏನಿರಬೇಕು? ಅದನ್ನು ಹೇಗೆ ನೋಡಬೇಕು ಎಂಬುದನ್ನು ಹೇಳಿಕೊಡುತ್ತವೆ, ಹೇಗೆ ಎಂದಿರಾ? ಮೊದಲನೆಯದು ಶೇರು ಮಾರುಕಟ್ಟೆ ಏರುಪೇರುಗಳಿಗೂ (ಕುಸಿತ ಸೇರಿ) ನಿಜವಾದ ಆರ್ಥಿಕಕ್ಕೂ ಏನೂ ಸಂಬಂಧವಿಲ್ಲದ್ದನ್ನು ಸೂಚಿಸುತ್ತದೆ. ಇದನ್ನು ನಾವು 'ಐಕ್ಯರಂಗ'ದ ಹಿಂದಿನ ಸಂಚಿಕೆಯೊಂದರಲ್ಲಿ ('ಇನ್‌ಫೋಸಿಸ್ ಶೇರು ವೀರರು ನಮ್ಮ ಆರ್ಥಿಕ ಸುಧಾರಿಸಲಾರರು'-ಏಪ್ರಿಲ್2, 2000 ಸಂಚಿಕೆ) ಈಗಾಗಲೇ ನೋಡಿದ್ದೇವೆ. ಮೈಕ್ರೋಸಾಫ್ಟ್ ಎಂಬ ಪ್ರಬಲ ಸಾಫ್ಟ್‌ವೇರ್ ಕಂಪನಿ ಮೇಲೆ ಗುತ್ತೇದಾರಿ ಅನೀತಿಯುತ ವ್ಯಾಪಾರ-ವ್ಯವಹಾರ ಅನುಸರಿಸಿದ್ದಕ್ಕೆ ಸರ್ಕಾರ ಅವರ ಮೇಲೆ ಕೇಸ್ ಹಾಕಿದ್ದೇ ಈ ಕುಸಿತಕ್ಕೆ ನೆಪವಾಯಿತು. ಅಮೆರಿಕದಲ್ಲಿ ಹಣದುಬ್ಬರ ಹೆಚ್ಚಿದೆ ಎಂಬ ಸುದ್ದಿಯೂ ನೆರವಾಯಿತು. ಲಂಗುಲಗಾಮಿಲ್ಲದೆ ಗಾಳಿಯಲ್ಲಿ ಹಾರುತ್ತಿದ್ದ ಬಲೂನು ಒಡೆಯಲು ಒಂದು ಪಿನ್ ಬೇಕಾಗಿತ್ತು ಅಷ್ಟೇ!



ಇಳಿಮುಖವಾದ ಶೇರು ಸೂಚ್ಯಂಕ

ಎರಡನೇ ಘಟನೆ ಶೇರು ಮಾರುಕಟ್ಟೆ ಈಗ ಹಿಂದೆಂದಿಗಿಂತಲೂ ಹೇಗೆ ಹಲವು ಸಾಮಾನ್ಯ ನಾಗರಿಕರ ಜೀವನದ ಮೇಲೆ ನೇರ ಪರಿಣಾಮ ಬೀರುತ್ತದೆ ಎಂದು ತೋರಿಸುತ್ತದೆ. ಅಮೆರಿಕನ್ನರ ಆಸ್ತಿಯಲ್ಲಿ 1984 ರಲ್ಲಿ ಶೇರುಗಳು ಶೇಕಡಾ 8 ಇದ್ದರೆ, ಈಗ ಶೇಕಡಾ 25 ಕ್ಕೇರಿದೆ. 1990 ರಲ್ಲಿ 21 ಶೇಕಡಾ

ಇಂಟರ್‌ನೆಟ್ ಸೂಪರ್‌ಮಾರ್ಕೆಟ್‌ನ ಬೆಳವಣಿಗೆ ಮತ್ತು ಶೇರು ಕುಸಿತ

ಶೇರು ಕುಸಿತಕ್ಕೆ ಮುಖ್ಯಕಾರಣ ಇಂಟರ್‌ನೆಟ್ ಒಂದು ವ್ಯಾಪಕ ಸಂಪರ್ಕ ಮಾಧ್ಯಮವಾಗಿ ವ್ಯಾಪಾರದ 'ಆರ್ಥಿಕ'ವನ್ನು ತೀವ್ರವಾಗಿ ಬದಲಾಯಿಸುತ್ತಿರುವುದು. ಇಂಟರ್‌ನೆಟ್ ಮೂಲಕ ಸರಕಿನ ವಿತರಣೆ ವೆಚ್ಚವನ್ನು ದೊಡ್ಡ ಪ್ರಮಾಣದಲ್ಲಿ ಕಡಿಮೆ ಮಾಡಬಹುದು. ಈಗ ವಿತರಣೆಯಲ್ಲಿ ದೊಡ್ಡ ಭಾಗ ಸಗಟು, ಸೂಪರ್ ಮಾರ್ಕೆಟ್‌ಗಳಿಗೆ ಹೋಗುತ್ತವೆ. ಇಂಟರ್‌ನೆಟ್ ಸೂಪರ್‌ಮಾರ್ಕೆಟ್‌ಗಳನ್ನು ಅನಗತ್ಯಗೊಳಿಸಿ ಆ ಲಾಭವನ್ನು ಸಗಟು ವಿತರಕ ಅಥವಾ ಉತ್ಪಾದಕ ಕಂಪನಿಯೇ ಗಿಟ್ಟಿಸಿಕೊಳ್ಳಲು ಸಹಾಯ ಮಾಡುತ್ತವೆ (ಬೆಲೆ ಅದೆ ಇರುತ್ತದೆ ಎಂದು ಇಟ್ಟುಕೊಂಡರೆ). ಉದಾಹರಣೆಗೆ ಅಮೆರಿಕದ ಪ್ರಸಿದ್ಧ 'ನೈಕ್' ಶೂಗಳ ಬೆಲೆ 50 ಡಾಲರ್‌ನಲ್ಲಿ ನಿಜವಾದ ಉತ್ಪಾದನೆ ಖರ್ಚು 5 ಡಾಲರು. ಇದರಲ್ಲಿ ಸುಮಾರು 15 ಡಾಲರು ಸೂಪರ್‌ಮಾರ್ಕೆಟ್ ನ ಲಾಭ. ಇದನ್ನು ಇಂಟರ್ ನೆಟ್ ಮೂಲಕ 'ಮಾರಿದರೆ' ಅಷ್ಟು ಹೆಚ್ಚು ಲಾಭ.

ಆದರೆ ಇದಕ್ಕೆ ವ್ಯಾಪಕ 'ಇಂಟರ್‌ನೆಟ್ ಸೂಪರ್ ಮಾರ್ಕೆಟ್ 'ಜಾಲ ಬೇಕು. ಆದ್ದರಿಂದ ಇಂತಹ 'ವೆಬ್‌ಸೈಟು' ಸ್ಥಾಪಿಸಿ ಸೂಪರ್‌ಮಾರ್ಕೆಟ್ ಜಾಲ ಕಟ್ಟುವ ಕಂಪನಿಗಳಿಗೆ ಮಾರಲು 'ಅತ್ಯಗತ್ಯ' ಜಾಹೀರಾತು ಟಿ.ವಿ.ಗಳಿಗೆ ಪ್ರಧಾನವಾಗಿ ಹೋಗುತ್ತಿವೆ. 1996 ರಲ್ಲಿ ಅಮೆರಿಕದ ಜಾಹೀರಾತು ಮೊತ್ತ 33 ಶತಕೋಟಿ ಡಾಲರುಗಳು. ಇದರ ದೊಡ್ಡ ಭಾಗ ಈಗ ಟಿ.ವಿ.ಗೆ ಹೋಗುತ್ತಿದೆ. ಈಗ ಅಮೆರಿಕದಲ್ಲಂತೂ ಇಂಟರ್‌ನೆಟ್ ಜನಪ್ರಿಯತೆ ಮತ್ತು ಮುಟ್ಟುವಿಕೆಯಲ್ಲಿ ಜಾಹೀರಾತು ಲಾಭ ಇಂಟರ್‌ನೆಟ್ ಕಂಪನಿಗಳಿಗೆ ಬರುತ್ತದೆಂದು ಲೆಕ್ಕಾಚಾರ. ಎಲ್ಲಾ ಸರಕುಗಳನ್ನು ಇಂಟರ್ ನೆಟ್ ಕಂಪನಿಗಳ ಮೂಲಕ ಮಾರಲು ಸಾಧ್ಯ ಎಂಬುದು ನಿಜವಲ್ಲ. ಇದಕ್ಕೆ ಪುರಾವೆ ಎಂದರೆ ಭಾರಿ ಶೇರು ಬೆಲೆ ಹೊತ್ತ 'ಇಂಟರ್ ನೆಟ್ ಸೂಪರ್ ಮಾರ್ಕೆಟ್' ಕಂಪನಿಗಳು ಈವರೆಗೆ ಹೆಚ್ಚಿನ ಲಾಭವನ್ನೇನೂ ಮಾಡಿಲ್ಲ. ಆದರೆ ಮುಂದೆ ಲಾಭ ಮಾಡಿಯಾವು ಎಂಬ ಹುಚ್ಚು ಆಸೆ ಮೇಲೆ ಶೇರು ಬೆಲೆಗಳು ಏರುತ್ತಿವೆ. ಮೈಕ್ರೋಸಾಫ್ಟ್ ಮೇಲೆ ಸರ್ಕಾರದ ಕೇಸು ಒಟ್ಟಾರೆಯಾಗಿ ಐಟಿ ಕಂಪನಿಗಳಲ್ಲಿ ಈ 'ಹುಚ್ಚುಆಸೆ', 'ಭರವಸೆ'ಯನ್ನು ಅಲುಗಾಡಿಸಿದೆ. ಆದ್ದರಿಂದ ಈ ಕುಸಿತ ಆರಂಭವಾಯಿತು ಅಂತ ಒಂದು ಅರ್ಥೈಸುವಿಕೆ. ಈ ಮಾರುಕಟ್ಟೆ ಬೆಲೆ ಅರ್ಥಹೀನ ಎಂದು ನಿಧಾನವಾಗಿಯಾದರೂ ಎಲ್ಲರಿಗೆ ಅರಿವಾಗುತ್ತಿದೆ ಎಂಬುದು ಇನ್ನೊಂದು ಅರ್ಥೈಸುವಿಕೆ. 'ಇಂಟರ್‌ನೆಟ್ ಸೂಪರ್‌ಮಾರ್ಕೆಟ್' ಕಂಪನಿ ಬಗ್ಗೆ ಅಪನಂಬಿಕೆ ಎಲ್ಲಾ ಐಟಿ ಕಂಪನಿಗಳ ಬಗೆಗೂ ಹರಡುತ್ತಿದೆ. ಎಲ್ಲಾ 'ಹೊಸ ತಂತ್ರಜ್ಞಾನ'ದ ಕಂಪನಿಗಳ ಬಗ್ಗೆ ಹರಡುತ್ತಿದೆ. ಈ ಕುಸಿತದಲ್ಲಿ ಚೆನ್ನಾಗಿ ಬೆಳೆಯುತ್ತಿರುವ ಚೆನ್ನಾಗಿ ನಡೆಸಲ್ಪಡುತ್ತಿರುವ ವಿಪ್ರೋ, ಇನ್‌ಫೋಸಿಸ್‌ನಂತಹ ಕಂಪನಿಗಳ ಶೇರುಗಳೂ ಕುಸಿದಿವೆ. ಐಟಿ ಕಂಪನಿಗಳ ಬೆಳವಣಿಗೆ ಬಿಟ್ಟರೆ ಇತರ ಕೈಗಾರಿಕಾ ಬೆಳವಣಿಗೆ, ಆರ್ಥಿಕ ಬೆಳವಣಿಗೆ ಏನೇನೂ ಗಮನಾರ್ಹವಾದದ್ದಲ್ಲ. ಆದ್ದರಿಂದ ಐಟಿ ಶೇರುಗಳು ಕುಸಿತ ಕೂಡಲೇ ಎಲ್ಲಾ ಶೇರುಗಳ ಕುಸಿತವಾಗಿವೆ.

ಶೇರು ಮಾರುಕಟ್ಟೆ ಕುಸಿತ ಎಷ್ಟು? ಎಲ್ಲಿ?

ಶೇರು ಮಾರುಕಟ್ಟೆ ಸೂಚಕಗಳು ಹಲವು ಪ್ರಮುಖ ಕಂಪನಿಗಳ ಬೆಲೆ ಮೇಲೆ ಆಧಾರಿತವಾಗಿರುತ್ತದೆ. ಅಮೆರಿಕದಲ್ಲಿ 'ನ್ಯಾಸ್‌ಡಾಕ್' ಹೊಸ ತಂತ್ರಜ್ಞಾನ ಕಂಪನಿಗಳ ಸೂಚಕ. ಡೊವ್ ಜೋನ್ಸ್ ಒಟ್ಟಾರೆ ಕೈಗಾರಿಕಾ ಕಂಪನಿಗಳ ಸೂಚಕ. ಇವೆರಡೂ ಏಪ್ರಿಲ್ 14 ರಂದು ಭಾರಿ ಕುಸಿತದಲ್ಲಿ ಅತ್ಯಂತ ಹೆಚ್ಚು. ಡೊವ್‌ಜೋನ್ಸ್ ಸುಮಾರು 617.87 ಪಾಯಿಂಟ್‌ಗಳಷ್ಟು ಇಳಿದು 10305.77 ತಲುಪಿತ್ತು.(ಡೊವ್ ಸೂಚಕ ನವೆಂಬರ್ 95 ರಲ್ಲಿ 50,000 ಇದ್ದದ್ದು ಮೇ 1999 ರಲ್ಲಿ 11 ಸಾವಿರ ಮುಟ್ಟಿತ್ತು. ಅಂದರೆ ಸುಮಾರು ಒಂದು ವರ್ಷಕ್ಕೆ 1000 ಪಾಯಿಂಟು ಮುಟ್ಟಿತ್ತು. ಆದರೆ ಈ ಒಂದು ದಿವಸದ ಕುಸಿತ ಸುಮಾರು 7-8 ತಿಂಗಳ ಹೆಚ್ಚಳದಷ್ಟು ಎಂದರೆ ಎಷ್ಟು ತೀವ್ರ ಕುಸಿತ ಎಂದು ಗೊತ್ತಾಗುತ್ತದೆ) ಅದೇ ರೀತಿ ನ್ಯಾಸಡಾಕ್ ಒಂದೇ ದಿವಸದಲ್ಲಿ 355-49 ಪಾಯಿಂಟುಗಳಷ್ಟು ಕುಸಿದು 3321.29 ಕ್ಕೆ ಮುಟ್ಟಿತು. ಇಡಿ ವಾರದಲ್ಲಿ ನ್ಯಾಸ್‌ಡಾಕ್ ಶೇ 25 ರಷ್ಟು ಕುಸಿದಿದೆ.

ಇದು ವೇಗವಾಗಿ ಎಲ್ಲಾ ಕಡೆಗೆ ಹರಡಿತು

...ೇಟ್ ಕುಸಿತ

...ೈ ಒಡೆದಿದೆಯೇ?

ವಯಸ್ಕ ಅಮೆರಿಕನ್ನರು ಶೇರುಗಳಲ್ಲಿ ಹಣ ತೊಡಗಿಸಿದ್ದಾರೆ, 1997 ರ ಹೊತ್ತಿಗೇನೆ ಇದು ಶೇಕಡಾ 43 ಕ್ಕೇರಿತ್ತು. ಅಂದರೆ ಶೇರು

ಶರತ್‌ಚಂದ್ರ

ಮಾರುಕಟ್ಟೆಯಲ್ಲಿ ಹಣ ತೊಡಗಿಸುವವರ ಸಂಖ್ಯೆ ಇಮ್ಮಡಿಯಾಗಿದೆ, ಅವರು ತೊಡಗಿಸುವ ಹಣ ಮುಮ್ಮಡಿಯಾಗಿದೆ.

ಭಾರತದಲ್ಲಿ

ಭಾರತದಲ್ಲೂ ಇದೇ ರೀತಿ ಟ್ರೆಂಡ್ ಕಂಡಿದೆ. 1990 ರಲ್ಲಿ ಮುಂಬಯಿ ಶೇರು ಮಾರುಕಟ್ಟೆಯಲ್ಲಿ ರಿಜಿಸ್ಟರ್ ಆದ ಕಂಪನಿಗಳ ಮಾರುಕಟ್ಟೆ ಬೆಲೆ(ಶೇರುಗಳ ಒಟ್ಟು ಬೆಲೆ) 1 ಲಕ್ಷ ಕೋಟಿ ಇದ್ದದ್ದು ಈಗ 11 ಲಕ್ಷ ಕೋಟಿ. ಅಂದರೆ 10 ಪಟ್ಟು ಜಾಸ್ತಿಯಾಗಿದೆ. ಈಗ ಕೆಳ ಮಧ್ಯಮ ವರ್ಗದವರಿಗೆ, ಗೃಹಿಣಿಯರಿಗೆ ಶೇರು ಮಾರುಕಟ್ಟೆಯ ಹುಚ್ಚು ಹತ್ತಿದೆ. ಇದು ಯಾಕೆ ಮುಖ್ಯವೆಂದರೆ, ಶೇರು ಮಾರುಕಟ್ಟೆ ಕುಸಿದಾಗ ಎಲ್ಲವನ್ನು ಕಳಕೊಳ್ಳುವುದು, ಇಂತಹ ಸಾಮಾನ್ಯ ಶೇರುದಾರರೇ!

ಮಾರುಕಟ್ಟೆ ಕುಸಿತದ ಮೂಲ ಕಾರಣ

ಶೇರು ಮಾರುಕಟ್ಟೆಯ ಕುಸಿತದ ನಿಜವಾದ ಕಾರಣ ಬೇರೆಯೇ ಇದೆ. ಮೂಲಭೂತವಾಗಿ ಭಿನ್ನವಾದ ಬೆಳವಣಿಗೆಯಿಂದ 'ಜ್ಞಾನ-ಆಧಾರಿತ' 'ಹೊಸ ಆರ್ಥಿಕ' ಬೆಳವಣಿಗೆಯಾಗುತ್ತಿದೆ ಎಂದು ಹೇಳುತ್ತಿದ್ದರು. ಈ ಹೊಸ ಆರ್ಥಿಕ, 'ಹಳೆ ಆರ್ಥಿಕ' ದಂತೆ ಮನುಷ್ಯನಿಗೆ ಬೇಕಾದ ಸರಕು, ಸೇವೆಗಳಿಗೆ ಸಂಬಂಧಪಟ್ಟಿದ್ದಲ್ಲ. ಸರಕುಗಳನ್ನು ಉತ್ಪಾದಿಸುವ ಯಂತ್ರಗಳ ಬೆಲೆ ಮೇಲೆ ಆಧಾರಿತ ಅಲ್ಲ. ಜ್ಞಾನ ಮತ್ತು ಅದರ 'ಬೆಲೆ' ಕಟ್ಟುವಂತಹದ್ದು. ಆದ್ದರಿಂದ 'ಹಳೆ ಆರ್ಥಿಕ'ದ ನಿಯಮಗಳು 'ಹೊಸ ಆರ್ಥಿಕ' ಕ್ಕೆ ಅನ್ವಯವಾಗುವುದಿಲ್ಲ. 'ಜ್ಞಾನ' ದ ಬೆಲೆಗೆ ಏನೂ 'ಮಿತಿ' ಇಲ್ಲದಿರುವುದರಿಂದ ಅದರ ಮಾರುಕಟ್ಟೆ ಬೆಲೆ ಏರುತ್ತಾ ಹೋಗುತ್ತದೆ ಅಂತ. ಆದ್ದರಿಂದ ಬಂಡವಾಳಶಾಹಿ 'ಹಳೆ ಆರ್ಥಿಕ'ದಲ್ಲಿ ಬಿಕ್ಕಟ್ಟು, ಏರುಪೇರು ಉಂಟುಮಾಡುವ ಸಂಗತಿ ಇಲ್ಲಿ ಮುಖ್ಯವಾಗುವುದಿಲ್ಲ. ಈ 'ಹೊಸ ಆರ್ಥಿಕ'ವೇ ಭವಿಷ್ಯದ ಆರ್ಥಿಕ. ಇದೇ ಆರ್ಥಿಕದ ದೊಡ್ಡ ಪಾಲು ಪಡೆಯುತ್ತದೆ ಎಂದೆಲ್ಲಾ ಹೇಳಲಾಗಿತ್ತು. ಸತತ ಶೇರು ಉತ್ಕರ್ಷ ಇದು ನಿಜವೇನೋ ಎಂದೆನಿಸುವಂತೆ ಮಾಡಿತ್ತು.

ಆದರೆ ಇದು ನಿಜವಲ್ಲ, ಈ 'ಜ್ಞಾನ' ಇರುವುದು ಮಾನವನಿಗೆ ಬೇಕಾದ ಸರಕು, ಸೇವೆಗಳನ್ನು ಉತ್ಪಾದನೆ, ವಿತರಣೆಯನ್ನು ಹೆಚ್ಚು ಸಮರ್ಥವಾಗಿ, ದಕ್ಷವಾಗಿ ಮಾಡುವುದರಲ್ಲೇ. ಈ 'ಜ್ಞಾನ'ದ ಬೆಲೆ ಇರುವುದೂ ಅದನ್ನು ಅಂತಹ 'ಸರಕು' 'ಸೇವೆ'ಗಳಿಗೆ ಅನ್ವಯಿಸಿದಾಗ ಮಾತ್ರ. ಈ 'ಹೊಸ ಆರ್ಥಿಕ' ಸ್ವಲ್ಪ ಮಟ್ಟಿಗೆ ಸ್ವಾಯತ್ತವಾಗಿ ಬೆಳೆಯಬಹುದಾದರೂ ಅಂತಿಮವಾಗಿ 'ಹಳೆ ಆರ್ಥಿಕ'ದ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ. 'ಹಳೆ ಆರ್ಥಿಕ' ಸ್ಥಗಿತಗೊಂಡಿದ್ದರೆ 'ಹೊಸ ಆರ್ಥಿಕ' ಬೆಳೆಯುತ್ತಾ ಹೋಗಲಾರದು. ಒಂದಲ್ಲ ಒಂದು ದಿನ 'ಹೊಸ ಆರ್ಥಿಕ' 'ಹಳೆ ಆರ್ಥಿಕ'ದ ಮಿತಿಗಳೊಳಗೆ ತನ್ನ ಮಿತಿ ಕಂಡುಕೊಳ್ಳುತ್ತದೆ.

ನಮ್ಮ ದೇಶದ ಮೇಲಾಗುವ ಪರಿಣಾಮಗಳು

ಅಮೆರಿಕದ ಬಿಲ್‌ಗೇಟ್ಸ್ ಅಥವಾ ಭಾರತದ ನಾರಾಯಣಮೂರ್ತಿ, ಅಜೀಜ್ ಪ್ರೇಮ್‌ಜಿಗಳು ಕೆಲವು ನೂರು ಕೋಟಿಗಳನ್ನು ಕಳೆದುಕೊಂಡರೆ ನಾವೇನೂ ಚಿಂತಿಸಬೇಕಾದಿಲ್ಲ; ಆದರೆ ಭಾರತದ ಜನಸಾಮಾನ್ಯರ ಮೇಲಾಗುವ ಪರಿಣಾಮ ಏನು ಎಂಬುದಷ್ಟೇ ನಮ್ಮ ಚಿಂತೆ.

ಈ ಕುಸಿತ ಮುಂದುವರೆದರೆ ವಿದೇಶಿ ಬಂಡವಾಳಿಗರು ಭಾರತದಲ್ಲಿ ಹೂಡಿದ ನೂರಾರು ಕೋಟಿ ಡಾಲರುಗಳನ್ನು ಹಿಂತೆಗೆದುಕೊಳ್ಳುವುದರಲ್ಲಿ ಕೊನೆಗಾಣುತ್ತದೆ. ಇದು ನಮ್ಮ ರೂಪಾಯಿ ಬೆಲೆ ಕುಸಿಯುವಂತೆ ಮಾಡುತ್ತದೆ. ನಮ್ಮ ಕಾರ್ಮಿಕರು, ರೈತರು, ಕೂಲಿಕಾರರು ತಮ್ಮದೇನು ತಪ್ಪಿಲ್ಲದೆ ಈ ಶೇರು ಮಾರ್ಕೆಟ್‌ನ ಸುಳಿಗೆ ಸಿಲುಕುತ್ತ ಹಲವು ಪಟ್ಟು ದಿಢೀರ್ ಬೆಲೆ ಏರಿಕೆಯಾಗುತ್ತದೆ. ಸಾವಿರಾರು ಕೈಗಾರಿಕೆಗಳು ಮುಚ್ಚುತ್ತವೆ. ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ಇಂಡೋನೇಶ್ಯಾ, ಥಾಯ್ಲೆಂಡ್, ಕೋರಿಯಾಗಳಲ್ಲಿ ಸಂಭವಿಸಿದ ಕುಸಿತವನ್ನು ಭಾರತವು ಅನುಭವಿಸ ಬೇಕಾಗಬಹುದು

ಈಗ ಶೇರು ಮಾರುಕಟ್ಟೆ ಕುಸಿದಿದೆ. ಆದರೆ ಕಳೆದ ಹಲವು ವರ್ಷಗಳಿಂದ ಹೆಚ್ಚುಕಡಿಮೆ ಹತ್ತು ವರ್ಷಗಳಿಂದ ಶೇರು ಸುಗ್ಗಿ ಕಂಡು ಬಂದಿದೆ. ಇದರಲ್ಲಿ ಸಿಂಹಪಾಲು ಮಾಹಿತಿ ತಂತ್ರಜ್ಞಾನ(ಐ.ಟಿ), ಮತ್ತಿತರ 'ಜ್ಞಾನ-ಆಧಾರಿತ' (ಜೀವಿ-ತಂತ್ರಜ್ಞಾನ ಇತ್ಯಾದಿ) ಕೈಗಾರಿಕೆಗಳದ್ದು. ಉದಾಹರಣೆಗೆ ಅಮೆರಿಕಾದ ಇಂಟರ್‌ನೆಟ್ ಕಂಪನಿಗಳ ಶೇರು ಬೆಲೆ 250 ಶೇಕಡಾ ಹೆಚ್ಚಿದೆ. ಇಂಡಿಯಾದಲ್ಲೂ ಶೇರು ಮಾರುಕಟ್ಟೆಯಲ್ಲಿರುವ ಶೇರುಗಳ ಮಾರುಕಟ್ಟೆ ಬೆಲೆಯ ಶೇಕಡಾ 15 ರಷ್ಟು. 150 ಸಾಫ್ಟ್‌ವೇರ್ ಕಂಪನಿಗಳು ಮೂರನೇ ಒಂದು ಭಾಗ ಬೆಲೆ ಹೊಂದಿವೆ. ಮಾಹಿತಿ ತಂತ್ರಜ್ಞಾನದ ನಾಗಾಲೋಟ ಈ ಶೇರು ಸುಗ್ಗಿಗೆ ಕಾರಣವೆಂಬಂತೆ ಕಾಣುತ್ತದೆ. ಸಾಫ್ಟ್ ವೇರ್ ಕಂಪನಿಗಳು, ಐ.ಟಿ. ಕಂಪನಿಗಳು ಸಾಕಷ್ಟು ಲಾಭ ಮಾಡುವ ಸಾಧ್ಯತೆ ಇದೆ. ಆದರೆ ಕೇವಲ ಇಂಟರ್‌ನೆಟ್ 'ವೆಬ್‌ಸೈಟ್' ಹೊಂದಿದ್ದು ಇಂಟರ್‌ನೆಟ್ ಮೂಲಕ ವ್ಯಾಪಾರ ಮಾಡುವ (ಯಾವುದೇ 'ಜ್ಞಾನ'ವನ್ನು ಅವು ಹೊಂದಿಲ್ಲ) ಕಂಪನಿಗಳ ಶೇರು ಬೆಲೆ ಗಗನಕ್ಕೇರಿದ್ದವು. ಇಂತಹುದೇ 'ಟ್ರೆಂಡ್'(ಪ್ರವೃತ್ತಿ) ಈಗಾಗಲೇ ಇಂಡಿಯಾದಲ್ಲೂ ಆರಂಭವಾಗಿದೆ.

ಶೇರು ಮಾರ್ಕೆಟ್‌ನ ಈ ಅಪಾರ ಕುಸಿತಕ್ಕೆ ಇಂಟರ್‌ನೆಟ್ ಒಂದು ವಿಶ್ವ ಸೂಪರ್‌ಮಾರ್ಕೆಟ್ ಆಗಿ ಬೆಳೆಯುತ್ತಿರುವುದು, ಜ್ಞಾನ ಆಧಾರಿತ ಕೈಗಾರಿಕೆಯೇ ಭವಿಷ್ಯದ ಕೈಗಾರಿಕೆ ಎಂದು ಪತ್ರಿಕೆಗಳು ಮಾಧ್ಯಮಗಳು ಹರಡಿದ ಹೆಬ್ಬುಬ್ಬೆ ಕಾರಣ(ಬಾಕ್ಸ್‌ಗಳಲ್ಲಿ ವಿವರಗಳನ್ನು ಓದಿ).

ಹಣಕಾಸು ಬಂಡವಾಳದ 'ಗರಿಷ್ಠ ಲಾಭ'ದ ಹುಡುಕಾಟ

ಹಣಕಾಸು ಬಂಡವಾಳ ಈಗ 'ಇಂಟರ್‌ನೆಟ್' ನಿಂದಾಗಿ ಗರಿಷ್ಠ ಲಾಭದ ಹುಡುಕಾಟದಲ್ಲಿ ಜಗತ್ತಿನಾದ್ಯಂತ ನಿಮಿಷಗಳಲ್ಲಿ ಸಂಚರಿಸುತ್ತಿರುವುದು ಈ ಶೇರು ಮಾರುಕಟ್ಟೆಯ ಏರುಪೇರುಗಳೇ ಮುಖ್ಯ ಕಾರಣ. ಹವಾಯಿ ದ್ವೀಪಗಳಲ್ಲಿಯೋ ಮತ್ತೆಲ್ಲಿಯೋ ಜೂಜುಕೋರ ಕೇಂದ್ರಗಳಲ್ಲಿ ಮಜ ಮಾಡುತ್ತಿರುವ ಹಣ ಬಂಡವಾಳದ ಒಡೆಯರು ತಾವಿರುವ ಸ್ಥಳದಿಂದಲೇ ಒತ್ತುವ ಒಂದು

ಜಾಗತೀಕರಣ ಈ ವಾರ ನಮ್ಮ ನಿಮ್ಮನ್ನು ಬಾಧಿಸಿದ ಪರಿ

ಬ್ರಿಟಿಷ್ ರೋವರ್ ಕಾರು ಕಾರ್ಖಾನೆ ಮಾರಾಟದ ವಿರುದ್ಧ

80 ಸಾವಿರ ಜನರ ರ್‍ಯಾಲಿ

"ಇದು ಭಾರಿ ವಂಚನೆ, ಘಾತಕದ ಕೆಲಸ. ಇದು ಕೈಗಾರಿಕೆಯನ್ನು ಬುಡಮೇಲು ಮಾಡುವ ಕೆಲಸ ವಲ್ಲದೆ ಇನ್ನೇನು?"

"ನಮ್ಮನ್ನು ಯುರೋಪಿನ ಎರಡನೇ ದರ್ಜೆಯ ಪ್ರಜೆಗಳಾಗಿ ಕಾಣಲು ಬಿಡುವುದಿಲ್ಲ. ನಮ್ಮನ್ನು ಬಳಸಿ ಎಸೆಯುವ ವಸ್ತು ತರಹ ಮಾಡಲು ಬಿಡುವುದಿಲ್ಲ"

ಇದು ರ್‍ಯಾಲಿಯೊಂದರಲ್ಲಿ ಬಂದ ಉದ್ಗಾರಗಳು ನೀವು ಪಾಪಯಾವುದೊ ಬಡದೇಶದ ಬಡ ಜನರ ಉದ್ಗಾರ ಎಂದು ಅಂದುಕೊಳ್ಳಬಹುದು. ಇದು ಜಾಗತೀಕರಣ ಕೆಲವು ದೈತ್ಯಕಂಪನಿಗಳ ಮಾಲಿಕರನ್ನು ಬಿಟ್ಟರೆ ಜಗತ್ತಿನೆಲ್ಲಾ ಜನರನ್ನು ಬ್ರಿಟನ್ ಅಮೇರಿಕಾಗಳಂತಹ ಶ್ರೀಮಂತ ದೇಶಗಳ ಕಾರ್ಮಿಕರನ್ನೂ ಹಿಂಡಿ ಹಿಪ್ಪೆ ಮಾಡುವ ಪರಿ ಇದು ಜಾಗತೀಕರಣ. ಕೇವಲ 50 ವರ್ಷದ ಹಿಂದೆ ಸೂರ್ಯ ಮುಳುಗದ ಸಾಮ್ರಾಜ್ಯ, ಜಗತ್ತಿನ ಅತ್ಯಂತ ಪ್ರಬಲ ಸಾಮ್ರಾಜ್ಯಶಾಹಿ ದೇಶ ಬ್ರಿಟನ್ನಿನ ಪ್ರಸಿದ್ಧ ಕಾರು ಕಂಪನಿ ರೋವರ್‌ನ ಕಾರ್ಮಿಕರ ಉದ್ಗಾರ ಇದು. ಬ್ರಿಟನ್‌ನ ಬರ್ಮಿಂಗ್ ಹ್ಯಾಮ್‌ನಲ್ಲಿ, ಇತ್ತೀಚಿನ ದಿನಗಳಲ್ಲೇ ಅತಿದೊಡ್ಡ ಕಾರ್ಮಿಕರ ರ್‍ಯಾಲಿ ಎಂದು ಹೆಸರಾದ ರ್‍ಯಾಲಿಯಲ್ಲಿ ಕಾರ್ಮಿಕರ ಉದ್ಗಾರಗಳು 80 ಸಾವಿರ ಜನ ಕಾರ್ಮಿಕರು, ಅವರ ಕುಟುಂಬದವರು, ಚರ್ಚ್ ನಾಯಕರು, ಪಾಪ್ ಹಾಡುಗಾರರು, ಪಾರ್ಲಿಮೆಂಟು ಸದಸ್ಯರು ಈ ಬೃಹತ್ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಬ್ರಿಟನ್‌ನ ಪ್ರಸಿದ್ಧ ಕೈಗಾರಿಕಾ ಕ್ಷೇತ್ರವಾದ ಬರ್ಮಿಂಗ್‌ಹ್ಯಾಮ್‌ನಲ್ಲಿ ಈ ಬೃಹತ್ ರ್‍ಯಾಲಿ ನಡೆದದ್ದು ರೋವರ್ ಕಂಪನಿಯನ್ನು ಅದರ ಪ್ರಸ್ತುತ ಮಾಲೀಕ ಬಿಎಂಡಬ್ಲ್ಯೂ ಮಾರಿಬಿಟ್ಟದ್ದು. ಆದ್ದರಿಂದ ಅಲ್ಲಿನ ಲಾಂಗ್‌ಬ್ರಿಜ್‌ನ ರೋವರ್ ಘಟಕದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಉದ್ಯೋಗ ಕಳೆದುಕೊಳ್ಳಲಿರುವುದರಿಂದ ಕೇವಲ 5-6 ವರ್ಷಗಳ ಹಿಂದೆ ಜರ್ಮನಿಯ ದೊಡ್ಡಕಾರು ಕಂಪನಿ ಜಗತ್ತಿನ ಆರನೇ ಅತಿ ದೊಡ್ಡ ಕಾರು ಕಂಪನಿ ಬಿಎಂಡಬ್ಲ್ಯೂ ರೋವರ್ ಕಂಪನಿಯನ್ನು ಖರೀದಿಸಿತ್ತು. ಈಗ ಅದು 'ಲ್ಯಾಂಡ್‌ರೋವರ್' ಎಂಬ ವಿಭಾಗವನ್ನು ಅಮೇರಿಕನ್ ಫೋರ್ಡ್ ಕಂಪನಿಗೂ, ಬರ್ಮಿಗ್‌ಹ್ಯಾಮಿನ ಲಾಂಗ್ ಬ್ರಿಜ್‌ನ ಘಟಕವನ್ನು ಆಲ್ಕೆಮಿ ಎಂಬ ಹಣಕಾಸು ಕಂಪನಿಗೂ ಮಾರಿತ್ತು. ಅಲ್ಕೆಮಿ ಕಾರು ಉತ್ಪಾದನೆಯ ಬಗ್ಗೆ ಏನೂ ಗೊತ್ತಿರದ ವ್ಯಾಪಾರಿ ಕಂಪನಿ. ಅಲ್ಕೆಮಿ ಎಲ್ಲಾ ಉತ್ಪಾದನೆ ನಿಲ್ಲಿಸಿ, ಕೇವಲ ಕೆಲವು ಸ್ಪೋರ್ಟ್ಸ್‌ಕಾರು ಉತ್ಪಾದಿಸುತ್ತಾರೆ. ಆದ್ದರಿಂದ ಭಾರಿ ಉದ್ಯೋಗಗಳ ನಷ್ಟ ಆಗಬಹುದು. BMW, ಬ್ರಿಟಿಷ್ ಪೌಂಡ್ ಯುರೋಪಿನ ಸಾಮಾನ್ಯ ನಾಣ್ಯ 'ಯುರೋದ ವಿರುದ್ಧ ಬೆಲೆ ಏರುತ್ತಿರುವುದು, ಉತ್ತಮ ಮಾರಾಟವಾಗದಿರುವುದು, ನಷ್ಟ ಹೆಚ್ಚಾಗುತ್ತಿರು ವುದು ರೋವರ್ ಮಾರಾಟಕ್ಕೆ ಕಾರಣ ಎನ್ನುತ್ತಾರೆ.

ಆದರೆ ರೋವರ್ ಕಾರ್ಮಿಕರು, TGWU ಎಂಬ ಕೇಂದ್ರೀಯ ಕಾರ್ಮಿಕ ಸಂಘಟನೆ, ಇತರ ಹಲವಾರು ಕಾರ್ಮಿಕ ನಾಯಕರು ಇದನ್ನು ತಿರಸ್ಕರಿಸಿದ್ದಾರೆ.

ಕೈಗಾರಿಕಾ ಮಂತ್ರಿ ರ್‍ಯಾಲಿಯಲ್ಲಿ

BMW ನ ಈ ನಿರ್ಧಾರದ ವಿರುದ್ಧ ಕೋಪ ಎಷ್ಟು ಜೋರಾಗಿತ್ತೆಂದರೆ ಈ ಭಾರಿ ರ್‍ಯಾಲಿಯಲ್ಲಿ ಕೈಗಾರಿಕಾ ಮಂತ್ರಿ ಭಾಗವಹಿಸಬೇಕಾಯಿತು. ಆತ ಸಹ BMW ನ್ನು ತೀವ್ರವಾಗಿ ಟೀಕಿಸಿದ್ದರು. ಕೆಲವೇ ವಾರಗಳ ಹಿಂದೆ BMW ಮ್ಯಾನೇಜ್‌ಮೆಂಟ್ ಸರ್ಕಾರದಿಂದ ಹಲವಾರು ಸವಲತ್ತುಗಳನ್ನು ಕೇಳಿ ಪಡೆದಿತ್ತು. ಇಂತಹ ನಿರ್ಧಾರ ತೆಗೆದುಕೊಳ್ಳುವ ಮೊದಲು ಸರ್ಕಾರಕ್ಕೆ ಒಂದು ಸೂಚನೆ ಸಹ ಕೊಟ್ಟಿರಲಿಲ್ಲ ಎಂದು ಹೇಳಿದ್ದಾರೆ. BMW ತಮ್ಮ ನಿರ್ಧಾರ ಪ್ರಕಟಿಸಿದ ದಿನ ಬ್ರಿಟಿಷ್ ಪ್ರಧಾನಿಗೆ ಸಹ ಈ ಬಗ್ಗೆ ಯಾವುದೇ ಸೂಚನೆ ಇರಲಿಲ್ಲ. ಇದು ಕೈಗಾರಿಕೆ ನಡೆಸುವ ರೀತಿ ಅಲ್ಲ ಎಂದು ರೇಗಾಡಿದ್ದರು. ಕೈಗಾರಿಕಾ ಮಂತ್ರಿ BMW ಕೊಟ್ಟಿರುವ ಕಾರಣವನ್ನು ತಿರಸ್ಕರಿಸುತ್ತಾ, BMW ಮ್ಯಾನೇಜ್‌ಮೆಂಟಿನ ನಿರ್ವಹಣೆಯಲ್ಲಿನ ದೋಷದಿಂದ ಈ ಪರಿಸ್ಥಿತಿ ಉಂಟಾಗಿದೆ ಎಂದು ಟೀಕಿಸಿದ್ದಾರೆ. ರೋವರ್ ಬ್ರಿಟಿಷ್ ಕಾರುಗಳಲ್ಲೇ ಹೆಸರಾಗಿದ್ದು, ಬ್ರಿಟಿಷ್ ಕೈಗಾರಿಕಾ ನೈಪುಣ್ಯದ 'ಶೋಕೇಸ್' ಆಗಿತ್ತು. ಆದ್ದರಿಂದ ಇಷ್ಟು ತೀವ್ರ ಆಕ್ರೋಶ ಎಬ್ಬಿಸಿದೆ.

BMW ಮ್ಯಾನೇಜ್‌ಮೆಂಟ್ ಹೇಳಿದ್ದೇ ನಿಜವಾದರೂ - ಯೂರೋದ ವಿರುದ್ಧ ಪೌಂಡು ಪ್ರಬಲವಾಗಿರುವುದು (ಪೌಂಡಿನ ಬೆಲೆ ಯುರೋಕ್ಕಿಂತ ಶೇಕಡ 12 ರಷ್ಟು ಏರಿದೆಯಂತೆ ಈ ವರ್ಷದಲ್ಲಿ), ಲಾಂಗ್‌ಆಫ್ ಘಟಕದ ಕಾರ್ಮಿಕರ ತಪ್ಪೇ? ಎಂಬ ಪ್ರಶ್ನೆ ಬ್ರಿಟಿಷ್ ಜನತೆಯನ್ನು ಕಾಡುತ್ತಿದೆ.

'ಇದು ರೋವರ್ ಶವಯಾತ್ರೆಯಲ್ಲ'

ಜಾಗತಿಕ ಬಂಡವಾಳ ಕಾರ್ಮಿಕರ ಜತೆಗೆ ವರ್ತಿಸುವುದೇ ಹಾಗೆ. ಪ್ರಧಾನಿ, ಕೈಗಾರಿಕಾ ಮಂತ್ರಿಗಳನ್ನು ಅವರು ಕೇರ್ ಮಾಡುವುದಿಲ್ಲ, ಅವರು ಕಾರ್ಮಿಕರ ಪರವಾಗಿ ಮಾತನಾಡಿದರೆ ಪ್ರಧಾನಿ, ಕೈಗಾರಿಕಾ ಮಂತ್ರಿಗಳು ನಾಟಕವಾಡುತ್ತಿರಬಹುದು. ಆದರೆ ಬ್ರಿಟಿಷ್ ಕಾರ್ಮಿಕ ವರ್ಗ, ಜನತೆ ಇದನ್ನು ಗಂಭೀರವಾಗಿ ತೆಗೆದುಕೊಂಡಿದೆ. ಜಾಗತೀಕರಣ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶವಾದ ಬ್ರಿಟನ್‌ನಂತಲ್ಲೂ, ಅದರಲ್ಲೂ ಜಗತ್ತಿನ ಆರನೇ ದೊಡ್ಡ ಕಾರು ತಯಾರಿಕಾ ಕಂಪನಿಯ ಕಾರ್ಮಿಕರನ್ನು ಈ ರೀತಿ ಯಕಶ್ಚಿತ್ತಾಗಿ ನೋಡುತ್ತದೆ ಎಂಬುದನ್ನು ತಿಳಿದುಕೊಂಡಿದ್ದಾರೆ ಮತ್ತು ಸುಮ್ಮನೆ ಕೂತಿಲ್ಲ. BMW ನಿರ್ಧಾರ ಬದಲಿಸುವಂತೆ ಒತ್ತಡ ಹೇರುವ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ. ರ್‍ಯಾಲಿಯಲ್ಲಿ ಕಾರ್ಮಿಕರು ಉದ್ಗರಿಸಿದಂತೆ 'ಇದು ರೋವರ್‌ನ ಶವಯಾತ್ರೆಯಲ್ಲ' ಈ ಜಾಗತೀಕೃತ ಬಂಡವಾಳ ಉದ್ಧಟತನ ಸಹಿಸುವುದಿಲ್ಲ. ಅದಕ್ಕೆ ತಲೆಬಾಗುವುದಿಲ್ಲ. ಅದನ್ನು ಬಗ್ಗಿಸುತ್ತೇವೆ ಎನ್ನುವ ಛಲ ಕಾಣುತ್ತಿದೆ.

ರೋವರ್ ಕಾರು ಕಾರ್ಖಾನೆ ಮಾರಾಟದ ವಿರುದ್ಧ 80 ಸಾವಿರ ಜನರ ರ್‍ಯಾಲಿ




ಹೊರದೇಶದ ಸಿಮೆಂಟೋ ನಮ್ಮದೇಶದ ಸುರಕಿಗಾರೆಯೋ?

ಕೆಲಸವನ್ನು ಪ್ರಾರಂಭಿಸುವ ಕಾಲದಲ್ಲಿ ಅದಕ್ಕೆ ಸಂಬಂಧಪಟ್ಟ ಇಂಜಿನಿಯರುಗಳಲ್ಲಿ ಒಂದು ತಕರಾರೆದ್ದಿತು. ಅವರಲ್ಲಿ ಒಂದು ಪಕ್ಷದವರು ಹೊರದೇಶದಿಂದ ಸಿಮೆಂಟನ್ನು ತರಿಸಬೇಕೆಂದರು. ಇನ್ನೊಂದು ಪಕ್ಷದವರು ಸುರಕಿಗಾರೆಯನ್ನು ಉಪಯೋಗಿಸಬೇಕೆಂದರು. ಮೊದಲನೆಯ ಪಕ್ಷದವರು "ಸಿಮೆಂಟಿನ ವೆಚ್ಚ ಹೆಚ್ಚೇನೂ ಆಗುವುದಿಲ್ಲ. ಆದ್ದರಿಂದ ಅದನ್ನೇ ಉಪಯೋಗಿಸೋಣ" ಎಂದರು. ವಿಶ್ವೇಶ್ವರಯ್ಯನವರು ಎರಡನ್ನೂ ಆಲೋಚಿಸಿ ಖರ್ಚಿನ ಅಂದಾಜು ಪಟ್ಟಿಗಳನ್ನು ತಯಾರು ಮಾಡಿಸಿದರು. ಸುರಕಿ ಗಾರೆ ಕೊಂಚ ಅಗ್ಗವೆಂದು ತೋರಿತು. ಆಗ ವಿಶ್ವೇಶ್ವರಯ್ಯನವರು ಹೇಳಿದರು. "ಸುರಕಿ ಗಾರೆಯ ಉಪಯೋಗದಿಂದ ಆಗುವ ಉಳಿತಾಯ ಒಂದು ಟನ್ನಿಗೆ ಒಂದು ದಮ್ಮಡಿಯಷ್ಟೇ ಆದರೂ ನಾವು ಉಪಯೋಗಿಸಬೇಕಾದದ್ದು ಖಂಡಿತವಾಗಿ ಸುರಕಿ ಗಾರೆಯನ್ನೇ. ಕೊಂಚದ ಉಳಿತಾಯವೆಂದು ಅಲಕ್ಷ್ಯ ಮಾಡತಕ್ಕದಲ್ಲ. ಅಷ್ಟೇ ಅಲ್ಲದೆ ಅದು ನಮ್ಮ ಜನಾಂಗಕ್ಕೆ ಉದ್ಯೋಗ ಕೊಡುತ್ತದೆ. ಇದೂ ಗಮನದಲ್ಲಿರಬೇಕಾದ ಸಂಗತಿ".

ಇತಿಹಾಸದ ಪುಟಗಳಿಂದ

ಈಗ ಭಾರತದ ವಿಜ್ಞಾನ ತಂತ್ರಜ್ಞಾನ ಶಕ್ತಿ ಹಾಗೂ ಕೈಗಾರಿಕಾ ಸಾಮರ್ಥ್ಯ ಬೆಳೆದಿರುವಾಗ ವಿದೇಶಿ, ವಿದೇಶಿ ಎಂಬ ಗಾನ ಈ ಜಾಗತೀಕರಣದ ಮೇಳದಲ್ಲಿ ಎಲ್ಲೆಲ್ಲಿಯೂ ಗುಂಜಾರವವಾಗುತ್ತಿದೆ. ಆದರೆ ಭಾರತದಲ್ಲಿ ಕೈಗಾರಿಕಾರಣದ ಆರಂಭದ ಕಾಲದಲ್ಲಿ ಇಂತಹ ಸೌಲಭ್ಯಗಳಾವುವೂ ಇಲ್ಲದಿದ್ದಾಗ ವಿಶ್ವೇಶ್ವರ್‍ಯನವರು ಅದನ್ನು ಎದುರಿಸಿದ ಬಗೆ ಹೇಗೆ? ಹಾಗೆಯೇ ಅಮೆರಿಕಾ, ಅಮೆರಿಕಾ ಎನ್ನುವ ಭ್ರಮೆ ಬೆಳೆಸುತ್ತಿರುವಾಗ ಅಂದು ಬ್ರಿಟಿಶರು ಹೇಗೆ ನಮ್ಮ ಬೆಳವಣಿಗೆಯ ಕತ್ತು ಹಿಸುಕಹೊರಟಿದ್ದರು ಎಂಬ ಅನುಭವವೂ ಕೂಡ ಇಂದು ನಮಗೊಂದು ಪಾಠ





ದೈವಿಕ ವಿಘ್ನ: ಮಣಿಯದ ವಿಶ್ವೇಶ್ವರಯ್ಯ

ವಿಶ್ವೇಶ್ವರಯ್ಯನವರು ದಿನಾನರಾಗಿದ್ದಾಗ, ಕೃಷ್ಣರಾಜಸಾಗರದ ಕಾರ್ಯ ಪ್ರಾರಂಭವಾಗಿ ಇನ್ನೂ ನಡೆಯುತ್ತಿದ್ದಾಗ. ಮೈಸೂರು ಸರಕಾರಕ್ಕೂ, ಕೋಲಾರದ ಚಿನ್ನದ ಗಣಿಯ ಕಂಪನಿಗಳ ಮುಖ್ಯಸ್ಥರಾದ ಜಾನ್ ಟೇಲರ್ ಕಂಪನಿಯವರಿಗೂ ವಿದ್ಯುಚ್ಛಕ್ತಿ ಸರಬರಾಜು ಬಗೆಗೆ ಒಂದು ಒಪ್ಪಂದವಾಗಿತ್ತು. ಯಾವುದೋ ಒಂದು ಗೊತ್ತಾದ ತಾರೀಖಿಗೆ ಬಹುಶಃ ಹೊಸ ವರ್ಷದ ಮೊದಲನೆಯ ತಾರೀಖಿಗೆ ಮೈಸೂರು ಸರಕಾರವು ಚಿನ್ನದ ಗಣಿಗಳಿಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲು ಒಪ್ಪಿಕೊಂಡಿತ್ತು. ಆದ್ದರಿಂದ ಕೃಷ್ಣರಾಜಸಾಗರದ ಕೆಲಸಗಳು ಬೇಗಬೇಗ ನಡೆದು ಶಿವನ ಸಮುದ್ರದಲ್ಲಿ ನೀರಿನ ಪ್ರವಾಹ ಯಥೇಷ್ಟವಾಗುವುದು ಅವಶ್ಯವಾಗಿತ್ತು. ಆದರೆ ಆ ಅಕ್ಟೋಬರಿನಲ್ಲಿ ಅತಿವೃಷ್ಟಿಯಾಯಿತು. ಕೊಡಗಿನ ಕಡೆಯಿಂದ ನೆರೆ ಬಂದಿತು. ಅದು ಎರಡು ದಡಗಳನ್ನೂ ಮೀರಿ ನುಗ್ಗಿಕೊಂಡು ಬಂದಿತು. ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಸೇರಿದೆ. ಅಲ್ಲಿಗೆ ಕನ್ನಂಬಾಡಿಯಿಂದ ಘಳಿಗೆಘಳಿಗೆಗೂ ವರ್ತಮಾನ ಬರುತ್ತಿದೆ. ನದಿಯಲ್ಲಿ ಪ್ರವಾಹ ಜೋರಾಗಿದೆ ಎಂದು, ಆದಕ್ಕಾಗಿ ಕೆಲಸಗಾರರು ಭಯಪಟ್ಟು ಹಿಂಜರಿಯುತ್ತಿದ್ದಾರೆಂದು, ಈ ಸಂದರ್ಭದಿಂದ ಕೆಲಸ ಸಾವಕಾಶವಾಗುತ್ತದೆಂದೂ, ಗೊತ್ತಾದ ದಿವಸಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸುವುದು ಅಸಾಧ್ಯವೆಂದೂ, ಒಪ್ಪಂದದ ತಾರೀಖನ್ನು ಮುಂದಕ್ಕೆ ಹಾಕಬೇಕೆಂದೂ ಇಲಾಖೆಯ ಅಧಿಕಾರಿಗಳು ಒತ್ತಾಯ ಮಾಡಿದರು. ಈ ಸಂದರ್ಭ ಶ್ರೀಮನ್ಮಹಾರಾಜರವರಿಗೆ ತಿಳಿದು ಅವರು ದಿವಾನರಿಗೆ ಹೇಳಿದರು. ಅವಸರ ಪಡಬೇಕಾದದ್ದಿಲ್ಲವೆಂದು.

"ನಮಗೆ ಬಂದಿರುವ ವಿಘ್ನ ದೈವಿಕವಾದದ್ದು, ನಿಮ್ಮಿಂದ ಆದದ್ದಲ್ಲ. ಇದಕ್ಕಾಗಿ ನೀವು ಪರಿತಾಪ ಪಡತಕ್ಕದ್ದಲ್ಲ. ನೀವೂ ಅವಸರ ಮಾಡಿಕೊಂಡು ಕೆಲಸ ಮಾಡುವವರನ್ನೂ ಅವಸರಪಡಿಸಿ ಪ್ರಯಾಸ ಪಡುವುದು ನ್ಯಾಯವಲ್ಲ."

ಹೀಗೆ ಹೇಳಿ ತಾಳ್ಮೆಯನ್ನು ಉಪದೇಶಿಸಿದರು. ಲಂಡನ್ ಪಟ್ಟಣದಿಂದ ಜಾನ್ ಟೇಲರ್ ಕಂಪನಿಯ ಯಜಮಾನರೇ ಟೆಲಿಗ್ರಾಂ ಕಳುಹಿಸಿ ಕೆಲಸ ತಡವಾದದ್ದಕ್ಕೆ ಮೈಸೂರು ಸರಕಾರದ ಮೇಲೆ ಯಾವ ಹೊಣೆಗಾರಿಕೆಯೂ ಇಲ್ಲವೆಂದೂ ಒಪ್ಪಂದದ ತಾರೀಖನ್ನು ಮೈಸೂರು ಸರಕಾರವು ಅನುಕೂಲವರಿತು ಮುಂದುವರಿಸಬಹುದೆಂದೂ ಸೂಚನೆ ಕೊಟ್ಟರು.

ವಿಶ್ವೇಶ್ವರಯ್ಯನವರು ಒಪ್ಪಿದರೆ?

ಬಿಲ್‌ಕುಲ್ ಒಪ್ಪಲಿಲ್ಲ. ಇಂಡಿಯಾ ದೇಶದ ಜನ ಒಂದು ನಿಶ್ಚಯಮಾಡಿದರೆಂದರೆ ಅದು ನಡೆದೇ ನಡೆಯಬೇಕು : ನಾವು ಮಾತಿಗೆ ತಪ್ಪಬಾರದು ಎಂದು ಹಠಹಿಡಿದರು.

ಅದಿನ ಡೆಪ್ಯುಟಿ ಕಮಿಷನರಿಗೂ ಇತರ ಮುಖ್ಯಸ್ಥರಿಗೂ ಹುಕುಂ ಆಯಿತು. ಈ ಪ್ರಯತ್ನಕ್ಕೆ ಪೊಲೀಸ್ ಸೂಪರಿಂಟೆಂಡೆಂಟ್ ಎಲ್. ಕೃಷ್ಣರಾಯರ ಮೆಹನತ್ತು ತುಂಬ ನೆರವಾಯಿತು. ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಮತ್ತು ಇತರ ಕಡೆ ಸಿಕ್ಕುವ ಕೂಲಿಗಾರರನ್ನೆಲ್ಲ ಸೇರಿಸತಕ್ಕದ್ದು. ಹತ್ತಿಪ್ಪತ್ತು ಸಾವಿರ ಗೋಣಿಚೀಲಗಳನ್ನು ಜಮಾಯಿಸತಕ್ಕದ್ದು. ಆ ಚೀಲಗಳಲ್ಲಿ ಮರಳು ಭರ್ತಿಮಾಡತಕ್ಕದ್ದು. ಆ ಉಸುಬು ತುಂಬಿದ ಚೀಲಗಳನ್ನು ನದಿಯ ಉಭಯ ಪಾರ್ಶ್ವಗಳಲ್ಲಿಯೂ ಕೃತಕ ದಡವಾಗಿ ಕಟ್ಟತಕ್ಕದ್ದು. ಒಂದು ಸಾವಿರ ಕಿಟ್ಸನ್ ಲ್ಯಾಂಪುಗಳನ್ನು ಉರಿಸಿ ರಾತ್ರಿ ಕೆಲಸ ನಡೆಸತಕ್ಕದ್ದು. ಹೀಗೆ ಹಗಲೂ ರಾತ್ರಿಯೂ ಕೆಲಸ ಸಾಗತಕ್ಕದ್ದು.

ಇದರಂತೆ ಆಯಿತು. ವಿಶ್ವೇಶ್ವರಯ್ಯನವರು ಕನ್ನಂಬಾಡಿಯಲ್ಲಿ ರಾತ್ರಿ ತಂಗುವರು. ಬೆಳಗ್ಗೆ ಒಂಭತ್ತು ಹತ್ತು ಘಂಟೆಯ ವೇಳೆಗೆ ಮೈಸೂರು ಪಟ್ಟಣಕ್ಕೆ ಬಂದು ತಮ್ಮ ಕೆಲಸಗಳನ್ನು ನೋಡುವರು. ಮಧ್ಯಾಹ್ನ ಹನ್ನೆರಡರಿಂದ ಸಂಜೆ ಐದೂವರೆ ಆರರವರೆಗೆ ಪ್ರಜಾಪ್ರತಿನಿಧಿ ಸಭೆಯ ಕಾರ್ಯಕಲಾಪಗಳನ್ನು ನಡೆಸುವರು. ಸಭೆ ಮುಗಿದಕೂಡಲೆ ಕಾರಿನಲ್ಲಿ ಕುಳಿತು ಕನ್ನಂಬಾಡಿಗೆ ಹೊರಡುವರು. ಬೆಳಗ್ಗಿನಿಂದ ಸಂಜೆಯವರೆಗೂ ಅರ್ಧರ್ಧ ಘಂಟೆಗೆ ಮೈಸೂರು ಟೆಲಿಗ್ರಾಂ ಮೂಲಕ ವಾರ್ತೆ ಬರುವುದು.

ಹೀಗೆ ತಾವೇ ಖುದ್ದು ಒಪ್ಪಂದದಂತೆ ಚಿನ್ನದ ಗಣಿಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಕೊಡಲಾಯಿತು. ಮಹಾರಾಜರು ಪಟ್ಟ ಆನಂದವನ್ನು ಇಷ್ಟಿಷ್ಟೆಂದು ಹೇಳಲಾಗದು. ಅವರು ಕಂಡವರೊಡನೆಲ್ಲ ತಮ್ಮ ಹಿಗ್ಗು ಹೇಳಿಕೊಳ್ಳುತ್ತಿದ್ದರು.

ಆಯ್ಕೆ: **ಡಿವಿಜಿ ಕೃತಿಶ್ರೇಣಿ-ಸಂಪುಟ 7**
ನೆನಪಿನ ಚಿತ್ರಗಳು ಕೃತಿಯಿಂದ

ಕಾರು ಕಾರ್ಖಾನೆ ಬ್ರಿಟಿಶರ ಒಳಸಂಚು

1938-39ರಲ್ಲಿ ವಿಶ್ವೇಶ್ವರಯ್ಯನವರು ಬಹುಕಾಲದಿಂದ ಮನಸ್ಸಿನಲ್ಲಿರಿಸಿಕೊಂಡಿದ್ದ ಒಂದು ಆಲೋಚನೆ ಕಾರ್ಯರೂಪಕ್ಕೆ ಬರುವ ಶಕುನ ತೋರಿತು : ನಮ್ಮ ದೇಶದಲ್ಲಿ ಒಂದು ಸ್ವತಶ್ಚಲಿಯಾನದ (ಆಟೋಮೊಬೈಲ್ ಮೋಟರ್‌ಬಂಡಿ) ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬುದು. ಈ ಯೋಚನೆಗೆ ಕಾರ್ಯರೂಪ ಕೊಡಲು ಪ್ರಸಿದ್ಧ ಉದ್ದಿಮೆಗಾರರಾದ ವಾಲ್‌ಚಂದ್ ಹೀರಾಚಂದ್ ಸೇಠ್‌ರವರು ಸಿದ್ಧರಾಗಿ ಬಂದರು. ಇವರಿಬ್ಬರೊಡನೆ ಸಹಕರಿಸಲು ಆಗಿನ ದಿವಾನ್ ಸರ್ ಮಿರ್ಜಾ ಸಾಹೇಬರು ಸಿದ್ಧರಾಗಿದ್ದರು. ಯೋಜನೆಯನ್ನು ತಕ್ಕ ವಿವರಗಳೊಡನೆ ತಯಾರು ಮಾಡಿ ಸರಕಾರದ ಅನುಮತಿಗಾಗಿಯೂ ಸಹಾಯಕ್ಕಾಗಿಯೂ ಮೈಸೂರು ಸರಕಾರಕ್ಕೆ ತಲುಪಿಸಿದ್ದಾಯಿತು. ಸರಕಾರದ ಮಂತ್ರಿಸಂಪುಟವು ಅದನ್ನು ಪರ್ಯಾಲೋಚಿಸಿ ಆ ಯೋಚನೆಯನ್ನು ಅನುಮೋದಿಸಬಹುದೆಂದು ತೀರ್ಮಾನ ಮಾಡಿ ಆ ತೀರ್ಮಾನವನ್ನು ಅಂದಿನ ಮಹಾರಾಜರವರ ಅನುಮತಿಗೆ ಕಳುಹಿಸಿದ್ದೂ ಆಯಿತು.

ಆದರೆ ಆ ಯೋಚನೆಗೆ ವಿರೋಧಿಗಳಾದವರು ಕೆಲಮಂದಿ ಪ್ರಬಲರಿದ್ದರು. ಆಗ ರೆಸಿಡೆಂಟ್ ಆಗಿದ್ದ ಫ್ರೇಸರ್ ಎಂಬಾತನೂ ಮಹಾರಾಜರ ಪ್ರೈವೆಟ್ ಸೆಕ್ರೆಟರಿಯಾಗಿದ್ದ ಸರ್ ಚಾರ್ಲ್ಸ್ ಟಾಡ್‌ಹಂಟರ್ ಎಂಬಾತನೂ ಇತರ ಇಂಗ್ಲಿಷ್ ಹುದ್ದೆದಾರರೂ ಆ ಪ್ರಯತ್ನವನ್ನು ಭಂಗಪಡಿಸತಕ್ಕದ್ದೆಂದು ನಿಶ್ಚಯಿಸಿಕೊಂಡರು. ಅವರಿಗೆ ಹಿಮ್ಮೇಳವಾಗಿ ನಮ್ಮ ಜನರೂ ಕೆಲವರು ಸೇರಿಕೊಂಡರು ; ಅವರನ್ನು ಹೆಸರಿಸಲು ನನಗೆ ಇಷ್ಟವಿಲ್ಲ. ಈ ಗುಂಪಿನ ಕೈವಾಡ ಪ್ರಬಲವಾಯಿತು ; ಸರಕಾರದ ಮಂತ್ರಿ ಸಂಪುಟವು ಮೇಲಕ್ಕೆ ಕಳುಹಿಸಿದ್ದ ಯೋಜನೆ ಮಹಾರಾಜರಿಂದ ಅಂಗೀಕಾರವಾಗುವ ಸೂಚನೆ ತೋರಿಬರಲಿಲ್ಲ.

ತಮಂಧದ ಕೇಡು

ಪುಟ 14 ರಿಂದ

ಎಂದೂ ಹಿಂಗ ಅಂದಿರಲಿಲ್ಲ. ಶಾಂತಗೌಡುಗ ಸಿಟ್ಟು ಬಂತು.

'ಯಾಕ ಬ್ಯಾಡೇನು?'

'ಹೋಗಿ ಬರಮಂದ್ರ ಹೋಗಿ ಬರಮಪ್ಪಗೌಡ' ಅಂದ.' ನಡಿ ಅಂಗಧ್ರ' ಅಂತ ಶಾಂತಗೌಡ ಎದ್ದು ಹೆಗಲಮ್ಯಾಲಿನ ಸೆಲ್ಲೆ ತಗಲ್ಯಾಕೆ ಕೊಠಡಿಗೆ ಹೋದ. ಸೂಗಪ್ಪ ಮಾಸ್ತಾರ ಎದ್ದು ಬಡಬಡ ಪಡಸಾಲಿ ಇಳಿದು ದುರುಗನ ತಕ ಬಂದು 'ದುರುಗಾ, ನೋಡು... ನೀನು ಇನ್ನ ಮ್ಯಾಲೆ ಈ ಊರಾಗ ಇರದುಬ್ಯಾಡ. ನಿನ್ನ ಮಗನ ಜತಿಗೆ ಹೋಗಿ ಇದ್ದುಬುಡು. ಈ ಕಕ್ಕಲಾತಿಯಲ್ಲದ ಕೋಡಿ ಗೌಡುನ ಜತಿಗೆ ಏಸುದಿನ ಬದುಕತ್ತಿದ್ದಿ! ಎಂದ ಸೂಗಪ್ಪ ಮಾಸ್ತರ. ನಿನ್ನ ಮಗ ಹಿಂದಕ ಸರಕಂಡು ತಣ್ಣಗ ಇರಂತ ಹೇಳು. ನೀನು ಅಲ್ಲೇ ಇರು. ಬಂದದ್ದು ಬಂದಂಗ ನುಂಗಿಕೊಂಡು ಹೋದ್ರ ಬಂಧನ ಇಲ್ಲಂತ. ಏನ...' ಎಂದು ಹೇಳಹೊತ್ತಿಗೆ ಶಾಂತಗೌಡ ಕಾಲೆಳಕಂತ ಬಂದ. 'ರುದ್ರಮ್ಮಗ ಇದ್ಯಾವುದು ಹೇಳಬ್ಯಾಡ ಶಾಂತಪ್ಪ. ಒಂದು ವ್ಯಾಳ್ಳಿ ಆಕಿ ಕಿವಿಗೆ ಬಿದ್ದಿದ್ರ..... ಅಂಥದ್ದೇನೂ ನಡೆಂಗಿಲ್ಲ ಸರಿ ಮಾಡಿಬುಡು. ಈ ಸಲ ಚನ್ನ ಬಂದ್ರ ನಾನೂ ತಿಳಿಸಿ ಹೇಳ್ತಿನಿ'. ಅಂದ ಸೂಗಪ್ಪ ಮಾಸ್ತಾರ ಶಾಂತಗೌಡ, 'ಹ್ಞೂ' ಅಂದು ನಡದ ದುರುಗ ಹಿಂದ ಸಾಗಿದ. ಹೊರಗ ಅಂಗಳದೆಲ್ಲಿ ನಾಯಿ ಕಾಲು ಮುರುಕಂಡು ಬಿದ್ದಿತ್ತು. ಶಾಂತಗೌಡ ಮುಂದುಮುಂದ ದುರುಗ ಹಿಂದಿಂದ ಸಾಗಿದರು. ದುಮದರಿ ಹಂಗೇಯಿತು. ಊರು ದಾಟಿದರು; ಕೇರಿ ದಾಟಿದರು. ಮೊನ್ನೆ ಮೊನ್ನೆ ತನಕ ಅವುರು ಹಂಗ ಹೋಗುವುದನ್ನು ನೋಡುವುದೇ ಒಂದು ಸಂಭ್ರಮ ಅಂತ ಊರು-ಕೇರಿ ತಿಳಕಂಡಿತ್ತು. ಆದರೆ ಇವತ್ತು ಹೆಂಗೆಂಗೋ ನೋಡಾಕತ್ತಾರಂತ ಶಾಂತಗೌಡುಗ ಅನಿಸ್ತು. ಬಳಿ ಅಂಗಿ, ಬಿಳಿಪಂಚಿ ತೊಟಗಂಡು ಹೆಗಲಮ್ಯಾಲೆ ಸೆಲ್ಲೆ ಹಾಕ್ಕೊಂಡು, ತೆಳ್ಳಗ, ಬೆಳಗಯಿದ್ದ ಶಾಂತಗೌಡ ಮುಂದುಮುಂದ ಕಾಲೆಳಕಂತಾ ನಡೆದರೂ ರವದೆ ಹೋದಂಗ ನಡಿತ್ತಿದ್ದ. ಹಿಂದಿಂದ ದುರುಗ ದುರುದುರು ಓಡುತ್ತಿದ್ದ. ಅವುರು ಹೊಂಟುದ್ದು ಸುತ್ತಲ ಹೊಲಗಳವರಿಗೆ ಗೊತ್ತಾಗುತ್ತಿತ್ತು. ಶಾಂತಗೌಡ ಗಟ್ಟಿಯಾಗಿ ಏನೇನೋ ಸುದ್ದಿ ಹೇಳಿಕೆಂತ ನಡಿತಿದ್ದರೆ ದುರುಗ ಹೇಳಿದ್ದಕ್ಕೆಲ್ಲ ಹೌದಪ್ಪಯಪ್ಪ' 'ನಿನ್ನ ಮಾತು ಕರೇವಾದ', 'ನಿನ ಮಾತು ತೆಗೆದಾಕೆಂಗಿಲ್ಲ ಗೌಡ' ಅಂತ ಅನಕಂತ ಓಡುತ್ತಿದ್ದರೆ ಸುತ್ತಲ ಹೊಲಗಳಾಗ ಇದ್ದ ಮಂದಿಗೆ ಕೇಳುತ್ತಿತ್ತು. ಆದರೆ ಇವತ್ತು ಊರು ಕೇರಿ ದಾಟಿದರೂ ಮಾತಿಲ್ಲ. ಎರಡುಹೊಲ ದಾಟಿದರೂ ಕತೆಯಿಲ್ಲ, ಅದರಾಗ ದುಮದರಿ ಕರಗದೆ ಹತ್ತದಿನ್ನೈದು ಮಾರ ದೂರದ ದಾರಿ ಮಾತ್ರ ಕಾಣುತ್ತಿತ್ತು. ತುಂಗಮ್ಮನ ದಂಡೆಗೆ ಬಂದು ನಿಂತಗಂಡರೂ ಇಬ್ಬರ ನಡುಕ ಹಾಂ ಇಲ್ಲ. ಹೂಂ ಇಲ್ಲ! ತುಂಗಮ್ಮ ಬಳುಬುಳು ಅಂತ ಹರಿತಿದ್ದಳು. 'ನೀರು ಬಂದಾವೋ ಏನೋ' ಅನಕಂಡ ಶಷಾಂತಗೌಡ. ಇವತ್ತು ಸೂರಿಯನ ದರ್ಶನವೇ ಇಲ್ಲ. ಇವತ್ತಲ್ಲ. ವಾರದಿಂದ ಇದ್ದಿಲ್ಲ ಜಿನಿಜಿನಿ ಮಳೆ ಇವತ್ತು ಇದ್ದಿಲ್ಲ. ಮೋಡಕವುದು ಕತ್ತಲಿದ್ದಂಗಿತ್ತು. ಶಾಂತಗೌಡ ನಿಂತು ನೋಡಿದ. ಆ ದಂಡೆಮ್ಯಾಗಿನ, ಅಕ್ಕ ರುದ್ರಮ್ಮನ ಊರು ಇವತ್ತು ಕಾಣಲಿಲ್ಲ. ತುಂಗಮ್ಮನ ಬುಳಬುಳ ಸಪ್ಪಳ ಕೇಳತಿತ್ತೇ ಹೊರತು ಕಲ್ಲು ಬಂಡೆ ಗಿಡಗಂಟೆ ನೀರು ಯಾವುದು ಕಾಣುತ್ತಿದ್ದಿಲ್ಲ. ಸುಮ್ಮನೆ ನಿಂತಗಂಡ ಹಿಂದಿದ್ದ ದುರುಗ ಮೆಲ್ಲಕ ಬಂದ.

(ಮುಂದಿನ ವಾರಕ್ಕೆ)



ದ.ಕ. ಮತ್ತು ಉಡುಪಿ ಜಿಲ್ಲಾ ಸಿಐಟಿಯು 6ನೇ ಜಿಲ್ಲಾ ಸಮ್ಮೇಳನದ ಬಹಿರಂಗ ಸಭೆಯಲ್ಲಿ ನೆರೆದಿರುವ ಕಾರ್ಮಿಕರು ಮತ್ತು ಅವರನ್ನುದ್ದೇಶಿಸಿ ಮಾತನಾಡುತ್ತಿರುವ ಪಿ.ಜೆ.ಕೆ.ನಾಯರ್. ವೇದಿಕೆಯ ಮೇಲಿರುವ ಇತರರು ಬಿ.ಮಾಧವ, ಸಿ.ನಂಜುಂಡಪ್ಪ, ಅಬ್ರಾಹಂ ಕರ್ಕಡ, ಕೆ.ಶಂಕರ್




ಆಗಲಿರುವ ಪ್ರತಿಭಟನೆ

ಪಕ್ಷಬೇಧವಿಲ್ಲದ ಕೇರಳ ಪ್ರತಿಭಟನೆ

ದಿಲ್ಲಿಯಲ್ಲಿ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿಗಳ ಧರಣಿ

ಕೇರಳದ ಸಾರ್ವಜನಿಕ ವಿತರಣಾ ವ್ಯವಸ್ಥೆ ಒಂದು ಮಾದರಿ ವ್ಯವಸ್ಥೆ. ಬಿಜೆಪಿ ನೇತೃತ್ವದ ವಾಜಪೇಯಿ ಸರಕಾರ ಹಾಗೂ ಹಿಂದಿನ ಸರಕಾರಗಳೂ ಯಾರ ಸರ್ಟಿಫಿಕೇಟ್‌ಗಾಗಿ ಸದಾ ಹಾತೊರೆಯುತ್ತಾರೋ ಬಹುರಾಷ್ಟ್ರೀಯ ಕಂಪನಿಗಳ ಈ ಪರಮಪಿತ ವಿಶ್ವಬ್ಯಾಂಕ್ ಕೂಡಾ ಮೆಚ್ಚಿಕೊಂಡಿರುವ ವ್ಯವಸ್ಥೆಯಿದು. ಎಲ್ಲಾ ಜನವಿಭಾಗಗಳು ಜೀವನಮಟ್ಟವನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ 'ಮಾವೆಳಿ ಸ್ಟೋರ್' ಗಳೆಂದು ಹೆಸರಾದ ಅಂಗಡಿಗಳಿಂದ ಕೂಡಿದ ಸಾರ್ವಜನಿ ವಿತರಣಾ ಸರಣಿ ಹೊಂದಿರುವ ಈ ವ್ಯವಸ್ಥೆಯ ಮೂಲಕ ಆಹಾರ ಧಾನ್ಯಗಳನ್ನು ಮಾತ್ರವಲ್ಲ ದೈನಂದಿನ ಬಳಕೆಯ ವಸ್ತುಗಳನ್ನು ನ್ಯಾಯ ಬೆಲೆಯಲ್ಲಿ ಮನೆಬಾಗಿಲಲ್ಲೆ ಒದಗಿಸಲಾಗುತ್ತಿದೆ. ಕೇರಳ ರಾಜ್ಯ ಆಹಾರ ಧಾನ್ಯಗಳ ಕೊರತೆ ಎದುರಿಸುತ್ತಿರುವ ರಾಜ್ಯ ಎಂಬುದನ್ನು ಗಮನಿಸಬೇಕು. ಸಾಮಾನ್ಯವಾಗಿ ದೊಡ್ಡ ಹಬ್ಬಗಳು ಕಾಳಸಂತೆಕೋರರಿಗೆ ಸುಗ್ಗಿಯ ದಿನಗಳು. ಆದರೆ ಕೇರಳದ ಅತಿದೊಡ್ಡ ಹಬ್ಬ ಓಣಂ ವೇಳೆಯಲ್ಲೂ ರಾಜ್ಯದ ಯಾವುದೇ ಮೂಲೆಯ ಹಳ್ಳಿಯಲ್ಲೂ


ವೇದಿಕೆಯಲ್ಲಿ ಮಾತನಾಡುತ್ತಿರುವವರು ಐ.ಕೆ.ಗುಜ್ರಾಲ್, ಕುಳಿತಿರುವವರು ಇ.ಕೆ.ನಾಯನಾರ್, ಆಂಟನಿ, ಕೆ.ಕರುಣಾಕರನ್ ಮುಂತಾದವರು

ಈ ಧರಣಿ ಭಾರತೀಯ ಇತಿಹಾಸದಲ್ಲೇ ಅಪೂರ್ವ ಘಟನೆ

ಜನಗಳಿಗೆ ಇಂತಹ ತೊಂದರೆ ಎದುರಿಸಬೇಕಾಗಿ ಬರುತ್ತಿಲ್ಲ. ಇದಕ್ಕೆ ಈ ರಾಜ್ಯವ್ಯಾಪಿ ವ್ಯವಸ್ಥೆಯೇ ಕಾರಣ. ಸಾಕ್ಷರತೆ, ಉತ್ತಮ ಆರೋಗ್ಯ ವ್ಯವಸ್ಥೆಯ ಬಗ್ಗೆ ಕೇರಳಿಯರು ಹೆಮ್ಮೆಪಡುವ ಸಂಗತಿಗಳಲ್ಲಿ ಈ ಸಾರ್ವಜನಿ ವಿತರಣಾ ವ್ಯವಸ್ಥೆಯೂ ಒಂದು.

ಇದರ ಅನುಭವವನ್ನು ಬೇರೆ ರಾಜ್ಯಗಳಿಗೂ ವಿಸ್ತರಿಸಬೇಕು ಎಂಬುದು ಸಹಜವಾಗಿಯೇ ಎಲ್ಲಾ ಪ್ರಜಾಪ್ರಭುತ್ವವಾದಿಗಳ ನಿರೀಕ್ಷೆ, ಆದರ ವಾಜಪೇಯಿ ಸರಕಾರ ತದ್ವಿರುದ್ಧವಾದುದನ್ನೇ ಮಾಡುತ್ತಿದೆ. ಈ ವರ್ಷದ ಆದರ ಬಜೆಟ್ ಕ್ರಮಗಳು ಈ ವ್ಯವಸ್ಥೆಯ ಬುಡಕ್ಕೇ ಧಾಳಿ ಮಾಡಿದೆ. ಒಂದೆಡೆ ಈ ಕ್ರಮಗಳು ರಾಜ್ಯಕ್ಕೆ ಅವಶ್ಯಕ ಸಾಮಗ್ರಿಗಳ ಪೂರೈಕೆಯನ್ನು ಕಡಿತಮಾಡಿವೆ, ಇನ್ನೊಂದೆಡೆ ರೇಶನ್ ಬೆಲೆಯೇರಿಕೆಗಳು ರಾಜ್ಯದ ಬೊಕ್ಕಸದ ಮೇಲೆ ವಿಪರೀತ ಭಾರ ಹಾಕಿವೆ. ಸಹಜವಾಗಿ ಇದು ಇಡೀ ಕೇರಳದ ಜನತೆಯನ್ನು ರೊಚ್ಚಿಗೆಬ್ಬಿಸಿದೆ. ಇದರ ಪ್ರದರ್ಶನ ಏಪ್ರಿಲ್ 18 ರಂದು ನವದೆಹಲಿಯಲ್ಲಿ ಸಂಸತ್ತಿನ ಎದುರೇ ಕಂಡುಬಂತು.

ಏಪ್ರಿಲ್ 18 ರಂದು ಸಂಸತ್ ಭವನದೆದುರು ಕೇರಳದ ಮುಖ್ಯಮಂತ್ರಿ ಇ.ಕೆ.ನಾಯನಾರ್ ನೇತೃತ್ವದಲ್ಲಿ ಕೇರಳದ ಸರ್ವಪಕ್ಷ ಧರಣಿ ನಡೆಯಿತು. ಇದಕ್ಕೆ ಮೊದಲು ಕೇರಳ ವಿಧಾನಸಭೆ ಈ ಬೆಲೆಯೇರಿಕೆ, ಮುಖ್ಯವಾಗಿ ಸೀಮೆಎಣ್ಣೆ, ಅಡುಗೆ ಅನಿಲ, ಬೆಲೆಯೇರಿಕೆಗಳನ್ನು ಕೈಬಿಡಬೇಕೆಂದು ಆಗ್ರಹಿಸಿ ಅಂಗೀಕರಿಸಿದ ಸರ್ವಸಮ್ಮತಿಯ ನಿರ್ಣಯದ ಭಾಗವಾಗಿ ಈ ಧರಣಿ ನಡೆಯಿತು.

ಇದರಲ್ಲಿ ಸಿಪಿಐ(ಎಂ) ಮತ್ತು ಸಿಪಿಐನ ಪ್ರಧಾನ ಕಾರ್ಯದರ್ಶಿಗಳಾದ ಹರ್ಕಿಶನ್‌ಸಿಂಗ್ ಸುರ್ಜಿತ್ ಮತ್ತು ಎ.ಬಿ.ಬರ್ಧನ್‌ರಲ್ಲದೆ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ, ಮಾಜಿ ಪ್ರಧಾನಿಗಳಾದ ವಿ.ಪಿ.ಸಿಂಗ್ ಮತ್ತು ಐ.ಕೆ.ಗುಜ್ರಾಲ್ ಕೂಡಾ ಭಾಗವಹಿಸಿದ್ದರು.

ಕೇರಳದ ಪ್ರಮುಖ ಮುಖಂಡರೆಲ್ಲಾ ಈ ಧರಣಿಯನ್ನುದ್ದೇಶಿಸಿ ಮಾತನಾಡಿದರು. ಮಾಜಿ ಮುಖ್ಯಮಂತ್ರಿಗಳಾದ ಕಾಂಗ್ರೆಸ್ಸಿನ ಕೆ.ಕರುಣಾಕರನ್ ಮತ್ತು ಎ.ಕೆ.ಆಂಟನಿ, ಸಿಪಿಐನ ಚಂದ್ರಶೇಖರನ್ ಕೇರಳ ಕಾಂಗ್ರೆಸ್‌ನ ಕೆ.ಎಂ.ಮಣಿ, ಮುಸ್ಲಿಂ ಲೀಗ್‌ನ ಪಿ.ಕೆ.ಕುಂಞಾಲಿ ಕುಟ್ಟಿ ಮತ್ತು ಕೇರಳ ಕಾಂಗ್ರೆಸ್‌ನ ಪಿ.ಕೆ.ಜೋಸೆಫ್ ಮಾತನಾಡಿದ ಪ್ರಮುಖರು. ಕೇರಳದ ಎಲ್ಲಾ ಸಂಸತ್ ಸದಸ್ಯರು ಧರಣಿಯಲ್ಲಿ ಭಾಗವಹಿಸಿದರು. ರೇಶನ್ ವ್ಯವಸ್ಥೆಯ ಮೇಲಿನ ಧಾಳಿಯಷ್ಟೇ ಅಲ್ಲ, ಇತ್ತೀಚೆಗೆ ಕೇಂದ್ರ ಸರ್ಕಾರದ 500 ಕ್ಕೂ ಹೆಚ್ಚು ಕೃಷಿ ಉತ್ಪನ್ನಗಳ ಆಮದಿಗೆ ನೀಡಿರುವ ಅವಕಾಶದಿಂದಾಗಿಯೂ ರಾಜ್ಯದ ಮೇಲೆ ಭಾರೀ ಹೊಡೆತ ಬೀಳಲಿದೆ ಎಂದು ಅವರು ಖಂಡಿಸಿದರು.

ದೇಶವನ್ನು ಈ ವಾಜಪೇಯಿ ಸರಕಾರ ಎಂತಹ ಪ್ರಪಾತಕ್ಕೆ ತಳ್ಳುತ್ತಿದೆ ಎಂಬುದರ ಒಂದು ಸಂಕೇತ ಕೂಡ. ತೋರಿಕೆಗೆ ಕೇಂದ್ರ ಸರ್ಕಾರವನ್ನು ತೆಗಳಿದರೂ, ಬೆಲೆಯೇರಿಕೆಗಳಲ್ಲಿ ತಾನೂ ಜತೆಗೂಡುವ ನಮ್ಮ ರಾಜ್ಯದ ಕಾಂಗ್ರೆಸ್ ಸರಕಾರ, ನಮ್ಮ ಎಂ.ಪಿ.ಗಳು ಇದನ್ನು ಗಮನಿಸಿದ್ದಾರೆಯೇ? ○

ಎನ್.ಡಿ.ಎ ಅಂಗಪಕ್ಷಗಳು ಬಡವರ ಪರ ಇದ್ದರೆ ಹೊರಗೆ ಬರಲಿ

ಕಾಂ. ಸೂರ್ಯನಾರಾಯಣ ರಾವ್

ಬೆಂಗಳೂರಿನಲ್ಲಿ ಜನತಾದಳ ಹಾಗೂ ಸಿಪಿಐ(ಎಂ)ನ ಮೆರವಣಿಗೆಯನ್ನುದ್ದೇಶಿಸಿ ಮಾತನಾಡುತ್ತಿದ್ದ ಕಾರ್ಮಿಕ ನಾಯಕ, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣರಾವ್‌ರವರು, ನೆರೆ ರಾಜ್ಯವಾದ ತಮಿಳು ನಾಡು ಸರ್ಕಾರ ಪಡಿತರಕ್ಕೆ ಸಬ್ಸಿಡಿ ನೀಡಿರುವಾಗ ಕರ್ನಾಟಕ ರಾಜ್ಯ ಸರ್ಕಾರವು ಸಬ್ಸಿಡಿ ನೀಡಿ ಪಡಿತರ ಬೆಲೆ ಇಳಿಸಬಹುದಾಗಿತ್ತೆಂದರು. ಕಾಂಗ್ರೆಸ್ ಬಡ ಜನರ ಪರ ಇದೆಯೇ ಇಲ್ಲವೇ ಎಂದು ಇದರಿಂದಲೇ ತಿಳಿಯುತ್ತದೆಂದರು. ಕಾಂಗ್ರೆಸ್ ಸರ್ಕಾರಕ್ಕೆ ಬಡವರ ಬಗ್ಗೆ ಕಾಳಜಿ ಇದ್ದರೆ ಆಹಾರ ಧಾನ್ಯಕ್ಕೆ ಸಹಾಯಧನ ನೀಡಲಿ ಎಂದು ಆಗ್ರಹಿಸಿದರು. ಅಧಿಕಾರಕ್ಕೇರಿದ ಮೊದಲ ದಿನ ಮುಖ್ಯಮಂತ್ರಿ ಕೃಷ್ಣ 'ದೇವರಾಜು ಅರಸುರವರ ಆದರ್ಶ ನಮಗೆ ಇದೆ. ಎಂದು ಹೇಳಿದ್ದರು. ಆದರೆ ರಾಜ್ಯ ಸರ್ಕಾರದ ವೈಖರಿನೋಡಿದರೆ ಕೇಂದ್ರ ಸರ್ಕಾರದ ಬಿಜೆಪಿಯವರಿಗಿಂತ ಕಡಿಮೆ ಇಲ್ಲವೆಂದು ಇವರ ಆರ್ಥಿಕ ಬಜೆಟ್ ನಿಂದ ಸಾಬೀತಾಗಿದೆ ಎಂದರು.

ಬಡವರ ಸಂಕಷ್ಟಗಳನ್ನು ಅರಿಯದ ಬಿಜೆಪಿ ಸರ್ಕಾರ ಜನರ ಅಗತ್ಯ ವಸ್ತುಗಳ ಬೆಲೆಯನ್ನು ಏಕಾಏಕಿ ಏರಿಸಿದ್ದಾರೆ. ಪಡಿತರದಲ್ಲಿ 1 ಕೆ.ಜಿ.ಗೆ. 4 ರೂ. ನಿಂದ 6-40 ರೂಗೆ ಹೆಚ್ಚಿಸಿ ಬಡತನ ರೇಖೆಗಿಂತ ಮೇಲಿರುವವರೆಂದು ಕೆಂಪು ಚೀಟಿಗಳ ಮೂಲಕ ದೊರೆಯುತ್ತಿರುವ ಅಕ್ಕಿಯ ಬೆಲೆ 12-40 ರೂ. ಆಗಿದ್ದು ಮಾರುಕಟ್ಟೆ ಬೆಲೆಗೆ ಹೋಗಿದೆ. ಗೋಧಿ ಪ್ರತಿ ಕೆಜಿಗೆ 7-40ರೂ ಯಿಂದ 9-60ಕ್ಕೆ ಹೆಚ್ಚಿಸಿದ್ದಾರೆ ಹೀಗೆ ಸೀಮೆ ಎಣ್ಣೆ ಹಾಗೂ ಅಡಿಗೆ ಅನಿಲದ ದರಗಳನ್ನು ವಿಪರೀತ ಏರಿಸಿದ್ದಾರೆ.

ಕೇಂದ್ರ ಸರ್ಕಾರದ ವಿರುದ ಚಳುವಳಿಗಳು ದೇಶದಾದ್ಯಂತ ಆರಂಭಗೊಂಡಿವೆ ಎಂದ ಸೂರಿಯವರು ಕೇಂದ್ರ ಸರ್ಕಾರದ ಬಡವರ ವಿರೋಧಿ ಹಾಗೂ ರೈತ ವಿರೋಧಿ ಆರ್ಥಿಕ ನೀತಿಗಳನ್ನು ಪ್ರತಿಭಟಿಸಿ ದೇಶದಾದ್ಯಂತ ಜನಾಂದೋಲನ ತೀವ್ರವಾಗಿ ನಡೆಸಬೇಕೆಂದರು. ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಬೆಂಬಲಿಸುತ್ತಿರುವ ಕರುಣಾನಿಧಿ, ಚಂದ್ರಬಾಬು ನಾಯ್ಡುರವರು ನಿಜವಾಗಲೂ ಬಡವರ ಪರವಿದ್ದರೆ ಎನ್.ಡಿ.ಎ. ಸರ್ಕಾರ ದಿಂದ ಹೊರ ಬರಲಿ ಎಂದರು. ಎನ್.ಡಿ.ಎ. ಸರ್ಕಾರದ ಅಂಗ ಪಕ್ಷಗಳು ಬೆಲೆ ಏರಿಕೆ ಬಗ್ಗೆ ಟೀಕೆ ಮಾಡುವುದು ಬಿಟ್ಟರೆ ಸರ್ಕಾರದಿಂದ ಹೊರ ಬಂದು ಪ್ರತಿಭಟಿಸಲು ಧೈರ್ಯವಿಲ್ಲ ವೆಂದು ಕಿಡಿಕಾರಿದರು.

ಕರ್ನಾಟಕದಲ್ಲಿ ಜೊತೆ ಸೇರಿದ ಸಿಪಿಐ(ಎಂ) ಜನತಾದಳ (ಎಸ್)


ಮಾಜಿ ಪ್ರಧಾನಿ ಹಾಗೂ ರಾಷ್ಟ್ರೀಯ ಜನತಾದಳ(ಎಸ್) ಅಧ್ಯಕ್ಷರಾದ ದೇವೇಗೌಡರು, ಪಡಿತರ ಹಾಗೂ ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ವಿರೋಧಿ ಕ್ರಮವನ್ನು ಖಂಡಿಸಿ ಮಾತನಾಡುತ್ತಿದ್ದರು. ಕಳೆದ 53 ವರ್ಷಗಳಲ್ಲಿ 45 ವರ್ಷ ಅಧಿಕಾರ ನಡೆಸಿರುವ

ಬಿಜೆಪಿ ಮತ್ತು ಕಾಂಗ್ರೆಸನ್ನು ಮಟ್ಟ ಹಾಕಲು ದೇವೇಗೌಡ ಕರೆ

ಕಾಂಗ್ರೆಸ್ ಪಕ್ಷ ರೈತರಿಗೆ ಒಂದು ಪೈಸೆ ಸಾಲ ಅಥವಾ ಬಡ್ಡಿ ಮನ್ನಾ ಮಾಡಿಲ್ಲ, ರೈತರ ಪರ ಎಂದೂ ಕಾಳಜಿವಹಿಸಿಲ್ಲ ಎಂದು ದೂರಿದರು. 1989ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಸಬ್ಸಿಡಿ ರದ್ದು ಮಾಡಿ ಪಡಿತರ ಬೆಲೆ ಹೆಚ್ಚಳ ಮಾಡಿತ್ತು ಎಂದು ಟೀಕಿಸಿದರು.


ಬಿಜೆಪಿ ಮತ್ತು ಕಾಂಗ್ರೆಸ್‌ನವರು ಗ್ರಾಮೀಣ ಜನತೆ ಕಾರ್ಮಿಕರ ಪಾರ ಇಲ್ಲ, ವ್ಯಾಪಾರಿಗಳು, ಉದ್ಯಮಿಗಳು, ಹಾಗೂ ಶ್ರೀಮಂತರ ಪರ ಕರಾರುವಕ್ಕಾಗಿ ಕೆಲಸ ನಿರ್ವಹಿಸುತ್ತಾರೆಂದರು. ಇವರಿಬ್ಬರೂ ನಾಟಕ ಮಾಡುತ್ತಿದ್ದಾರೆಂದು ಮೂದಲಿಸಿದರು. ಮಾತನ್ನು ಮುಂದುವರೆಸುತ್ತಾ ಕೇಂದ್ರ ಸರ್ಕಾರ ಪಡಿತರ ಬೆಲೆ ಹೆಚ್ಚಿಸಿದನ್ನು ವಿರೋಧಿಸಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಇತ್ತೀಚೆಗೆ ನಡೆಸಿದ ಪ್ರತಿಭಟನೆಯನ್ನು ನೆನಪಿಸಿದ ಗೌಡರು, ರಾಜ್ಯದಲ್ಲಿ ಬೆಲೆ ಹೆಚ್ಚು ಮಾಡದೆ ಪ್ರತಿಭಟನೆ ಮಾಡಿದ್ದರೆ ಇವರನ್ನು ದೊಡ್ಡ ಮನುಷ್ಯರೆಂದು ಕರೆಯಬಹುದಿತ್ತೆಂದರು. ಬಡವರ ಬಳಕೆಯ ಪಡಿತರ ಸೀಮೆ ಎಣ್ಣೆ, ರಸಗೊಬ್ಬರ, ಅಡಿಗೆ ಅನಿಲ, ಮುಂತಾದ ವಸ್ತುಗಳ ಬೆಲೆ ಏರಿಸುವ ಮೂಲಕ ಕೇಂದ್ರ ಸರ್ಕಾರ ಶ್ರೀಮಂತರ ಪರ ಎನ್ನುವುದನ್ನು ಸಾಬೀತುಪಡಿಸಿದರೆ, ಬಡವರ ಪಡಿತರಕ್ಕೆ, ಸಬ್ಸಿಡಿ ನೀಡಲೂ ಮುಂದಾಗದ ರಾಜ್ಯ ಕಾಂಗ್ರೆಸ್ ಸರ್ಕಾರ ಬಡ ಜನರ ವಿರೋಧಿಯೇ ಆಗಿದೆ ಎಂದು ಕೆಂಡ ಕಾರಿದರು. ಕಾಂಗ್ರೆಸ್ ಮತ್ತು ಬಿಜೆಪಿ ಸೇರಿ ಇದುವರೆಗೆ 10 ಲಕ್ಷ ಕೋಟಿ ಸಾಲ ಮಾಡಿವೆ. ಇಷ್ಟು ಬಾರಿ ಮೊತ್ತವನ್ನು ಯಾರ ಅಭಿವೃದ್ಧಿಗಾಗಿ, ಯಾರಿಗೋಸ್ಕರ ಖರ್ಚು ಮಾಡಿದ್ದಾರೆಂದು "ಶ್ವೇತಪತ್ರ" ಹೊರಡಿಸಬೇಕೆಂದು ಆಗ್ರಹಿಸಿದರು. ಸ್ವಚ್ಛ ಹಾಗೂ ಪಾರ ದರ್ಶಕ ಆಡಳಿತ ನೀಡುವುದಾಗಿ ಹೇಳಿದ್ದ ಮುಖ್ಯ ಮಂತ್ರಿಗೆ ನಾಚಿಕೆ ಯಾಗಬೇಕು. ಹೈಟೆಕ್ ಆಡಳಿತಕ್ಕೆ ನೂರಾರು ಕೋಟಿ ಹಣ ನೀಡುವ ಕೃಷ್ಣಾ ಸರ್ಕಾರ ಬಡವರ ಪಡಿತರಕ್ಕೆ 900 ಕೋಟಿ ಸಬ್ಸಿಡಿ ನೀಡಲು ಸಾಧ್ಯವಿಲ್ಲವೇ? ಎಂಬ ಪ್ರಶ್ನೆ ಯೆತ್ತಿದರು. ಶ್ರೀಮಂತ ಕೈಗಾರಿಕೋದ್ಯಮಿಗಳು ಬ್ಯಾಂಕ್‌ಗಳಿಗೆ 9 ಲಕ್ಷ ಕೋಟಿ ಸಾಲ ಕೊಡಬೇಕಿದೆ ಕೇಂದ್ರ ಸರ್ಕಾರವು ವಸೂಲಿ ಮಾಡದೆ ಬಡವರ ಪಡಿತರ, ಸೀಮೆ ಎಣ್ಣೆ ದರ

ಪುಟ 12 ಕ್ಕೆ


ಕೆಂಬಾವುಟ ಮತ್ತು ಹಸಿರು ಬಾವುಟ ಎತ್ತಿ ಹಿಡಿದು ಮುನ್ನುಗ್ಗುತ್ತಿರುವ ದೇವೇಗೌಡರು

ವಿದೇಶಿ ಗ್ರಾಹಕ ವಸ್ತುಗಳ ದಾಳಿಗೆ ರಂಗ ಸಜ್ಜು

ಮೂರ್ಖರ ದಿನದಂದು ಬೆಳಿಗ್ಗೆ ಎದ್ದು ಪತ್ರಿಕೆಗಳ ಮೇಲೆ ಕಣ್ಣಾಡಿಸಿದ ಭಾರತೀಯ ಗ್ರಾಹಕರ ರೋಮಾಂಚನಕ್ಕೆ ಎಣೆಯೇ ಇಲ್ಲ. 'ಫಾರಿನ್ ಮಸ್ತು' ಗಳೆಂದರೆ ಹಿರಿ ಹಿರಿ ಹಿಗ್ಗುವ ಭಾರತೀಯ ಇನ್ನು ಮುಂದೆ ವಿದೇಶಿ ಗ್ರಾಹಕ ವಸ್ತುಗಳಿಗಾಗಿ ವಿಮಾನ ಹತ್ತಬೇಕಿಲ್ಲ. ಸ್ಥಳೀಯ ಬರ್ಮಾ ಹಾಂಕಾಂಗ್ ಬಜಾರ್‌ಗಳ ಸಂದಿಗೊಂದುಗಳಲ್ಲಿ ಅಲೆಯಬೇಕಿಲ್ಲ. ಎಲ್ಲವೂ ಇಲ್ಲಿಯೇ ಭಾರತೀಯನ ಕಾಲ ಬುಡದಲ್ಲಿ ಬಂದು ರಾಶಿ ಬೀಳಲಿವೆ. ಕೇಂದ್ರ ಸರಕಾರ ಪ್ರಕಟಿಸಿರುವ ಹೊಸ ರಫ್ತು ಆಮದು ನೀತಿಯ ಪರಿಣಾಮವಿದು.



ಚೀನಾದ ಬೆಚ್ಚನೆಯ ರಗ್ಗು ಹೊದ್ದು ಇಟಲಿಯ ಕಪ್ ಸಾಸರ್‌ಗಳಲ್ಲಿ ಬೆಳ್ಳಂ ಬೆಳಿಗ್ಗೆ ಬ್ರೆಝಿಲ್‌ನಿಂದ ಬಂದ ಕಾಫಿ ಹೀರುವ ಖುಷಿ ಯಾವ ಭಾರತೀ ಯನಿಗೆ ಬೇಡ? ಹಾಗೆಯೇ ಕ್ಯೂಬಾದ ಸಿಗಾರ್‌ಗೆ ತುಟಿ ಹಚ್ಚಿ ಜಪಾನಿನ ಸೋವಿ ಸೋನಿ'ಯ ಹಾಡುಗಳನ್ನು ಕೇಳುತ್ತಾ, ನಿಧಾನಕ್ಕೆ ಕಕ್ಕಸಿಗೆ ಹೋದರೆ ಅಲ್ಲಿಯೂ ಇಟಾಲಿಯನ್ ಟೈಲ್ಸ್‌ಗಳ ಮೆರುಗು..!

ಮಧ್ಯಾಹ್ನದ ಊಟಕ್ಕೆ ಆಸ್ಟ್ರೇಲಿಯಾದ ಕುರಿ ಮಾಂಸ ರಾತ್ರಿ ಮಲಗುವ ಮುನ್ನ ಕುಡಿಯಲು ಅಮೆರಿಕದಿಂದ ಬಂದ ಹಾಲು, ನಿಮ್ಮ ಸೋಫಾ ಸೆಟ್‌ಗೆ ಫ್ರಾನ್ಸಿನ ಮೆತ್ತನೆಯ ಕವರು, ಮಾಂಸದಡಿಗೆಗೆ ಹಾಕಲು ಜಮೈಕಾದ ಕಾಳುಮೆಣಸು, ಬಿಡುವಾದಾಗ ಬಾಯಾಡಿಸಲು ಲಂಡನ್ನಿನ ಆಲೂಗಡ್ಡೆ ಚಿಪ್ಸ್ ಕವಿತೆ ಬರೆಯಲು ಫಿನ್ಲೆಂಡಿನ ತೆಳುವಾದ ಕಾಗದದ ಹಾಳೆ, ಮಕ್ಕಳಿಗೆ ಆಡಲು ಚೀನಾದ ನಯವಾದ ಆಟಿಕೆಗಳು, ಊಟಕ್ಕೆ ನೆಂಜಿಕೊಳ್ಳಲು ನ್ಯೂಜಿಲೆಂಡಿನ ಲಿಂಬೆ ಉಪ್ಪಿನಕಾಯಿ..!

-ಆಶ್ಚರ್ಯ ಪಡಬೇಕಿಲ್ಲ, ಕೇಂದ್ರದ ಹೊಸ ಮುಕ್ತ ಆಮದು ನೀತಿಯಿಂದ ಇವೆಲ್ಲವೂ ಇದೀಗ ಸಾಧ್ಯವಿದೆ. ಕೇಂದ್ರ ಸರಕಾರವು ಆಮದು ಪ್ರಮಾಣ ನಿರ್ಬಂಧದಿಂಡ ಮುಕ್ತಗೊಳಿಸಿದ 714 ವಸ್ತುಗಳಲ್ಲಿ 58 ವಸ್ತುಗಳು ಸಣ್ಣ ಉದ್ದಿಮೆಗೆ ಸಂಬಂಧಿಸಿದವು. 229 ಉತ್ಪನ್ನಗಳು ಕೃಷಿ ವಲಯಕ್ಕೆ ಸಂಬಂಧಿಸಿದವು. ಜವಳಿ ವಲಯದ 37 ವಸ್ತುಗಳಿದ್ದರೆ 438 ವಸ್ತುಗಳು ಮುಖ್ಯವಾಗಿ ಗ್ರಾಹಕ ವಲಯಕ್ಕೆ ಸಂಬಂಧಿಸಿದವು. ಕಳೆದ ವರ್ಷಗಳ ಲೆಕ್ಕವನ್ನೂ ಹಿಡಿದರೆ, ಈವರೆಗೆ ಒಟ್ಟು 2100ಕ್ಕೂ ಹೆಚ್ಚು ವಸ್ತುಗಳು ಮುಕ್ತ ಆಮದಿಗೆ ಒಳಗಾಗಿವೆ. ಇನ್ನು ಉಳಿದಿರುವುದು 1429 ವಸ್ತುಗಳು ಮಾತ್ರ!

ಗ್ರಾಹಕ ವಸ್ತುಗಳ ಕ್ಷೇತ್ರದಲ್ಲಿ ಇದೀಗ ದೇಶೀಯ ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ನಡುವೆ ಖಡಾಖಡಿ ಸ್ಪರ್ಧೆಗೆ ಕಣ ಸಜ್ಜಾಗಿದೆ. ಈ ಸ್ಪರ್ಧೆಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಮೊದಲು ಸುತ್ತಿನ ಜಯ ಗಳಿಸುವುದೂ ಅಷ್ಟೇ ಖಚಿತವಾಗಿದೆ. ಭಾರತದಲ್ಲಿ ಈಗಾಗಲೇ ಉತ್ಪಾದನಾ ಘಟಕಗಳನ್ನು ಹೊಂದಿರುವ ಬಹುರಾಷ್ಟ್ರೀಯ ಕಂಪೆನಿಗಳು ಇಲ್ಲಿಯೇ ಉತ್ಪಾದಿಸಿದ ಉತ್ಪನ್ನಗಳ ಜತೆಗೇ ತಮ್ಮ ವಿದೇಶೀ ಘಟಕಗಳಿಂದಲೂ ಅಧಿಕ ಪ್ರಮಾಣದಲ್ಲಿ ವಸ್ತುಗಳನ್ನು ತರಿಸಿಕೊಳ್ಳಲಿವೆ.

- ಹನೀಫ್

ಕೃಪೆ: ಪ್ರಜಾವಾಣಿ

ಶಿಕ್ಷಣ ಹಾಗೂ ಉದ್ಯೋಗ ವಂಚಿತೆ

ಪುಟ 6 ರಿಂದ

ಮೊದಲಿಗೆ' ಎನ್ನುವ ಮಾತು ಬಂದಿರುವುದು ಇದರಿಂದಲೇ. ಸಂಘಟಿತ ವಲಯದಲ್ಲೂ ಮಹಿಳೆಗೆ ಒಟ್ಟಾರೆ ಶಿಕ್ಷಣದಲ್ಲಿ, ಆಧುನಿಕ ತರಬೇತಿಯಲ್ಲಿ, ಹೊಸ ಕಾರ್ಯಕೌಶಲತೆಯಲ್ಲಿ ಅವಕಾಶ ಕಡಿಮೆ ಇರುವುದರಿಂದ ಆಕೆಗೆ ಸಿಗುವುದು ಅಲ್ಲಿಯೂ ಕಡಿಮೆ ಶಿಕ್ಷಣ, ಕಾರ್ಯಕುಶಲತೆ ಅಗತ್ಯವಿರುವ ಕೆಲಸಗಳು, ಟೈಪಿಸ್ಟ್, ಕ್ಲರ್ಕ್, ಸ್ವಚ್ಛತೆ ವಿಭಾಗಗಳಲ್ಲಿ ಇತ್ಯಾದಿ. ಸಂಘಟಿತ ಕೈಗಾರಿಕೆಗಳಲ್ಲಿ ಯಾಂತ್ರೀಕರಣವಾದಾಗ, ಸಬ್-ಕಂಟ್ರಾಕ್ಟ್ ಜಾರಿಗೆ ಬಂದಾಗ ಕಡಿತವಾಗುವ ಉದ್ಯೋಗಗಳಲ್ಲಿ ಇವು. ಮಹಿಳೆಗೆ ಸಂಬಂದಿಸಿದ ವಲಯದಲ್ಲಿ ಉದ್ಯೋಗಾವಕಾಶ ಸಿಕ್ಕಿರುವುದು ಸಾರ್ವಜನಿಕ ಕ್ಷೇತ್ರದಲ್ಲಿ ಮಾತ್ರ (ಶೇ. 2) ಖಾಸಗೀಕರಣ, ಸಾರ್ವಜನಿಕ ಕ್ಷೇತ್ರದ ಮುಚ್ಚುವಿಕೆಯಿಂದಾಗಿ ಇಂತಹ ಉದ್ಯೋಗಾವಕಾಶಗಳು ಮುಚ್ಚುತ್ತಿವೆ. ಬಟ್ಟೆ ಗಿರಣಿ, ಹೊಗೆಸೊಪ್ಪು, ಜ್ಯೂಟ್, ಹ್ಯಾಂಡ್ಲೂಮ್ ಮುಂತಾದ ಪಾರಂಪರಿಕ ಕೈಗಾರಿಕಾ ಕ್ಷೇತ್ರದಲ್ಲಿ ಮಹಿಳೆಯರದ್ದೇ ಹೆಚ್ಚು ಉದ್ಯೋಗ. ಇವು ಬಿಕ್ಕಟ್ಟಿಗೆ ಸಿಕ್ಕು ಮುಚ್ಚುತ್ತಿವೆ. ಖಾಸಗಿ ಕಂಪನಿಗಳಲ್ಲಿ ಮಹಿಳೆಯರಿಗೆ ಉದ್ಯೋಗ ಸಿಗುತ್ತಿರುವುದು ಹೆಚ್ಚಾಗಿ ಪರ್ಮನೆಂಟ್ ಉದ್ಯೋಗವಲ್ಲ. ಪಾರ್ಟ್‌ಟೈಂ ಅಥವಾ ಗುತ್ತಿಗೆ.

ಕೃಷಿ ಕೂಲಿಕಾರರಾಗಿ ದುಡಿಮೆ, ಮಹಿಳೆಗೆ ಸಿಗುತ್ತಿರುವ ಏಕಮಾತ್ರ ಅವಕಾಶ. ಕೃಷಿಕೂಲಿಕಾರರಲ್ಲಿ ಈಗ ಶೇ. 40ರಷ್ಟು ಮಹಿಳೆಯರು. ಇದನ್ನು ಕೃಷಿ ಕೂಲಿಕಾರರಾಗಿ ಉದ್ಯೋಗಾವಕಾಶ ದೊರೆತಿದೆ ಎಂದು ಪರಿಗಣಿಸಲು ಸಾಧ್ಯವೇ? ಬೇರೆ ಗತಿಯಿಲ್ಲದೆ ಈ ದುಡಿಮೆಗೆ ಬರಬೇಕಾಗಿದೆ ಎಂದು ಹೇಳುವುದೇ ಹೆಚ್ಚು ಸರಿಯಾದುದು. ಹಲವು ರಾಜ್ಯಗಳಲ್ಲಿ, ಹಿಂದುಳಿದ ಜಿಲ್ಲೆಗಳಲ್ಲಿ ಕೃಷಿ ಕೂಲಿಕಾರರಲ್ಲಿ ಮಹಿಳೆಯರೇ ಬಹುಸಂಖ್ಯಾತರು. ಕಡಿಮೆ ಕೂಲಿಯಿಂದ ಭೂಮಾಲಿಕರು ಮಹಿಳೆಯರನ್ನೇ ಕೃಷಿಕೂಲಿಕಾರರನ್ನಾಗಿ ತೆಗೆದುಕೊಳ್ಳುತ್ತಿದ್ದಾರೆ.



ಹಿಂದುಳಿದ ಪ್ರದೇಶಗಳಲ್ಲಿ ಬಡಕುಟುಂಬಗಳು ಹೆಚ್ಚುಹೆಚ್ಚಾಗಿ ಮಹಿಳೆಯ ದುಡಿಮೆ ಆದರಿಸಿವೆ. ಇವುಗಳಲ್ಲಿ ಹಲವು ಮಹಿಳೆಯೇ ಮುಖ್ಯಸ್ಥೆಯಾಗಿರುವ ಕುಟುಂಬಗಳು ಇವು ಹೆಚ್ಚಿನಂಶ ಬಡತನದ ರೇಖೆಯ ಕೆಳಗಿರುವ ಕುಟುಂಬಗಳೇ ಹೀಗಾಗಿ ಬಡತನದ ಕೆಳಗಿರುವ ಕುಟುಂಬಗಳಲ್ಲಿ ಮೂರರಲ್ಲಿ ಒಂದು ಮಹಿಳೆಯೇ ಮುಖ್ಯಸ್ಥೆಯಾಗಿರುವ ಕುಟುಂಬಗಳು. ಆದ್ದರಿಂದ ಗ್ರಾಮೀಣ ಪ್ರದೇಶದ ಕನಿಷ್ಟ ಕೂಲಿ ಅದರಲ್ಲಿಯೂ ಮಹಿಳೆಯರಿಗೆ ಸಮಾನ ಕೂಲಿಗಾಗಿ ಕಾನೂನು ಮತ್ತು ಹೋರಾಟದಿಂದ ಮಾತ್ರ ಮಹಿಳೆಯರ ಸಮಾನತೆ ಸಾಧ್ಯ. ಆದ್ದರಿಂದ ಕೃಷಿಕೂಲಿಕಾರರ ಸಂಘಟನೆ ಮತ್ತು ಸಮಾನ ಕನಿಷ್ಟ ಕೂಲಿಯ ಮೂಲಕ ಮಾತ್ರ ದೇಶದ ಬದುಕು ಉತ್ತಮಪಡಿಸುವುದು ಮೇ ದಿನದ ಸಂದರ್ಭದಲ್ಲಿ ಕಾರ್ಮಿಕ ವರ್ಗ ತಮ್ಮ ಪ್ರಮುಖ ಗುರಿಯನ್ನಾಗಿ ಗುರುತಿಸಿಕೊಳ್ಳಬೇಕು. ○

ಶೇರು ಮಾರ್ಕೆಟ್ ಕುಸಿತ.....

ಪುಟ 9 ರಿಂದ

ಹಲವು ನೂರು ಕೋಟಿ ರೂ.ಗಳನ್ನು ಕ್ಷಣಾಂತರದಲ್ಲಿ ಸುರಿಯಬಹುದು ಅಥವಾ ಹಿಂದಕ್ಕೆ ಪಡೆಯಬಹುದು. ಐಟಿ ಕಂಪನಿಗಳು, 'ಹೊಸ ಆರ್ಥಿಕ'ದ ಕಂಪನಿಗಳಲ್ಲಿ ಹೆಚ್ಚಿನ ಲಾಭದ 'ಗುಲ್ಲು' ಹಬ್ಬಿಸಿ ದೊಡ್ಡ ಪ್ರಮಾಣದಲ್ಲಿ ಸಣ್ಣ ಶೇರುದಾರರು ಅದರಲ್ಲಿ ಹಣ ಹೂಡುವಂತೆ ಮಾಡಿ, ಅವರ ಮಾರುಕಟ್ಟೆ ಬೆಲೆ ಏರಿಸಿ ಅದು ಹೊರಟುಬಿಟ್ಟಿದೆ. ಈ ಹಣಕಾಸು ಬಂಡವಾಳ(ಹಣಕಾಸು ಸಂಸ್ಥೆಗಳ ರೂಪದಲ್ಲಿ ವೆಂಚರ್ ಕ್ಯಾಪಿಟಲ್, ಮ್ಯೂಚುವಲ್ ಫಂಡ್ಸ್ ರೂಪದಲ್ಲಿ) ಬೆಲೆಯನ್ನು ಸಾಧ್ಯವಾದಷ್ಟು ಶಿಖರಕ್ಕೆ ತೆಗೆದುಕೊಂಡು ಹೋಗಿ, ಶೇರುಗಳನ್ನು ಮಾರಿ ಅಲ್ಲಿಂದ ಕಾಲು ಕಿತ್ತಾಗ ಶೇರುಗಳ ಬೆಲೆ ಕುಸಿಯುತ್ತದೆ. ಉಳಿದೆಲ್ಲಾ ಅಂಶಗಳ ಜತೆ ಈಗ ಆಗಿರುವುದು ಅದೇ. 'ಐಟಿ' 'ಇಂಟರ್‌ನೆಟ್ ಸೂಪರ್‌ಮಾರ್ಕೆಟ್' ನ ಗುಲ್ಲನ್ನು ಅವು ಚೆನ್ನಾಗಿ ಬಳಸಿ ಸೂಪರ್ ಲಾಭ ಮಾಡಿ, ಹೊರಟು ಬಿಟ್ಟಿವೆ. ಇವೆಲ್ಲಾ ಗೊತ್ತಿರದ ಸಾಮಾನ್ಯ ಶೇರುದಾರ ಸಾಲ ಸೋಲ ಮಾಡಿ ಖರೀದಿಸಿದ 'ಭಾರಿ ಬೆಲೆ'ಯ ಶೇರುಗಳು ನೆಲ ಕಚ್ಚಿವೆ.

ಇಂಡಿಯಾದಲ್ಲೇ ನೋಡಿದರೂ ವಿದೇಶಿ ಹಣಕಾಸು ಸಂಸ್ಥೆಗಳಿಗೆ ಶೇರು ಮಾರುಕಟ್ಟೆ ತೇಜಿ (ಐಟಿ ಶೇರುಗಳನ್ನು ಸೇರಿಸಿ)ಯಲ್ಲಿ ದೊಡ್ಡ ಪಾತ್ರವಿದೆ. ಅವುಗಳಿಗೆ ಮಾರುಕಟ್ಟೆ ಶೇರುಗಳಲ್ಲಿ ಶೇಕಡಾ 5 ಭಾಗವಿದ್ದರೂ, ಮಾರಾಟ ಹಾಗೂ ಕೊಳ್ಳುವುದರಲ್ಲಿ ಅವುಗಳ ಪಾತ್ರ ಹಿರಿದು. ಶೇರು ಮಾರುಕಟ್ಟೆ ವ್ಯವಹಾರದಲ್ಲಿ ಅರ್ಧದಷ್ಟು ಈ ವಿದೇಶಿ ಹಣಕಾಸು ಸಂಸ್ಥೆಗಳದ್ದೇ ಅಲ್ಲದೆ 'ಬಿಸಿ'ಯಾದ 100-150 ಶೇರುಗಳಲ್ಲೇ ಅವು ವ್ಯವಹಾರ ಮಾಡುತ್ತವೆ.

ಮುಂದೇನು?

ಶೇರು ಮಾರುಕಟ್ಟೆಯಲ್ಲಿ ಕುಸಿತ ಸದ್ಯಕ್ಕೆ ಮುಂದುವರೆಯುತ್ತಿದೆ. ನ್ಯೂಯಾರ್ಕ್‌ನಲ್ಲಿ ಶೇರು ಮಾರುಕಟ್ಟೆ ಚೇತರಿಸಿಕೊಂಡಿದೆ. ಇತರ ಕಡೆಯೂ (ನಮ್ಮಲ್ಲಿ ಸೇರಿ) ಚೇತರಿಸಿಕೊಳ್ಳಬಹುದು. ಆದರೆ ಈ ಏರು-ಪೇರು ಮುಂದುವರೆಯುತ್ತದೆ. ಹಿಂದಿನ ತೇಜಿ ಬರುವ ಸಾಧ್ಯತೆ ಕಡಿಮೆ ಎಂದು ಹೇಳಲಾಗುತ್ತದೆ.


ಆದರೆ ಈ ಕುಸಿತ ಮುಂದುವರೆದು 'ಮಹಾ ಕುಸಿತ' ಆಗುವ ಸಾಧ್ಯತೆಯೂ ಸಾಕಷ್ಟಿದೆ. ಈಗಾಗಲೇ ಶೇರುಗಳ ಬೆಲೆಗಳು ಅರ್ಥಹೀನ ಹೆಚ್ಚಿನ ಮಟ್ಟ ತಲುಪಿದ್ದು ಅವು ಇನ್ನಷ್ಟು ಕುಸಿಯುತ್ತದೆ ಎಂದು ಹಲವರು ಭವಿಷ್ಯ ಹೇಳುತ್ತಿದ್ದಾರೆ. ಅಂತಹ ಮಹಾಕುಸಿತ ಇಡೀ ವಿಶ್ವದ ಆರ್ಥಿಕಕ್ಕೆ ಕಂಟಕ ಪ್ರಾಯ. ಕನಿಷ್ಟ ನಮ್ಮ ದೇಶದಲ್ಲಂತೂ ವಿದೇಶಿ ಹಣಕಾಸು ಸಂಸ್ಥೆಗಳ ಈ ಶೇರು ಮಾರುಕಟ್ಟೆ ಆಟಗಳಿಗೆ ಕಡಿವಾಣ ಹಾಕಬೇಕು. 'ಶೇರುಮಾರುಕಟ್ಟೆ'ಯ ಬದಲು ...

ಕರ್ನಾಟಕದಲ್ಲಿ ಜೊತೆ ಸೇರಿದ ಸಿಪಿಐ(ಎಂ) ಜನತಾದಳ (ಎಸ್)

ಪುಟ 11 ರಿಂದ

ಏರಿಸಿದೆ ಎಂದರು. ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳನ್ನು ಮಟ್ಟ ಹಾಕುವವರೆಗೆ ನಮ್ಮ ಹೋರಾಟ ನಿಲ್ಲದು ಎಂದರು.

ಜಾತ್ಯಾತೀತ ಜನತಾದಳದ ರಾಜ್ಯಾದ್ಯಕ್ಷ ಸಿದ್ದರಾಮಯ್ಯ ಮಾತನಾಡಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರಕ್ಕೆ ದೆಂಬಲಿಸಿರುವ ಮಿತ್ರ ಪಕ್ಷಗಳು ಕುರ್ಚಿಗಳಿಗಾಗಿ ಅಂಟಿಕೊಂಡಿವೆ. ನಿಜವಾಗಲೂ ಬಡವರ ಪರವಿದ್ದರೆ ರಾಜಿನಾಮೆ ನೀಡುತ್ತಿದ್ದರೆಂದರು. ರಾಜ್ಯದಲ್ಲಿ ಸಂಸದರಿಗೆ ಕಾರು, ಸಿಬ್ಬಂದಿ ನೀಡುವ ಕೃಷ್ಣರಿಗೆ ಬಡವರ ಪಡಿತರಕ್ಕೆ ಸಬ್ಸಿಡಿ ಕೊಡಲಿಲ್ಲವೇಕೆ ಎಂದು ಪ್ರಶ್ನಿಸಿದರು. ಬಿಜೆಪಿ ಕಾಂಗ್ರೆಸ್ ಎರಡೂ ಪಕ್ಷಗಳೂ ಒಂದೇ ನಾಣ್ಯದ ಎರಡು ಮುಖಗಳಾಗಿದ್ದು ಇವುಗಳ ವಿರುದ್ಧ ಜನರ ಚಳುವಳಿ ಅಗತ್ಯವೆಂದರು. ಈ ಎರಡೂ ಪಕ್ಷಗಳೂ ಎಂದೂ ಬಡವರ ಪರವಾಗಿ ಯಾವ ಜನಪರ ನೀತಿಯನ್ನು ಕೈಗೊಂಡಿಲ್ಲವೆಂದು ಛೇಡಿಸಿದರು. ತಮ್ಮತಮ್ಮ ಮನೆಗಳಿಗೆ ಸರ್ಕಾರದ 50 ಲಕ್ಷ ಹಣವನ್ನು ಖರ್ಚು ಮಾಡುವ ಎಸ್.ಎಂ.ಕೃಷ್ಣರವರ ಸರ್ಕಾರ ಬಡವರಿಗೆ ಅನ್ನ ಕೊಡಲು ಹಣವಿಲ್ಲವೆಂದರೆ, ಮೆರವಣಿಗೆ ನಡೆಸಲು ಕಾಂಗ್ರೆಸ್ ನವರಿಗೆ ನೈತಿಕ ಹಕ್ಕಿಲ್ಲವೆಂದರು. ಸಭೆಯಲ್ಲಿ ಮಾಜಿ ಶಾಸಕ ಎನ್. ರಾಜಣ್ಣ, ಮ್ಹಾಜಿ ಸಚಿವ ಆರ್. ಕೃಷ್ಣಪ್ಪ, ಮಾಜಿ ಸಚಿವ ಎಚ್. ಸಿ. ಮಹದೇವಪ್ಪ ಹಾಗೂ ಸಿ.ಪಿ.ಐ (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಗುರುಶಾಂತ್ ಮುಂತಾದ ಮುಖಂಡರು ಉಪಸ್ಥಿತರಿದ್ದರು.



ಮಾಜಿ ಪ್ರಧಾನಿ ದೇವೇಗೌಡ, ಸಿಪಿಐ(ಎಂ) ಮುಖಂಡರಾದ ಸೂರ್ಯನಾರಾಯಣ್‌ರಾವ್, ಹಾಗೂ ಸಿದ್ದರಾಮಯ್ಯ ನವರ ನೇತೃತ್ವದಲ್ಲಿ ನಗರದ ಜಕ್ಕರಾಯನ ಕೆರೆಯಲ್ಲಿ ದೀರ್ಘ ಸಾರ್ವಜನಿಕ ಸಭೆ ಪಾರ್ಕ್ ಮೂಲಕ ಶಿವಾನಂದ ವೃತ್ತದವರೆಗೆ ಕಾಲ್ನಡಿಗೆಯಲ್ಲಿ ಮೆರವಣಿಗೆ ನಡೆಸಿದರು. ಎರಡು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಎರಡೂ ಪಕ್ಷಗಳ ಕಾರ್ಯಕರ್ತರು ಕೇಂದ್ರ, ರಾಜ್ಯ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಮುಗಿಲು ಮುಟ್ಟುವಂತೆ ಘೋಷಣೆ ಕೂಗುತ್ತಿದ್ದರು. ಕೈಗಳಲ್ಲಿ ಕೆಂಬಾವುಟ ಹಾಗೂ ಬ್ಯಾನರ್‌ಗಳು ವಿಜೃಂಭಿಸುತ್ತಿದ್ದವು. ಕೆಲವರ ಕೈಗಳಲ್ಲಿ ಕಾಲಿ ಸೀಮೆ ಎಣ್ಣೆಯ ಡಬ್ಬಗಳು (ಕ್ಯಾನ್) ಕಾಲಿ ಚೀಲಗಳು ಕೂಡ ಸಾರ್ವಜನಿಕರಿಗೆ ಬೆಲೆ ಏರಿಕೆಯ ಬಿಸಿಯನ್ನು ತಟ್ಟಿಸುತ್ತಿದ್ದವು.

ರಾಜ್ಯಪಾಲರಿಗೆ ಮನವಿ

ಜಾತ್ಯಾತೀತ ಜನತಾದಳದ ಮುಖಂಡರಾದ ಸಿದ್ದರಾಮಯ್ಯ, ಸಿಪಿಐ(ಎಂ) ಮುಖಂಡರಾದ ಸೂರ್ಯನಾರಾಯಣ ರಾವ್ ಹಾಗೂ ಜನತಾದಳ(ಎಸ್) ಶಾಸಕರಾದ ಚೆಲುವರಾಯ ಸ್ವಾಮಿ, ಚೆನ್ನಿಗಪ್ಪ, ಮುಖಂಡರುಗಳಾದ ಕೆ.ಎಚ್. ಶ್ರೀನಿವಾಸ್, ಬಿ.ಟಿ. ಲಲಿತಾ ನಾಯಕ್, ಕೃಷ್ಣಪ್ಪ, ಜನತಾದಳ(ಎಸ್) ಪ್ರಧಾನ ಕಾರ್ಯದರ್ಶಿ. ಸಿ. ನಾರಾಯಣ ಸ್ವಾಮಿ, ಮಾಜಿ ಮೇಯರ್ ಹುಚ್ಚಪ್ಪ, ಸೀತಾಲಕ್ಷ್ಮಿ ಮೊದಲಾದವರ ನಿಯೋಗ ಶಿವಾನಂದ ವೃತ್ತದಿಂದ ರಾಜಭವನಕ್ಕೆ ತೆರಳಿ ಎರಡು ಸರ್ಕಾರಗಳಿಗೆ ತಲುಪಿಸುವಂತೆ ರಾಜ್ಯಪಾಲರಾದ ವಿ.ಎಸ್. ರಮಾದೇವಿ ಅವರಿಗೆ ಮನವಿ ಪತ್ರಗಳನ್ನು ಸಲ್ಲಿಸಿತು.

ಜಗತ್ತಿನ ಪ್ರಥಮ ಶೋಷಿತೆ ಮಹಿಳೆ - ಇಂದು

ಪುಟ 7 ರಿಂದ

ಜೊತೆಯಾಗಿಯೇ ಮಹಿಳೆ ಕಾಣಿಸಿಕೊಂಡರು, "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎನ್ನುವ ಮನುವಿನ ಪಾಳೆಯಗಾರಿ ಮೌಲ್ಯಗಳು ಎಲ್ಲೂ ಸಡಿಲಗೊಂಡಿಲ್ಲ. ಮಹಿಳೆ ಪುರುಷಾಧೀನ ಬದುಕನ್ನೇ ನಡೆಸಬೇಕೆಂಬ ಈ ಸಮಾಜದ ಸನಾತನ ವಿಚಾರಗಳು ಸತ್ವ ಕಳೆದು ಕೊಂಡಿಲ್ಲ, ಮಹಿಳೆ, ನಡೆಯುವಾಗಲು ನುಡಿಯುವಾಗಲು ಹಾಡುವಾಗಲು-ಕುಣಿಯುವಾಗಲು, ದುಡಿಯುವಾಗಲು-ಮಡಿಯುವಾಗಲು ಪುರುಷರ ಛಾಯೆ ಸದಾ ಕಾಡುತ್ತಲೇ ಇರಬೇಕು. ಹೀಗಿದ್ದರೆ ಮಾತ್ರ ಸರಿ ಎನ್ನುವ ಗಾಢ ನಂಬಿಕೆಗಳು ಮಹಿಳೆಯನ್ನು ಸ್ವತಂತ್ರ ವ್ಯಕ್ತಿಯಾಗಿ ಮೂಡಿಬರಲು ಅವಕಾಶವನ್ನೇ ನೀಡಿಲ್ಲ. ಈ ವರೆಗೆ ಮಹಿಳೆಯನ್ನು "ವ್ಯಕ್ತಿಯಾಗಿ" ನೋಡಲು ಸಾಧ್ಯವೂ ಆಗಿಲ್ಲ. ಇದು ಇಂದಿನ ಕಟು ವಾಸ್ತವ. ಹೀಗಾಗಿಯೆ ಮಹಿಳೆ ಎಷ್ಟೇ ದೊಡ್ಡ ಸಾಧನೆಗಳನ್ನು ಗೈದರೂ ಪುರುಷನಿಂದ ಹೊರತುಪಡಿಸಿ ನೋಡಲು ಸಾಧ್ಯವಾಗುವುದಿಲ್ಲ ಕಛೇರಿಯಲ್ಲಿ ಕಸಗುಡಿಸುವ ಸಾಮಾನ್ಯ ಕೆಲಸಗಾರ ಮನೆಗೆ ಬಂದ ಕೂಡಲೆ ಯಜಮಾನನಾಗುತ್ತಾನೆ. ಅದೇ ಕಛೇರಿಗಯಲ್ಲಿ ಅಧಿಕಾರಿಯಾಗಿ ದುಡಿಯುವ ಮಹಿಳೆಯರು ಮನೆಗೆ ಬಂದ ಕೂಡಲೆ ಪುರುಷಾಧೀನಳಾಗುತ್ತಾಳೆ.

ಮಹಿಳೆಯರ ಮೇಲೆ ಯಾವುದೇ ಹಂತದಲ್ಲಾದರು ಪುರುಷನ ಹಿಡಿತ ಇರಲೇಬೇಕೆನ್ನುವ ಪಾಳೆಯಗಾರಿ ಸಮಾಜದ ಹಠ, ಹಾಗೂ ಮಹಿಳೆಯ ದುಡಿಮೆಯನ್ನು ಮಾತ್ರ ಪ್ರೋತ್ಸಾಹಿಸುವ ಬಂಡವಾಳಶಾಹಿಯ ಪ್ರವೃತ್ತಿಯ ಇವುಗಳ ನಡುವಿನ ವೈರುಧ್ಯವೇ ಇಂದು ಮಹಿಳೆಯನ್ನು ತ್ರಿಶಂಕು ಸ್ಥಿತಿಗೆ ತಂದು ನಿಲ್ಲಿಸಿದೆ. ಮನೆಯ ಒಳಗೆ ಬಂಧಿಸಿಟ್ಟ ಹಾಗೆಯೂ ಅಲ್ಲ. ಮನೆಯಿಂದ ಹೊರಗೆ ಸ್ವತಂತ್ರಳಾಗಿ ಸಾಮಾಜಿಕ ಮುಖ್ಯವಾಹಿನಿಯಲ್ಲಿ ಭಾಗವಹಿಸಿ ಮುಕ್ತವಾಗಿ ಬದುಕುವಂತೆಯೂ ಇಲ್ಲದ ಇಬ್ಬಂದಿ ಸ್ಥಿತಿ

ಭೋಗವಸ್ತು ಹೆಣ್ಣಿನ ಮೇಲೆ ಗಂಡಿನ ಹದ್ದುಬಸ್ತು

ಕೈಗಾರಿಕೆಗಳು ಬೆಳೆದಂತೆಲ್ಲಾ ಹೊಸ ಹೊಸ ಸಾಮಗ್ರಿಗಳು ಉತ್ಪಾದನೆಗೊಳ್ಳುತ್ತಾ ಹೋದಂತೆಲ್ಲಾ ಮಹಿಳೆಯೂ ಸಹ ಭೋಗವಸ್ತುಗಳ ಸಾಲಿನಲ್ಲಿ ಒಂದು ಸಾಮಗ್ರಿಯಾಗುತ್ತಾ ಬಂದಳು. ಮಹಿಳೆ ಕೇವಲ ಪುರುಷನಿಗೆ ಸುಖನೀಡುವ ಭೋಗವಸ್ತು ಅಥವಾ ಮಕ್ಕಳನ್ನು ಹೆರುವ ಯಂತ್ರವೆಂದು ಪರಿಗಣಿಸುತ್ತಾ ಹೋದಂತೆಲ್ಲಾ ಆಕೆಯ ಮೇಲಿನ ಪರಾಕ್ರಮಣಗಳು ಹೆಚ್ಚಾಗುತ್ತಾ ಬಂದಿವೆ.

ಮಹಿಳೆಯ ಮೇಲೆ ಹೆಚ್ಚಾಗುತ್ತಿರುವ ಅಸಡ್ಡೆ ಮನೋಭಾವದಿಂದಾಗಿ ಜೊತೆಗೆ ತೀವ್ರಗೊಳ್ಳುತ್ತಿರುವ ವಿನಾಶಕಾರಿ ಆರ್ಥಿಕ ನೀತಿಗಳಿಂದಾಗಿ ಮಹಿಳೆಯರ ಮೇಲಿನ ಹಿಂಸಾಚಾರಗಳು ಎಲ್ಲೆ ಮೀರುತ್ತಿವೆ.

ಹೆಣ್ಣಿನ ಮೇಲಿನ ಹಿಂಸಾಚಾರ ಭ್ರೂಣದಿಂದಲೇ ಪ್ರಾರಂಭಗೊಂಡು ಹೆಣ್ಣು ಶಿಶುಹತ್ಯೆ ಹೆಣ್ಣು ಮಗುವಿನ ಮೇಲೆ ಅತ್ಯಾಚಾರ, ವಯಸ್ಕ ಮಹಿಳೆಯರ ಮೇಲೆ ಅತ್ಯಾಚಾರ, ವಧುವನ್ನು ಸುಡುವುದು ವರದಕ್ಷಿಣೆಗಾಗಿ ಕಿರುಕುಳ ನೀಡುವುದು, ವ್ಯಭಿಚಾರಕ್ಕೆ ದೂಡುವುದು, ಅಪಹರಣ, ಬಲಾತ್ಕಾರ, ಚುಡಾಯಿಸುವುದು, ಬಯ್ಯುಳ, ಗದರಿಸುವುದು, ಲಿಂಗಭೇದ ಸಾರಾಯಿ ಕುಡಿದು ಹಿಂಸೆಗೊಳಪಡಿಸುವುದು. ವ್ಯಭಿಚಾರಕ್ಕೆ ದೂಡುವುದು ಇನ್ನೂ ಮುಂತಾಗಿ ವಿಸ್ತಾರಗೊಳ್ಳುತ್ತಾ ಹೋಗುತ್ತವೆ.

ಬೆಂಗಳೂರು ನಗರವೊಂದರಲ್ಲೇ 1998ರ ಮಾಹಿತಿಯ ಪ್ರಕಾರ 233 ಅತ್ಯಾಚಾರಗಳು, 326 ಕೊಲೆ ಪ್ರಕರಣಗಳು 1504 ಕಿರುಕುಳಗಳಿಂದ ಆತ್ಮಹತ್ಯೆಗಳು ಪೊಲೀಸ್ ಇಲಾಖೆಯಲ್ಲಿ ದಾಖಲುಗೊಂಡಿವೆ. ಇವು ದಾಖಲಾದ ಅಂಕಿ ಅಂಶಗಳು ಮಾತ್ರ.

ಬಸಿರು, ಹೆರಿಗೆ ಸಂಬಂಧಿತ ಕಾಯಿಲೆಗಳನ್ನು ಬಿಟ್ಟರೆ ಹೆಂಗಸರ ಸಾವಿಗೆ ಪ್ರಮುಖ ಕಾರಣ ಕೌಟುಂಬಿಕ ಹಿಂಸಾಚಾರವೆಂದು ಹೇಳಲಾಗುತ್ತಿದೆ.

ಇದನ್ನು ನಮ್ಮ ಧರ್ಮಶಾಸ್ತ್ರಗಳು ಅನುಮೋದಿಸುತ್ತವೆ.

ಪುರುಷನ ಹಿಡಿತದಲ್ಲಿಯೇ ಮಹಿಳೆಯ ಬದುಕು ಸವೆಯಬೇಕೆನ್ನುವ ಮನುವಾದಿ, ಪಾಳೆಯಗಾರಿ ಮೌಲ್ಯಗಳು, ಪುರುಷ ಪ್ರಧಾನ ಸಾಮಾಜಿಕ ಮೌಲ್ಯಗಳು ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಪ್ರೇರಣೆಯಾಗಿದೆಯೆಂದು ಮತ್ತೊಮ್ಮೆ ಹೇಳಿದರೆ ತಪ್ಪಾಗಲಾರದು.

ದೌರ್ಜನ್ಯದ ವೈಖರಿಗಳು

ಬೆಂಗಳೂರಿನ ಹೊರವಲಯದ ಬೊಮ್ಮನಹಳ್ಳಿಯಲ್ಲಿ ವಾಸಮಾಡುವ ಮಹಿಳೆ ದೂರೊಂದನ್ನು ತಂದರು. ಆಕೆ ಮದುವೆಯಾಗಿ ಸುಮಾರು ಇಪ್ಪತ್ತು ವರ್ಷಗಳಾಗಿವೆ ಗಂಡ ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿ ಜವಾನ ಕೆಲಸ ಮಾಡುತ್ತಿದ್ದಾನೆ. ಆಕೆಗೆ ವಯಸ್ಸಿಗೆ ಬಂದ ಒಬ್ಬಳು ಮಗಳಿದ್ದಾಳೆ.

ಮೂವರು ಒಟ್ಟಿಗೆ ಸಂಸಾರ ನಡೆಸುತ್ತಿದ್ದರು. ಮಗಳು ದೊಡ್ಡವಳಾಗುತ್ತಾ ಬೆಳೆದಂತೆಲ್ಲಾ ಅಪ್ಪ ಮನೆ ಕಡೆ ನಿರ್ಲಕ್ಷ್ಯ ತಾಳತೊಡಗಿದ. ಮನಸ್ಸಿಗೆ ಬಂದಾಗ ಬರುವುದು ಇಲ್ಲವಾದರೆ ಬಿಡುವುದು ಹೀಗೆ ಮುಂದುವರೆಯುತ್ತಾ ಕೊನೆ ಕೊನೆಗೆ ಮನೆಗೆ ಬರುವುದನ್ನೇ ನಿಲ್ಲಿಸಿದ. ಜಯಮ್ಮಳಿಗೆ ಅನುಮಾನ ಬಂದು ಎಲ್ಲಕಡೆ ವಿಚಾರಿಸಿದಾಗ ಆತ ಗುಟ್ಟಾಗಿ ಇನ್ನೊಂದು ಮದುವೆಯಾಗಿ ಬೇರೆ ಸಂಸಾರ ಹೂಡಿರುವ ಘಟನೆ ನಿಧಾನವಾಗಿ ಬೆಳಕಿಗೆ ಬಂದಿತು. ಮರುವಿವಾಹವಾದ ಬಳಿಕ ಜಯಮ್ಮ ಹಾಗೂ ಮಗಳನ್ನು ಸಾಕುವ ಜವಾಬ್ದಾರಿಯನ್ನು ಮರೆತಿದ್ದ. ಆಕೆಯೇ ಕೂಲಿ ನಾಲಿ ಮಾಡಿ ಕುಟುಂಬ ಸಾಕುತ್ತಿದ್ದಳು. ಕೊನೆಗೆ ಆಕೆಗೂ ಕೆಲಸವಿಲ್ಲದಂತಾಗಿ ಅನಿವಾರ್ಯವಾಗಿ ಗಂಡನ ಸಂಬಳ ಕೇಳಿಕೊಂಡಳು. ಆತ ಕೊಡಲು ನಿರಾಕರಿಸಿದ ಮಾತ್ರವಲ್ಲ. ವಾಸವಿದ್ದ ಮನೆಯನ್ನು ಖಾಲಿ ಮಾಡುವಂತೆ ಹೊಡೆದು-ಬಡಿದು ರಂಪ ಮಾಡಿದ! ಜನವಾದಿಗೆ ದೂರು ಬಂತು. ಇಡೀ ಪ್ರಕರಣವನ್ನು ವಿಶ್ಲೇಷಿಸಿದಾಗ ತಿಳಿದು ಬಂದ ಸಂಗತಿಯೆಂದರೆ ಆತನಿಗೆ ಗಂಡುಮಕ್ಕಳು ಬೇಕಾಗಿದ್ದರು, ಗಂಡು ಮಕ್ಕಳನ್ನು ಪಡೆಯುವ ಸಲುವಾಗಿ ಎಷ್ಟು ಹೆಣ್ಣುಗಳನ್ನಾದರು ಮದುವೆಯಾಗಬಹುದೆಂಬ ಸಾಮಾನ್ಯ ಮನೋಭಾವ ಅವನಲ್ಲಿತ್ತು. ಗಂಡೇ ಪ್ರಧಾನ ಎನ್ನುವ ಅವನ ಮನಸ್ಥಿತಿಯು ಅವನದ್ದೇ ಆದ ಮಗಳನ್ನು ಹಲ್ಲೆಗೈಯ್ಯುವ ಮಟ್ಟಿಗೆ ಪ್ರೇರೇಪಣೆ ನೀಡಿತ್ತು. ಹೆಣ್ಣೆಂಬ ಉದಾಸೀನ ಮನೋಭಾವ, ಮನುವಾದಿ ಮೌಲ್ಯಗಳು ಇನ್ನೆಷ್ಟು ಹೆಣ್ಣು ಮಕ್ಕಳನ್ನು ಕುಟುಂಬಗಳನ್ನು ಬಲಿತೆಗೆದುಕೊಂಡಿರಲಾರವು.

ಬೈಕ್ ಕೊಡಿಸಿ ಇಲ್ಲವೇ ಮಗಳನ್ನು ಮನೆಗೆ ಕರೆದುಕೊಂಡು ಹೋಗಿ

ವಿಜಯನಗರದ ಬಡಾವಣೆಯೊಂದರಿಂದ ತಾಯಿ ಮಗಳಿಬ್ಬರು ಒಮ್ಮೆ ದೂರು ತಂದರು (ಹೆಸರುಬೇಡ)

ಮಗಳಿಗೆ ಮದುವೆಯಾಗಿ ಕೇವಲ 6 ತಿಂಗಳು ಕಳೆದಿವೆ! 19 ವರ್ಷದ ಆ ಹುಡುಗಿ ಗಾರ್ಮೆಂಟ್ ಉದ್ಯೋಗಿ! ಕೆಲಸಕ್ಕೆ ಹೋಗುವ ಸಂದರ್ಭದಲ್ಲಿ ಪರಿಚಯವಾದ ಮೆಕ್ಯಾನಿಕ್ ಯುವಕನೊಂದಿಗೆ ಸ್ನೇಹ ಬೆಳೆಯಿತು. ನಂತರ ಪ್ರೇಮವಾಗಿ ಅವರೇ ಸೇರಿಕೊಂಡು ಹಿರಿಯರ ಒಪ್ಪಿಗೆಯಿಲ್ಲದೆ ರಿಜಿಸ್ಟರ್ಡ್ ಮದುವೆಯಾದರು. ಸಂಸಾರವನ್ನೂ ಹೂಡಿದರು. ಮದುವೆಯ ನಂತರ ಹುಡುಗಿಯ ತವರು ಮನೆಯವರು ಮನೆಗೆ ಸೇರಿಸಿಕೊಂಡರು ಸಂಸಾರಕ್ಕೆ ಬೇಕಾದ ಸಮಗ್ರಿಗಳನ್ನು ಖರೀದಿ ಮಾಡಿ ಕೊಟ್ಟರು. ಯಾವುದೇ ತೊಂದರೆಯಿಲ್ಲದೆ 6 ತಿಂಗಳು ಸಂಸಾರ ನಡೆಯಿತು. ಆ ನಂತರ ಪ್ರಾರಂಭವಾಯಿತು ನೋಡಿ ಜಗಳ. ಏಕೆಂದರೆ ಸ್ಕೂಟರ್ ಸಲುವಾಗಿ.

ನಿಮ್ಮ ಅಪ್ಪ- ಅಮ್ಮ ಮದುವೆ ಮಾಡಲಿಲ್ಲ ಖರ್ಚೂ ಆಗಲಿಲ್ಲ ಎಷ್ಟೊಂದು ಹಣ ಉಳಿತಾಯ ಆಗಿದೆ, ಆ ಹಣದಲ್ಲಿ ನನಗೆ ಸ್ಕೂಟರ್ ಕೊಡಿಸಲು ಹೇಳು ಎಂದು ಗಲಾಟೆ ಮಾಡತೊಡಗಿದ ಪ್ರೇಮವಿವಾಹ ವಾಗಿದ್ದ ಆಕೆ ಮನೆಯಲ್ಲಿ ಏನೂ ಹೇಳಲಿಲ್ಲ. ಸ್ಕೂಟರ್ ಸಿಗಲಿಲ್ಲವೆಂದು ಗಲಾಟೆ ಮಾಡಿ ಗಂಡ ಮನೆ ಖಾಲಿ ಮಾಡಿದ. 15 ದಿನಸ ಬಿಟ್ಟು ವಾಪಸ್ಸು ಬಂದ ಹೆಂಡತಿಗೆ ಹೊಸ ಐಡಿಯಾ ಕೊಟ್ಟ.

ತಂಗಿಯನ್ನು ಹೇಗಾದರೂ ಮಾಡಿ ಮದುವೆ ಮಾಡಲೇಬೇಕು. ಸಾಲ ಸೋಲ ಮಾಡಿ ಮದುವೆ ಮಾಡೇ ಮಾಡುತ್ತಾರೆ. ಆದ್ದರಿಂದ ಆಕೆಯನ್ನು ನನಗೇ ಮದುವೆ ಮಾಡಲು ಹೇಳು. ಅವಳಿಗೆ ಖರ್ಚು ಮಾಡುವ ಹಣವನ್ನು ನನಗೇ ಕೊಟ್ಟು ಸ್ಕೂಟರ್ ಕೊಡಿಸಲು ನಿಮ್ಮ ಮನೆಯವರನ್ನು ಕೇಳು ಇಲ್ಲವಾದರೆ ನೀನೂ ನಿಮ್ಮ ಅಮ್ಮನ ಮನೆಗೆ ವಾಪಸ್ಸು ಹೋಗು ಎಂದ. ಯಾವುದೂ ಫಲಕಾರಿಯಾಗದ ಕಾರಣ ಊರು ಬಿಟ್ಟು ವಾಪಸ್ಸು ಅಪ್ಪನ ಮನೆಗೆ ಹಿಂದಿರುಗಿದ. ಅಲ್ಲಿ ಭವ್ಯ ಸ್ವಾಗತವೂ ಸಿಕ್ಕಿತು. "ಆತನನ್ನ ಹುಡಿಕಿಸಿಕೊಡಿ" ಎಂಬ ದೂರನ್ನು ತಾಯಿ ಮಗಳು ನಮಗೆ ಕೊಟ್ಟರು.

ಒಂದು ಸೀರೆ ಕೊಂಡರೆ ಒಂದು ಸೀರೆ ಉಚಿತ. ಒಂದು ಮಿಕ್ಸಿಕೊಂಡರೆ ಇನ್ನೊಂದು ಮಿಕ್ಸಿ ಉಚಿತ ಎನ್ನುವ ಇಂದಿನ ಮಾರುಕಟ್ಟೆಯ ರೀತಿಯಲ್ಲಿ "ಅಕ್ಕನನ್ನು ಉಚಿತವಾಗಿ ಮದುವೆಯಾಗಿದ್ದೇನೆ ತಂಗಿಯನ್ನು ಕೊಟ್ಟು ಹಣ ಕೊಡಿ" ಎಂದು ಕೇಳುವ ಮಟ್ಟಕ್ಕೆ ಆ ಯುವಕನ ಮನಸ್ಥಿತಿಯನ್ನು ರೂಪಿಸಿದ್ದು ಯಾರು?

ವಿನಾಶಕಾರಿ ಹೊಸ ಆರ್ಥಿಕ ನೀತಿ ಹುಟ್ಟು ಹಾಕಿರುವ ಉದಾರೀಕರಣದ ಫಲವಲ್ಲವೇ ಇದು. ತೀವ್ರಗೊಳ್ಳುತ್ತಿರುವ ಗ್ರಾಹಕ ಪೈಪೋಟಿ ಎಲ್ಲ ಯುವಕರ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಸ್ಕೂಟರ್‌ಬೇಕು, ಕಲರ್ ಟೀವಿ ಬೇಕು, ಸೈಟ್ ಬೇಕು. ಪಡೆಯಲು ಅತ್ತೆ ಮನೆ ಹಣ ಬೇಕು. ಗಂಡಸಿನ ಸುಖಲೋಲುಪತೆಯ ಸಲುವಾಗಿಯೇ ಹೆಣ್ಣು. ಆಕೆಯಿಂದ ಸುಖ ಸವಲತ್ತುಗಳಿಲ್ಲವೆಂದ ಮೇಲೆ ಅವಳ್ಯಾಕೆ ಎನ್ನುವ ಗಂಡಿನ "ಹಮ್ಮು" ಜೊತೆಗೆ "ಮಾರುಕಟ್ಟೆ ಸಂಸ್ಕೃತಿಯನ್ನು" ಪುಸಲಾಯಿಸುವ ಉದ್ದಿಮೆದಾರರ "ಬಿಮ್ಮು". ಇವರಿಬ್ಬರ ನಡುವೆ ಸಿಲುಕಿರುವ ಮಹಿಳೆಯ ಪಾಡೇನು?

ಮನೆಗೆಲಸಕ್ಕೆ ಜನ ಬೇಕಾಗಿತ್ತು ಮದುವೆಯಾದೆ: ಕೃಷ್ಣರಾಜ ಪುರ ಪ್ರದೇಶದಿಂದ ಒಮ್ಮೆ 20 ರ ಯುವತಿ ಹಾಗೂ ಆಕೆಯ ತಾಯಿ ದೂರು ತಂದರು ಆಕೆಗೆ ಮದುವೆಯಾಗಿ ಕೇವಲ 15 ದಿವಸಗಳು ಮಾತ್ರ ಆಗಿದ್ದವು. ಗಂಡನ ಮನೆಯಲ್ಲಿ 12 ದಿನ ಬಾಳ್ವೆ ಮಾಡಿ ನೇರವಾಗಿ ದೂರನ್ನು ಹಿಡಿದು ಮಹಿಳಾ ಸಂಘಟನೆ ಕಛೇರಿಗೆ ಬಂದಿದ್ದಳು.


ವರದಕ್ಷಿಣೆ ಹಿಂಸೆಗೆ ಬಲಿಯಾಗಿ ಸಾವು-ಬದುಕಿನೊಂದಿಗೆ ಹೋರಾಡುತ್ತಿರುವ ಮಹಿಳೆ

ಹೊಸೂರಿನ ಬಳಿ ಚಿಕ್ಕ ಗ್ರಾಮವೊಂದರಲ್ಲಿ ವ್ಯಾಪಾರ ಮಾಡುವ ಯುವಕನೊಂದಿಗೆ ಆಕೆಯ ವಿವಾಹ ವಾಗಿತ್ತು. ಮದುವೆಯಾದ ಬಳಿಕ ಆಕೆಯನ್ನು ಗಂಡನ ಮನೆಗೆ ಕರೆದೊಯ್ದಿದ್ದರು. ಕರೆದೊಯ್ದ ವಾರನೇ ದಿನದಿಂದಲೇ ಆಕೆ ಯನ್ನು ಹೇಸರಗತ್ತೆಯ ಹಾಗೆ ದುಡಿಸಲು ಪ್ರಾರಂಭಿಸಿದರು. ಮನೆ ತುಂಬ ಜನ. ಬೆಂಗಳೂರಿನ ಹೊಟೇಲ್‌ಗಳಲ್ಲಿ ಬೆಳಿಗ್ಗೆ ನಾಲ್ಕು ಗಂಟೆಗೆ ಬಾಲಕಾರ್ಮಿಕರನ್ನು ಏಳಿಸಿ ರಾತ್ರಿಯವರೆಗೆ ದುಡಿಸುವ ಹಾಗೆ ಆಕೆಯನ್ನು ಗಂಡನ ಮನೆಯವರು ದುಡಿಸಿದರು. ಜೊತೆಗೆ ನಿಮ್ಮ ಅಮ್ಮನಿಗೆ ಹಣ ಕಳಿಸಲು ಪತ್ರ ಹಾಕು ಎಂದು ಆರ್ಭಟಿಸುತ್ತಿದ್ದರು. (20 ಸಾವಿರ ಪಡೆದಿದ್ದರೂ ಕೂಡ) ಹೇಳಿದ ಕೆಲಸ ಮಾಡದೇ ಹೊದರೆ ಹೊಡೆತ ತಿನ್ನಬೇಕಾಗುತ್ತಿತ್ತು. ಸರಿ ಹುಡುಗಿ ಧೈರ್ಯಮಾಡಿ ಗಂಡನ ಮನೆಯಿಂದ ಅಮ್ಮನ ಮನೆಗೆ ವಾಪಸ್ಸು ಬಂದಳು. ಮತ್ತೆ ಹೋಗುವುದಿಲ್ಲವೆಂದು ಹಠ ಹಿಡಿದಳು. ಸರಿ ಒಬ್ಬಳೇ ಮಗಳು ಕಷ್ಟಕ್ಕೆ ಸಿಗುವುದು ಬೇಡವೆಂದು ಆಕೆಯ ಅಣ್ಣ ಹಾಗೂ ತಾಯಿ ದೂರು ನೀಡಿದರು. ಪೊಲೀಸರು ಪ್ರಕರಣವನ್ನು ಕೇಳಿ ನಕ್ಕು ವಾಪಸ್ಸು ಕಳಿಸಿದರು. ಮಹಿಳಾ ಸಂಘಟನೆ ಪ್ರಕರಣವನ್ನು ಮತ್ತೊಮ್ಮೆ ಪೊಲೀಸರ ಬಳಿತೆಗೆದುಕೊಂಡು ಹೋಗಿ ವಿಚಾರಣೆ ನಡೆಸುವ ಸಮಯಕ್ಕೆ ಹುಡುಗಿಯ ಗಂಡ ಹೇಳಿಕೆ ನೀಡಿದ "ನನಗೆ ಈಕೆ ಇಷ್ಟವಿರಲಿಲ್ಲ. ನನ್ನ ತಂಗಿಯ ಮದುವೆ ನಡೆಯಬೇಕಾಗಿತ್ತು, ಆದಕ್ಕೆ ಹಣ ಬೇಕಾಗಿತ್ತು. ಜೊತೆಗೆ ನಮ್ಮ ಮನೆಯಲ್ಲಿ ಜನ ಜಾಸ್ತಿ

ಕೆಲಸ ಮಾಡುವವರು ಇಲ್ಲ. ನಮ್ಮ ತಾಯಿಗೆ ಖಾಯಿಲೆ. ಅದಕ್ಕೆ ಆಕೆಯನ್ನು ಮದುವೆಯಾದೆ. ಅವಳು ಚೆಂದವೂ ಇಲ್ಲ ಆದ ಕಾರಣ ಆಕೆಯ ಜೊತೆ ನಾನು ದಾಂಪತ್ಯವನ್ನು ಏರ್ಪಡಿಸಿಕೊಳ್ಳಲೇ ಇಲ್ಲ." ಎಂದ ಆತನ ಹೇಳಿಕೆಯನ್ನು ಕೇಳಿ ಪೊಲೀಸ್ ಹೆಣ್ಣು ಮಕ್ಕಳೇ ಅವಾಕ್ಕಾದರು. ಕೊಟ್ಟಿದ್ದ ಎಲ್ಲ ಹಣ ಆಭರಣವನ್ನು ಹಿಂದಿರುಗಿಸಿ ಆಕೆಯನ್ನು ತವರಿಗೆ ಕಳಿಸಿಕೊಟ್ಟು ಪ್ರಕರಣವನ್ನು ಇತ್ಯರ್ಥ ಪಡಿಸಿದರು. 15 ದಿವಸಕ್ಕೆ ಆ ಯುವತಿಯ ವೈವಾಹಿಕ ಜೀವನ ಪೂರ್ಣಗೊಂಡಿತು. ಒಂದು ಹುಡುಗಿಯ ಮದುವೆ ಸಲುವಾಗಿ ಇನ್ನೊಂದು ಮದುವೆ ಈ ವರದಕ್ಷಿಣೆಯ ವಿಷವರ್ತುಲಕ್ಕೆ ಎಲ್ಲರೂ ಬಲಿ. ತನ್ನ ಮಗನಿಗೆ ವರದಕ್ಷಿಣೆ ಬೇಕು. ಮಗಳಿಗೆ ಕೊಡಬೇಕು. ಕೊಡಲು ಆಗದಿದ್ದರೂ ಪಡೆಯಲೇ ಬೇಕು. ಒಟ್ಟಾರೆಯಾಗಿ ವರದಕ್ಷಿಣೆ ಯಿಲ್ಲದೆ ಮದುವೆ ಆಗಲೇಬಾರದೆಂದು ಹಠಕ್ಕೆ ಯಾರು ಬಲಿ? ಎಲ್ಲ ಹೆಣ್ಣು ಮಕ್ಕಳು.

ಈ ಸಾಮಾಜಿಕ ಪಿಡುಗಿನಿಂದ ಮುಕ್ತಿ ಪಡೆಯಲು ಹೆಣ್ಣು ಮಕ್ಕಳಷ್ಟೇ ಹೋರಾಡಿದರೆ ಸಾಲದು. ಇದು ಭೂತಾಕಾರದ ಸಾಮಾಜಿಕ ಸಮಸ್ಯೆ. ಇದನ್ನು ತೊಲಗಿಸಲು ಪ್ರತಿಯೊಬ್ಬರೂ ತೀರ್ಮಾನ ತೆಗೆದುಕೊಳ್ಳಬೇಕು.

ಇನ್ನು ಬೆಲೆಯೇರಿಕೆಯ ತಾಪ. ಬೆಲೆಯೇರಿಕೆಯ ಒತ್ತಡದಿಂದಾಗಿ ಸಾಂಬಾರು ಬಿಸಿ ಮಾಡದ ಹೆಂಡತಿಯ ಕೊಲೆ, ಮಾಂಸಮಾಡಲು ನಿರಾಕರಿಸಿದ ಹೆಂಡತಿಯ ಕೊಲೆ, ಸಂಬಳ ಹೆಚ್ಚಾಗಿ ತರದ ಹೆಂಡತಿಯ ಕೊಲೆ ಮುಂತಾದವು ಇತ್ತೀಚಿನ ದಿನಗಳಲ್ಲಿ ನಿರಂತರ ಸುದ್ದಿಗಳು ಇಷ್ಟಲ್ಲದೆ ನಾನಾ ಥರದ ಕ್ಷುಲ್ಲಕ ಕಾರಣಗಳನ್ನು ಮುಂದೆ ಮಾಡಿ ಮಹಿಳೆಯರ ಮೇಲೆ ಹಿಂಸಾಚಾರ, ದಿನನಿತ್ಯದ ಹಿಂಸಾಚಾರವೂ ಒಳಪಟ್ಟಂತೆ ಮಹಿಳೆಯರ ವಿರುದ್ಧದ ಇತರೆ ಅಪರಾಧಗಳು ಬಹಳ ಕಡಿಮೆ ವರದಿಯಾಗುತ್ತವೆ. ಗಂಡು ಹೆಣ್ಣು ಎಂಬ ಭೇಧವಿಲ್ಲದೆ ಯಾವುದೇ ವ್ಯಕ್ತಿಯ ವಿರುದ್ಧ ಯಾವುದೇ ರೀತಿಯ ಹಲ್ಲೆ ಶಿಕ್ಷಾರ್ಹವೆಂದು ದಂಡ ಸಂಹಿತೆ ಘೋಷಿಸಿದ್ದರೂ ಸಹ ಮನೆಯಲ್ಲಿ ಸ್ತ್ರೀಯನ್ನು ಸದೆಬಡಿಯುವುದು. ಲೋಕಾರೂಢಿಯೆಂದು ಪರಿಗಣಿಸಿ ಪೊಲೀಸ್ ಅಧಿಕಾರಿಗಳು ನ್ಯಾಯಾಲಯಗಳು, ಹಿಂಸೆಗೆ ತುತ್ತಾದವರು ಮೌನವಾಗಿ ಅಂಗೀಕರಿಸುತ್ತಾರೆ.

ಮಹಿಳೆಯರನ್ನು ಹೊಡೆದ ದೂರುಗಳು ದಾಖಲಾಗಿ ಅಪರಾಧವೆಂದು ಶಿಕ್ಷೆ ವಿಧಿಸಿದ ಪ್ರಕರಣಗಳು ತುಂಬಾ ವಿರಳ. ಕೌಟುಂಬಿಕ ಹಿಂಸಾಚಾರವನ್ನು ಮನೆಯೊಳಗಿನ ಜಗಳ ಎಂದೇ ಉಪೇಕ್ಷಿಸಲಾಗುತ್ತಿದೆ. ಇದನ್ನು ಸಾಮಾಜಿಕ ಸಮಸ್ಯೆಯಾಗಿ ಪರಿಗಣಿಸುವುದೇ ಇಲ್ಲ.

ಜಗತ್ತಿನ ಪ್ರಥಮ ಶೋಷಿತೆಯ ಬದುಕು ಮತ್ತಷ್ಟು ಬರ್ಬರವಾಗುತ್ತಿದೆ. ಅಂದು ಹೇಳಿದ ಆ ಮಾತು ಇಂದು, ಇನ್ನೂ ಗಂಭೀರ ರೂಪ ತಾಳಿದೆ. ಒಂದು ಕಡೆ ಯಾಂತ್ರಿಕ ದುಡಿಮೆ. ಮತ್ತೊಂದು ಕಡೆ ಅಸಮಾನತೆ. ಮೇಲಾಗಿ ಮೇರೆ ಮೀರುತ್ತಿರುವ ದೌರ್ಜನ್ಯಗಳು.

ಮಹಿಳೆಯಾಗಿ, ದುಡಿಯುವ ಮಹಿಳೆಯಾಗಿ, ಈ ಸಮಾಜದ ನಾಗರಿಕಳಾಗಿ, ಮಹಿಳೆಯ ಬದುಕು ಸುಂದರವಾಗಿ ಅರಳಬೇಕಾದರೆ ಅಸಮಾನತೆಯಿಂದ ಕೂಡಿದ ಈ ಸಮಾಜದ ವಿಮೋಚನೆಯಾಗಲೇ ಬೇಕು. ಶ್ರಮಿಕರ ರಾಜ್ಯ ಬರಲೇ ಬೇಕು. ಶೋಷಣೆ ಮುಕ್ತ ಸಮಾಜದ ನಿರ್ಮಾಣಕ್ಕೆ ಪ್ರತಿಜ್ಞೆಗೈಯ್ಯಲು ಮೇ.1 ಸೂಕ್ತ ದಿನ. ಮಹಿಳೆಯರೂ ಪ್ರತಿಜ್ಞೆಗೈದು ಸಮಾನತೆಗಾಗಿನ ಹೋರಾಟದ ಸಾಗರದಲ್ಲಿ ತೊರೆಗಳಾಗಿ ಮೂಡಿ ಬರಲು ಈ ಬಾರಿಯ ಹೊಸಶತಮಾನದ ಮೇ ದಿನ ಸ್ಫೂರ್ತಿಯ ಸೆಲೆಯಾಗಲಿ.

ಕಥೆ

ಹೈದರಾಬಾದ್ ಕರ್ನಾಟಕದ ಪಾಳೆಯಗಾರಿ ಸಮಾಜದಲ್ಲಿನ ದಲಿತರ ಬದುಕಿನ ದಾರುಣತೆಯನ್ನು ಚಿತ್ರಿಸುತ್ತದೆ. 'ತಮಂಧದ ಕೇಡು'.ಪಾಳೆಯಗಾರಿ ಧಣಿಯೊಬ್ಬನ ಜೀತಗಾರನಾದ ದುರುಗನ ಬದುಕು, ಅವನ ಮಗ ಚೆನ್ನನ ವಿದ್ಯಾಭ್ಯಾಸ, ಮಾಸ್ತರಿಕೆ ಉದ್ಯೋಗ ಇವುಗಳ ನಡುವೆಯೂ ದುರುಗ ತನಗೆ ಒಗ್ಗಿದ ಜೀತಗಾರಿಕೆಗೆ ಮರಳಿದ್ದನ್ನು ಓದಿದ್ದೀರಿ

ತಮಂಧದ ಕೇಡು

ಅಮರೇಶ ನುಗಡೋಣಿ

ಚೆಂದವ್ವನ ಶಾಂತಗೌಡ ದುರುಗನ್ನ ಮದಿವಿಯಾಗಿ ಬಂದಾಗಿನಿಂದ ನೋಡುತ್ತಲೇ ಬಂದಿದ್ದ. ಆದರೆ ಆತಗ ಏನೋ ಅನಿಸಿರಲಿಲ್ಲ. ಆಕಿ ದುರುಗನ ಹೇಣ್ತಿ. ತನ್ನ ಮನ್ಯಾಗ ವಾಣ್ಣಾಗಿ ದಗದ ಮಾಡ್ಕೆಂಡು ಇರ್ತಾಳ. ಗಂಡಗ ಒಳ್ಳೆ ಹೆಣ್ತಿ ಅಂಬೋದು ಬಿಟ್ಟರೆ ಬೇರೆನೂ ತಿಳಿದಿದ್ದಿಲ್ಲ. ಚಂದವ್ವಗ ಚೆನ್ನ ಹುಟ್ಟಿದ್ದ. ಮುರ್ನಾಕು ವರ್ಷದವುನಿರಬೇಕು. ಅದೇ ಹಿಂಗಾರಿ ಬಿತ್ತುವ ಸಂಭ್ರಮ ನಡದಿತ್ತು. ಊರಿಂದಲ ಹೊಲದಲ್ಲಿ ದುರುಗನೇ ಬಿಳಿಜ್ವಾಳದ ಕೂರಿಗೆ ಹಿಡಿದಿದ್ದ ಬೆಳದಿಂಗಳಿದ್ದರಿಂದ ರಾತ್ರಿಯೂ ಕೂರಿಗೆ ಸಾಗಿತ್ತು. ಬೆಳದಿಂಗಳಾಗ ಕೂರಿಗೆ ಸಾಲು ತಪ್ಪದಂಗ ಬಿತ್ತುವುದು ದುರುಗನಿಗೆ ಮಾತ್ರ ಸಾಧ್ಯಯಿತ್ತು? ಶಾಂತಗೌಡ ಅದನೋಡಿಕೊಂಡು ನಿದ್ದಿ ಬಂದಂಗಾಗಿ ಮನೆಕಡೆ ನಡೆದ. ಹಂಪಮ್ಮ ಬಾಳ ದಿನಕ ಅದೇ ಹೆಣ್ಣು ಹಡದು ತೌರುಮನ್ಯಾಗಿದ್ದಳು. ಮನೆಕಡೆ ಬರುವಾಗ ದುರುಗನ ಗುಡಿಸಿಲ ಮುಂದನೇ ಹಾದು ಬರುವಾಗ ಚಂದವ್ವ ಅವತ್ತು ಇನ್ನೂ ಹಾಡುತ್ತಿದ್ದಳು. ಸಾಂತಗೌಡ ಯಾಕೋ ನಿಂತಗಂಡುಬುಟ್ಟ. ದೊಡ್ಡ ಮರಗಳ ಕೆಳಗ ಸಣ್ಣ ಗುಡಿಸಿಲು. ಗುಡಿಸಿಲು ಮುಂದ ಜೋಗಳ. ಅದರಾಗ ಚೆನ್ನ. ಚಂದವ್ವ ತೂಗಿಕೆಂತ ಹಾಡುತ್ತಿದ್ದಳು. ಅಲ್ಲಿಗೆ ದುರುಗ ಬಿತ್ತುತ್ತ ಎತ್ತುಗಳಿಗೆ ಗದರಿಸುವುದು ಕೇಳುತ್ತಿತ್ತು. ಚಂದವ್ವ ಸಲುಪು ಹೊತ್ತಿ ಮ್ಯಾಗ ಎದ್ದು ಮುಂದತ್ತ ಒಂದು ಕಾಲಮಡುದು ಅಮ್ಯಾಲೆ ಎದ್ದು ಬರುವಾಗ ಅತ್ತ ದಾರಿಗೆ ಶಾಂತಗೌಡ ನಿಂತಗುಂಡಿದ್ದು

ಆದರೆ ಶಾಂತಗೌಡಚಿ-ಚಂದವ್ವನ ಸಂಬಂಧ ಅವಳು ಸಾಯತನಕ ನಡದಿತ್ತು! ದುರುಗ ನುಂಗಿಕೊಂಡಿದ್ದ....

ನೋಡಿ. ' ಯಪಾ ಗೌಡ.... ಅಂದಳು. ಶಾಂತಗೌಡುಗ ಇರುಸು ಮುರುಸಾದರೂ 'ಹಾಂ ಹಾಂ... ನಾನೇ. ಕೂರಿಗೆ ನೋಡಾಕ ಹೋಗಿದ್ದೆ... ಮನಿಗೆ ಹೋಗಮಂತ ಬಂದೆ... ನೀನು ನೀನು ಹಾಡದು...' ಅಂದ. ಚಂದವ್ವಗ ತಾನು ಹಾಡದು ಗೌಡುಗ ಪಸಂದು ಬರುವುದು ಗೊತ್ತಿತ್ತು. ಸುಮ್ನಾಗಿ ನಿಂತಳು. ಆದರೆ ಶಾಂತಗೌಡನ ದನಿ ಬದಲಾಗಿತ್ತು ಆಕಿ ಕಾಲುಮಡೆದು ನೋಡಿದಾಗಲೇ ಆತನ ಚಿತ್ತ ಕದಲಿಬುಟ್ಟಿತ್ತು. ಬಗಲಾಕ ಬಂದು, ' ಚಂದವ್ವ, ನೀರು ಕೊಡು' ಅಂದ. ಹೊರಗಡೆ ಹೋಗಾಕ ಕೇಳಿರಬೇಕಂತ ಹೋಗಿ ನೀರು ತಂದಳು ಶಾಂತಗೌಡ ಎಡಗೈಯಿಂದ ಆಕಿ ತಂದ ತಂಬಿಗೆ ಇಸಕೊಂಡು ಬಲಗೈಯಿಂದ ಆಕೆ ತೋಳು ಹಿಡಕಂಡ. ಚಂದವ್ವಗ ಎದೆ ದಸ್ ಅಂತು. ' ಯಪ್ಪಾ... ಗೌಡಾ...' ಅಂತ ಹಿಂದಕ ಸರದಳು. ಆತ ತಂಬಿಗೆ ಬುಟಾಕಿ ಆಕಿನ್ನ ಎಳಕಂಡು ' ಚಂದವ್ವ.... ಚಂದವ್ವ.. ನೀನು ಬೇಕು ನನ್ಗ.... ಈಗ' ಅಂತ ಹಿಡಕಂಡುಬುಟ್ಟ. ಚಂದವ್ವಗ ಏನೂ ಮಾಡಾಕ ಆಗ್ಲಿಲ್ಲ...!

ಆಮ್ಯಾಲೆ ಶಾಂತಗೌಡುಗ ಹಂಪಮ್ಮನಿಗಿಂತ ಮೈಕೈ ತುಂಬಿಕೊಡಿದ್ದ ಚಂದವ್ವ ಹಿತವಾದಳು. ಒಂದು ವಾರ ತಡಕೊಳ್ಳದು ಆಗ್ಲಿಲ್ಲ. ಚಂದವ್ವ ತಪ್ಪ ಮಾಡಿದೆ ಅನಿಸಿ ಕೊರಗತೊಡಗಿದಳು. ಆಕಿ ಕಸುರಿಲ್ಲದವುಳು. ಮುಚ್ಚಿಟಗಳದು ಬ್ಯಾಡನಿಸಿ ದುರುಗನಿಗೆ ಹೇಳಿಬುಟ್ಟಳು! ದುರುಗ ಅದಕೇಳಿ ಹರಿಯುತ್ತಿದ್ದ ತುಂಗಮ್ಮನ ಮಡಿಲಿಗೆ ಬಿದ್ದು ಈಸಿದ... ಈಸಿದ. ಬಾಳೊತ್ತು ಈಸಿ ದಣುದು ಗುಡಿಸಿಲಿಗೆ ಬಂದ. ಚಂದವ್ವ ಇರಲಿಲ್ಲ. ಚೆನ್ನನ್ನ ಕರಕಂಡು ತನ್ನ ತವುರು ಮನಿಗೆ ಹೋಗಿದ್ದಳು. ವಾರೊಪ್ಪತ್ತು ಕಳಿತು. ಚಂದವ್ವ ಬರಲಿಲ್ಲ. ದುರುಗನೂ ಹೋಗಲಿಲ್ಲ. ದುರುಗನಿಗೆ ಮಗ ಚೆನ್ನನ ಮ್ಯಾಲೆ ಜೀವ ಉಕ್ಕಿ ಚಡಪಡಿಸಿದ. ಶಾಂತಗೌಡಗ ದುರುಗ ಇಲ್ಲಂದ್ರ ಜೀವ ಕಳಕಂಡವುರಂಗ ಆಗಿ ಗುಡಿಸಿಲಿಗೆ ಬಂದ ದುರುಗ ಶಾಂತಗೌಡುನ ಕಾಲಿಗೆ ಬಿದ್ದು ಅತ್ತುಬುಟ್ಟ! ಆಮ್ಯಾಲೆ ಚಂದವ್ವನ ದುರುಗ ತಾನೇ ಹೋಗಿ

ಸಂಬಂಧ ಅವಳು ಸಾಯತನಕ ನಡದಿತ್ತು! ದುರುಗ ನುಂಗಿಕೊಂಡಿದ್ದ....

ಶಾಂತಗೌಡ ಅದು ಇದು ಏನೇನೋ ನೆಪ್ಪ ಮಾಡಿಕೊಂಡು ಅದರಾಗ ಮುಳುಗಿದ್ದ. ಕಾಲೆಳಕಂತ ಪಡಶಾಲೆಯಲ್ಲಿ ಅತ್ತಗಿನಿಂದ ಇತ್ತಗ, ಇತ್ತಗಿನಿಂದ ಅತ್ತಗ, ಅಡ್ಡಾಡುತ್ತ ಚಂದವ್ವನ ಬಗ್ಗೆ ನೆನಸಿಗಂಡ. ದುರುಗನಮ್ಯಾಗ ಕಕ್ಕುಲಾತಿ ಮೂಡಿದಂಗಾಗಿ ' ದುರುಗಾ' ಅಂದ, ಏನೋ ಮಾತಾಡಲು. ಆ ಪುಣ್ಯದ ಕರೆ ಕೇಳಿಕೊಳ್ಯಾಕ ದುರುಗ ಇರಲಿಲ್ಲ. ದಿಗ್ಗನೆದ್ದ ಹನುಮಂತ, 'ಗೌಡಾ ಕರದೇನಪ್ಪ' ಅಂದ.

ಅಷ್ಟರಾಗ ಭೀಮಯ್ಯ 'ದುರುಗಣ್ಣ ತನ್ನ ಮನಿಗೆ ಹೋಗ್ಯಾನಪ್ಪೋ, ನಿನ್ನೆ ರಾತ್ರಿ' ಅಂದ.

' ಯಾಕೋದ? ಯಾಕೋದ...? ಅಂತ ಶಾಂತಗೌಡ ತನಗ ತಾನೆ ಅಂದುಕೊಂಡಂಗ ಅಂದ. ಅಡ್ಡಾಡದು ನಿಲ್ಲಿಸಿ ಕುಂತಂಡು ' ಬೆಳಕು ಹರ್‍ಯಾಕ ಬಂತೇನು ನೋಡು' ಅಂದ ಹನುಮಂತ ಹೊರಗೆ ಹೋಗಿ ಒಳಗೆ ಬಂದು, ' ಏನೂ ತಿಳಿವಲ್ಲಪ್ಪ, ಗೌಡ ಮಾಡಾಗ್ಯಾದ . ಕರ್‍ರಗ ಕಾಣತಾದ. ಚಳಿ ಸುರುವಾಗ್ಯಾದ' ಅಂದ. ಹೊತ್ತು ಗೊತ್ತು ತಿಳಿವಲ್ದು ಇವುನಿಗೆ' ಅಂದು ತಾನೇ ಹೊರಗೆ ಹೋಗಲು ಎದ್ದ. ಸಂಬಳದಾಳು ಇಬ್ಬರೂ ಕಂದೀಲು ಬಿಡಕಂಡು ಹೊರಗೆ ಬಂದರು ಹಿಂದಿಂದ. ಶಾಂತಗೌಡ ಹೊರಗ ನಿಂತು. ' ಸುತ್ತ ಮುತ್ತ ಮಳೆ ಆಗಾಕ ಹತ್ಯಾದಂತ ತುಪಾನು ಬಂದು. ನಮ್ಮ ಅಡಿವ್ಯಾಗ ಮಳೆ ಬಿದ್ರ, ನಾವು ಕೂರಿಗಿ ಸಾಗಸಬೇಕು ತಿಳಿತಿಲ್ಲ' ಅಂದ ಸಿಟ್ಟಿನಿಂದ. 'ಹೂಂ' ಅಂದರು. ಸುತ್ತ ನೋಡಿ ಏನೋ ಸಮಸದೆ ಒಳಗ ಬಂದ 'ಲೇ ಭೀಮಾ ಹನುಮಾ, ಚೆನ್ನ ಈ ಸಲ ಊರಿಗೆ ಬಂದ್ರ ನನ್ಗ ತಿಳುಸ್ಬೇಕು ಅಂದ. 'ಹೂಂ' ಅಂದರು. ತಿಳುಸ್ಬೇಕನೆ ಅಂದ್ರ ತಿಳುಸ್ಬೇಕು! ಏನ್ರಲೇ... ಮಬ್ಬುಗಳೇ...' ಅಂದ ಸಿಟ್ಟಿನಿಂದ 'ಅಯ್ಯಪ್ಪೋ....!' ಅಂದರು.

ಸಲುಪೊತ್ತಿನ ಮ್ಯಾಲೆ ಶಾಂತಗೌಡ ಎದ್ದು ಮತ್ತೆ ಕಾಲೆಳಕಂತ ಪಡಶಾಲೆಯಲ್ಲಿ ತಿರುಗಾಡತೊಡಗಿದ. 'ಚೆನ್ನ ನನ್ನ ಕುಂಡೆ ಬುಡ್ಕ ನೀರು ತಂದನಲ್ಲ... ಮಗ' ಅಂತ ಹಲ್ಲು ಕಡದ. ' ಲೇ ಬೆಳಕು ಹರ್‍ಯಾಕ ಬಂದಿದ್ದಾದು. ಸೂಗಮ್ಮನ್ನ ಕರ್‍ಯಂಬಾ ಹೋಗು. ಭೀಮ, ನೀ ಹೋಗು' ಅಂದ. ಅವುನು ಓಡಿ ಹೋದ. ' ನಾಯಿನ್ನ ಬಿಡು' ಅಂದ. ಹನುಮಂತ ಹಿಂದಿನ ಎತ್ತಿನಂಕಣದಲ್ಲಿ ಕಟ್ಟಿಹಾಕಿದ್ದ ನಾಯಿನ್ನ ಬಿಚ್ಚಿದ. ಅದು ಓಡಿ ಹೊರಗ ಹೋಯಿತು. ಮತ್ತೆ ಒಳಗ ಬಂತು. ಪಡಸಾಲಿ ಏರಬೇಕಂತ ನೋಡಿತು. ಶಾಂತಗೌಡನ್ನ ಕಂಡು ಬಾಲ ಅಳ್ಳಾಡಿಸಿ, ' ಕುಂಯ್ ಕುಂಯ್' ಅಂತು ಶಾಂತಗೌಡ ಅದರ ಕಡೆ ಲಕ್ಷ್ಯ ಕೊಡದೆ ಅಡ್ಡಾಡಿದ. ಸಲುಪೊತ್ತಿನ ಮ್ಯಾಲೆ ಭೀಮ ಬಂದು, ' ಬರ್‍ತಾಳಂತಪ್ಪ ಗೌಡ' ಅಂದು ಆ ಮ್ಯಾಲೆ ' ಜಿನಿ ಜಿನಿ ಮಳೆ ಬರ್‍ತಿದ್ದಂಗಾದಪ್ಪ ಗೌಡ' ಅಂದ ' ಏನು ಬಂದ್ರೂ ಬಿತ್ತುವ ಮಳೆ ಬರವಲ್ದಲ್ಲ.....' ಅಂದ ಶಾಂತಗೌಡ ಅಸಮಾದಾನದಿಂದ.

ದುರುಗ ಯಾಕ ಇಲ್ಲೆ ಮಕ್ಕಳಿಲ್ಲ? ಅಂದ. ಅವರಿಬ್ಬರೂ ಮಾತಾಡಲಿಲ್ಲ ಆತ ಹೇಳ್ತಾನಂತ ಈತ, ಈತ ಹೇಳ್ತಾನಂತ ಆತ. ಹಿಂಗಾಗಿ ಸುಮ್ಮಿದ್ದರು. ಬೊಗಳಕ ಏನಾಗ್ಯಾದ್ರಲೇ...' ಅಂದ ಸಿಟ್ಟಿನಿಂದ. ಸೂಗಪ್ಪ ಮಾಸ್ತಾರ ದಿಗ್ಗನೆದ್ದು ' ಹಾಂ... ಏನಾಯ್ತು' ಅಂದ ' ತಾತ, ಏನಿಲ್ಲ ನೀ ಮಕ್ಕ' ಅಂದ ಶಾಂತಗೌಡ. ಆದರೆ ಸೂಗಪ್ಪ ಮಾಸ್ತಾರ ಮೆಲ್ಲಕ ಎದ್ದುಕುಂತ. ಶಾಂತಗೌಡನ ದನಿ ಕೇಳಿ ನಾಯಿ ಹಿಂದಕ ಸರುದು ಗಾಬರಿಯಾಗಿ ನಿಂತಿತು. ಶಾಂತಗೌಡ ಅದೆಲ್ಲ ಮರತು ಕುಂತುಗೊಂಡ. ನಾಯಿ ಮತ್ತೆ ಶಾಂತಗೌಡನ ಬಗಲಾಕ ಬಂತು ಅದರ ತಲಿಮ್ಯಾಗ ಕೈಯಾಡಿಸಿದ. ಅದು ಲಟಲಟ ಬಾಲ ಬೀಸಿ ಬೀಸಿ ಕುಣಿಯತೊಡಗಿತು. ಸೂಗಮ್ಮ ಬಂದಳು. ಆಕಿ ಬಂದಾಕಿ ಸೀದ ಅಡಿಗೆ ಮನೆಗೆ ಹೋದಳು. ಹಂಪಮ್ಮ ಸತ್ತಮ್ಯಾಲೆ ಶಾಂತಗೌಡುಗ, ಹೋದವುರಿಗೆ ಬಂದವುರಿಗೆ ಅಡಿಗೆ ಮಾಡಿ ನೀಡುವುದು ಮಾಡುತ್ತಿದ್ದಳು. ಅಡಿಗೆ ಆಳಾಗಿ

ಬಾ' ಅಂತ ಸೂಗಪ್ಪ ಮಾಸ್ತಾರ ನೆನಪಿಸಿದ. ಶಾಂತಗೌಡಗ ನೆನಪಿತ್ತು. ಬೆಳಕು ಹರಿಯಲಿ ಅಂತ ದಾರಿ ಕಾಯಾಕ ಹತ್ತಿದ್ದ. ನಾಯಿ ಸುಮ್ಮನಿರಲಿಲ್ಲ. ಶಾಂತಗೌಡನ ತೊಡೆ ಮೂಸಿ ನೋಡಿತು. ' ಚಿತ್ತಾ... ಅಂದು ಎದ್ದುದ್ದೇ ಹುಡುಕ್ಯಾಡಿ ಒಂದು ಬಡಿಗೆ ತಗಂಡು ಹೊಡೆದುಬುಟ್ಟ! ನಾಯಿಕಾಲಿಗೆ ಏಟು ಬಿತ್ತೋ ಕೊಂಯಂಯ್ಯೋ ಕೊಂಯಂಯ್ಯೋ' ಅಂತ ಒದರುತ್ತ ಹೊರಗೆ ಓಡಿಹೋಯಿತು. ಅಂಕಣದಲ್ಲಿದ್ದ ದನಕರುಗಳು ಬೆಚ್ಚಿಬಿದ್ದು ದಪದಪ ಎದ್ದು ಗಡಬಡಿಸಿದವು. ಬೀಮಯ್ಯ ಹನುಮಂತ ಕಲ್ಲಿನಂಗ ನಿಂತುಕೊಂಡರು ಸೂಗಮ್ಮ ಸೂಗಪ್ಪ ಮಾಸ್ತಾರ ಶಾಂತಗೌಡನ್ನ ನೋಡುತ್ತ ನಿಂತುಕೊಂಡರು. ' ದುರುಗುನ್ನ ಕರೆದು ಬರ್‍ರಲೇ' ಅಂತ ಒದರಿದ.ದುರುಗ ಶಾಂತಗೌಡನ ಕರೆಕಲ್ಲಿನ ದೊಡ್ಡಮನೆ ಒಳಗ ಇಡಲಾರದೆ ಕಾಲಿಟ್ಟ. ಪಡಸಾಲೆಯಲ್ಲಿ ಶಾಂತಗೌಡ ಕುಂತಿದ್ದ. ಅದೇ ಆಗ ಲಿಂಗಪೂಜೆ ಮುಗಿಸಿ ಕುಂತಂತಿತ್ತು ಸೂಗಪ್ಪ ಮಾಸ್ತಾರನದು. ದುರುಗನ ಜಲುಮದಾಗ, ಒಮ್ಮೆನ್ನ ಈ ರೀತಿ ಕೂನ ಇಲ್ಲದವುರಂಗ ಮನೆ ಒಳಗ ಕಾಲಿಟ್ಟದ್ದಾಗಲಿ, ಶಾಂತಗೌಡ, ಸೂಗಪ್ಪ ಮಾಸ್ತಾರ ನೋಡಿಯೂ ನೋಡದಂಗ ಕುಂತದ್ದು ಇರಲಿಲ್ಲ. ಒಳಗ ಸೂಗಮ್ಮ ರೊಟ್ಟಿ ಬಡಿವುದು ಕೇಳುತ್ತಿತ್ತು. ದುರುಗ ಮೆಲ್ಲಕ ಎತ್ತಿನ ಗ್ವಾದಲಿ ಮ್ಯಾಗ ಕಂಬಕ್ಕ ಆನಿಕೆಯಾಗಿ ಕುಂತುಗಂಡ. ಯಾಕೋ ಸೂಗಮ್ಮ ರೊಟ್ಟಿ ಬಡಿವುದು ಬುಟ್ಟು ಹೊರಗ ಬಂದು ದುರುಗನ್ನ ನೋಡಿದಳು ದುರುಗ ಮೆತ್ತಗಾಗಿದ್ದ. ಹಿಂಗ ಇದ್ದುದು ಆಕೆ ಎಂದು ಯಾವ ಗಳಿಗ್ಯಾಗ ಕಂಡಿದ್ದಿಲ್ಲ ಕೇಳಿದ್ದಿಲ್ಲ, ಇಂಥ ದೊಡ್ಡಮನ್ಯಾಗ ದುರುಗ ಒಬ್ಬವುನಿದ್ರೆ ಹತ್ತು ಮಂದಿಯಿದ್ದಂಗ. ಸುಮ್ಮನ್ನೆ ಕೂಡುವ ಜೀವಲ್ಲ. ಏನೇನೋ ದಗದ ಮಾಡುತ್ತ, ಯಾರ್‍ಯಾರಿಗೋ, ಯಾವುದಕ್ಕೋ ಕಾಳಜಿಯಿಂದ ಬೈಯುತ್ತ ಅಂಕಣದ ತುಂಬ ಓಡಾಡುತ್ತ ಎತ್ತುಗಳ ಜತಿಗೋ, ಎಮ್ಮೆಗಳ ಜತಿಗೋ ಮಾಡುತ್ತಲೇ ಇರುತ್ತಿದ್ದ. ತಾನಾಯ್ತು ತನ್ನ ದಗದಾಯ್ತು. ದುರುಗ ಮನುಷ್ಯರ ಜತೆಗೆ ಬಾಳಕಮ್ಮಿ ಮಾತಾಡಿದ್ದ. ಇವತ್ತು ಮಾತು ಕಳಕಂಡು ಗ್ವಾದಿಲಿಮ್ಯಾಗ ಕುಂತುದ್ದು ನೋಡಿ ಸೂಗಮ್ಮಗ ದುಕ್ಕ ಒತ್ತಿ ಬಂತು ಹಂಪಮ್ಮ ಸತ್ತಮ್ಯಾಲಿಂದ ಅಡಿಗೆ ಮಾಡಾಕ ಈ ಮನಿಗೆ ಕಾಲಿಟ್ಟಂದಿನಿಂದ ನಿನ್ನೆ ರಾತ್ರಿವರೆಗೆ ದುರುಗನಿಗೆ ಉಣ್ಣಲಿಕ್ಕಿದ್ದಳು. ದುರುಗನಂಥ ನಂಬಿಗಸ್ಥ ನಂಬಿಗಸ್ಥ ಆಳುಮನುಷ್ಯನನ್ನು ಈ ಮನೆ ಪಡಕಂಡಿದ್ದೇ, ಇದು ಒಂದು ಮನೆ ಅಂತ ಇನ್ನೂ ಜೀವ ಹಿಡಕಂಡಿದೆ ಅಂಬೋದು ಸೂಗಮ್ಮಗ ಗೊತ್ತು. ಸೂಗಮ್ಮಗ ದುರುಗನ ಮ್ಯಾಲೆ ಎಲ್ಲಿಲ್ಲದ ಕಕ್ಕುಲಾತಿ ' ದುರುಗಪ್ಪ...' ಅಂತ ಮೆಲ್ಲಕ ಕರದಳು.

'ಯವ್ವ...' ಅಂದು ಎದ್ದು ನಿಂತ. ಅವುನು 'ಯವ್ವ' ಅಂದ್ರ ಸಣ್ಣ ಕೂಸು ಅಂದಂಗ ಅಂತಿದ್ದ.

'ಬಿಸೆರಟ್ಟಿ ತಿನ್ನುಬಾ' ಅಂದಳು.

'ಯಾಕೆ ಬುಡವ್ವ! ಅರೆಹೊತ್ತಿಗೆ ತಿಂದು ಮಾಡದೇನಾದ! ದಗದಿಲ್ಲ ಬಗಸಿಲ್ಲ' ಅಂದ.

ರುದ್ರಮ್ಮ ಗೌಡ್ತಾನಿ ಬಾ ಅಂತ ಗೌಡನ್ನ ಕರೆಕಳಿಸ್ಯಾಳ ನೀನು ಹೋಗಬೇಕಲ್ಲ...' ಅಂದಳು ಮೆಲ್ಲಕ. ಸೂಗಮ್ಮ ನೀಡಿದ್ದು ಬೇಕೋ ಬೋಡೋ ಉಂಡು ಎದ್ದ. ದುರುಗನ್ನ ನೋಡುತ್ತಿದ್ದ

'ದುರುಗಾ, ನೋಡು... ನೀನು ಇನ್ನ ಮ್ಯಾಲೆ ಈ ಊರಾಗ ಇರದುಬ್ಯಾಡ. ನಿನ್ನ ಮಗನ ಜತಿಗೆ ಹೋಗಿ ಇದ್ದುಬುಡು. ಈ ಕಕ್ಕಲಾತಿಯಲ್ಲದ ಕೋಡಿ ಗೌಡುನ ಜತಿಗೆ ಏಸುದಿನ ಬದುಕತ್ತಿದ್ದಿ! ಎಂದ ಸೂಗಪ್ಪ ಮಾಸ್ತರ.

ಶಾಂತಗೌಡಗ ಜೀವ 'ಚುರ್' ಅಂತು. ದುರುಗಂದು ತಪ್ಪಿಲ್ಲ! ಪಾಪ..... ಅವುನು ತನ್ನ ಜೀವ ಕೊಟ್ಟವುನು ಅಂತ ಅನಕಂಡು 'ದುರುಗಾ' ಅಂದ. ಮಾರೆ ಎತ್ತಿ ನೆ[illegible] ದುರುಗ, 'ಯಪ್ಪ' ಅಂದ. ಶಾಂತಗೌಡುಗ ಅದು ದುರುಗನ ದನಿಯಾಗಿ ಕೇಳಲಿಲ್ಲ.

'ಅಕ್ಕ ಬಾಂತ ಹೇಳಿ ಕಳಿಸ್ಯಾಳ. ಹೋಗಿ ಬರಮೇನು?'

'ನೀನೆಂಗತಿದ್ದಿ ಅಂಗಪ್ಪ' ಅಂದ. ದುರುಗ

ಪುಟ 15ಕ್ಕೆ

ಅಂಬೇಡ್ಕರ್



ನಾಡನಡುವಿನಿಂದ ಸಿಡಿದ
ನೋವಿನ ಕೂಗೇ
ಆಕಾಶದ ಅಗಲಕ್ಕೂ
ನಿಂತ ಅಲವೆ.

ಕೋಟಿ ಕೋಟಿ ಕಪ್ಪು ಜನರ
ಮೊಟ್ಟ ಮೊದಲ ಮಾತೇ
ನೀರಿನಾಚೆ ಮೋಡದಾಚೆ
ಮೊಳಗಿದಂಥ ಘೋಷವೆ

ಬಾಳಿನಲ್ಲೆ ಕಂಡುಕೊಂಡೆ
ಹೋರಾಟದ ದಾರಿಯ
ಕರೆದು ಕರೆದು ತೋರಿಸಿದೆ
ಮಹಾಮನೆಯ ಬಿರುಕನು

ಜಾತಿಯನ್ನು ಹೂತುಬಿಡಲು
ಲಕ್ಷ ಲಕ್ಷ ಜನರನು
ಕಟ್ಟಿ ಕ್ರಿಯಾರಂಗಕಿಳಿದ
ಸ್ವಾಭಿಮಾನ ಸಮುದ್ರ
ಮಹರಾಷ್ಟ್ರದ ಮಣ್ಣಿನಲ್ಲಿ
ಮೂಡಿಬಂದ ಗುಡುಗುಸಿಡಿಲೆ

ಅಭಿಮಾನದ ನೇಗಿಲಿಂದ
ಬಂಜರು ನೆಲ ಉತ್ತವನೆ
ಪಾತಿಮಾಡಿ ನಾಟಿಹಾಕಿ
ಬೆಳೆಯ ಕಾಣದೋದವನೆ

ಕಪ್ಪುಕ್ಕಿನ ಕೋಳಗಳನು
ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
ಮಹಾಭೌದ್ಧ ಭಿಕ್ಷುವೆ
ಮಲಗಿದ್ದವರ ಕೂರಿಸಿದೆ
ನಿಲ್ಲಿಸುವವರು ಯಾರೋ?
ಛಲದ ಜೊತೆಗೆ ಬಲದ ಪಾಠ
ಕಲಿಸುವವರು ಯಾರೋ?

ಬೆಲೆ ಏರಿಕೆಯ ಪ್ರಶ್ನೆ ನಿರ್ಣಾಯಕ

ಸುಂಟರ ಗಾಳಿ

ಹರ್ಕಿಷನ್ ಸಿಂಗ್ ಸುರ್ಜಿತ್

ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಘಟ್ಟ ಏಪ್ರಿಲ್ 17ರಿಂದ ಆರಂಭವಾಗಿದೆ. ಅಂದು ಸಂಸತ್ತಿನ ಎದುರು ಮತ್ತು ದೇಶದ ಇತರ ಹಲವೆಡೆ ಬೆಲೆಯೇರಿಕೆ ವಿರುದ್ಧ ಸಿಪಿಐ(ಎಂ) ಕರೆಯಂತೆ ನಡೆಸಿದ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಗಮನಾರ್ಹ ಜನಬೆಂಬಲ ದೊರೆತಿದೆ. ಈ ಹಿನ್ನೆಲೆಯಲ್ಲಿ ಎನ್.ಡಿ.ಎ.ದ ಬಿಜೆಪಿ ಮಿತ್ರರು ತಮ್ಮ ಹಿರಿಯಣ್ಣ ಜನ-ವಿರೋಧಿ ನೀತಿಗಳನ್ನು ಕೈ ಬಿಡುವಂತೆ ಮಾಡುತ್ತಾರೆಯೇ ಅಥವಾ ಜನಗಳ ಸಂಕಟಗಳಿಂದ ಮುಖ ತಿರುವಿ ನಿಲ್ಲುತ್ತಾರೆಯೇ ಎಂಬುದೀಗ ನಿರ್ಣಾಯಕ ಪ್ರಶ್ನೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಜನಸಾಮಾನ್ಯರ ಮೇಲೆ ಹೊಸ - ಹೊಸ ಹೊರೆಗಳನ್ನು ಹೇರುವಲ್ಲಿ ಹಿಂದಿನ ಎಲ್ಲಾ ಸರಕಾರಗಳ ದಾಖಲೆಗಳನ್ನು ಮುರಿದಿರುವ, ಜತೆಗೆ ಭಾರತೀಯ ರಾಜಕರಣದ ಧರ್ಮನಿರಪೇಕ್ಷ ಮತ್ತು ಒಕ್ಕೂಟ ಸ್ವರೂಪವನ್ನು ಬದಲಿಸಲು, ಜಗತ್ತಿನ ರಾಷ್ಟ್ರಗಳ ಸಮೂಹದಲ್ಲಿ ನಮ್ಮ ದೇಶದ ಪ್ರತಿಷ್ಠೆಯನ್ನು ಕುಗ್ಗಿಸಿರುವ ವಾಜಪೇಯಿ ಸರಕಾರಕ್ಕೆ ಸಂಸತ್ತಿನ ಬಜೆಟ್ ಅಧಿವೇಶನದ ಈ ಎರಡನೇ ಘಟ್ಟದಲ್ಲಿ ಬಹಳಷ್ಟು ಸಮಸ್ಯೆಗಳು ಎದುರಾಗುವಂತೆ ಕಾಣುತ್ತಿದೆ. ಮುಂಬರುವ ದಿನಗಳಲ್ಲಿ ಸಂಸತ್ತು ವಿಭಿನ್ನ ವಿಷಯಗಳಲ್ಲಿ ಸರಕಾರದ ನಿಲುವುಗಳನ್ನು ಬಿಂಬಿಸುವ ರಾಷ್ಟ್ರಪತಿ ಭಾಷಣವನ್ನು ಅಂಗೀಕರಿಸಬೇಕಾಗಿದೆ. ಫೆಬ್ರವರಿ ಕೊನೆಗೆ ಹಣಕಾಸು ಮಂತ್ರಿಗಳು ಮಂಡಿಸಿದ ಬಜೆಟನ್ನು ಅಂಗೀಕರಿಸಬೇಕಾಗಿದೆ. ಬಜೆಟ್ ಮೇಲೆ ಚರ್ಚೆ ಆರಂಭಿಸಿ ಅದನ್ನು ಮತಕ್ಕೆ ಹಾಕುವ ಧೈರ್ಯವನ್ನು ಈ ಸರಕಾರ ಇನ್ನೂ ತೋರಿಸಿಲ್ಲ. ಬಜೆಟ್ ಪ್ರಸ್ತಾವಗಳ ಮೇಲೆ ಮತದಾನವನ್ನು ಮೇ ಮೊದಲ ವಾರಕ್ಕೆ ಮುಂದೂಡಲಾಗಿದೆ. ಈ ನಡುವೆ ಪ್ರತಿಪಕ್ಷಗಳು ಬಜೆಟ್ ಪ್ರಸ್ತಾವಗಳ ವಿರುದ್ಧ ಕಡಿತ (ಕಟ್ ಮೋಶನ್ಸ್)ಗಳನ್ನು ತರುವ ಯೋಜನೆ ಮಾಡುತ್ತಿವೆ.

ಸರಕಾರವನ್ನು ಒಂದು ತೆರನ ಹತಾಶ ಭಾವನೆ ಆವರಿಸಿರುವಂತೆ ಕಾಣುತ್ತಿದೆ. ಸರಕಾರೀ ನೌಕರರಿಗೆ ಆರ್.ಎಸ್.ಎಸ್. ಚಟುವಟಿಕೆಗಳಲ್ಲಿ ಅವಕಾಶ ನೀಡುವ ಗುಜರಾತ್ ಸರಕಾರದ ಆದೇಶವನ್ನು ಸ್ವತಃ ಪ್ರಧಾನಮಂತ್ರಿಗಳೇ ಪರೋಕ್ಷವಾಗಿ ಬೆಂಬಲಿಸಿದರೂ ಕೊನೆಗೆ ಅದನ್ನು ಹಿಂತೆಗೆದುಕೊಳ್ಳಲೇಬೇಕಾಗಿ ಬಂದಿದೆ. ಮತಾಂತರ ಕುರಿತ ಖಾಸಗೀ ಮಸೂದೆಯನ್ನು ಕೈಬಿಡಬೇಕಾಗಿ ಬಂದಿದೆ. ಬಿಹಾರದಲ್ಲಿ ಜನತೆಯ ತೀರ್ಪನ್ನು ಹುಸಿಗೊಳಿಸಲು ರಾಜ್ಯಪಾಲರ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡರೂ ನಿತಿಶ್ ಕುಮಾರ್ ವಿಶ್ವಾಸ ಠರಾವನ್ನು ಎದುರಿಸಲೂ ಸಾಧ್ಯವಾಗದೆ ತಲೆತಗ್ಗಿಸಿ ದೂರನಡೆದದ್ದು, ಆ ಆಟ ನಡೆಯದೆ ರಾಬ್ಡಿದೇವಿ ಮುಖ್ಯಮಂತ್ರಿಯಾದ ಮೇಲೆ ಸಿಬಿಐ ಮೂಲಕ ಮತ್ತೆ ಪ್ರಯತ್ನ, ಅದೇ ಕೇಸಿನಲ್ಲಿ ಕೋಟಿಗಟ್ಟಲೆ ಆಸ್ತಿ ಮಾಡಿಕೊಂಡವರ ಮೇಲೆ ಚಾರ್ಜ್‌ಶೀಟ್ ಹಾಕದೆ ಲಾಲೂ ರಾಬ್ರಿಯ ಮೇಲೆ ಮಾತ್ರ 46 ಲಕ್ಷ ರೂ. ಆಸ್ತಿ ಹೊಂದಿದ್ದಕ್ಕಾಗಿ ಚಾರ್ಜ್‌ಶೀಟ್ ಹಾಕಿದ್ದು ಇವೂ ವಾಜಪೇಯಿ ಸರಕಾರದ ಹತಾಶೆಯ ಇನ್ನು ಕೆಲವು ಉದಾಹರಣೆಗಳು ಎಂದು ಸುರ್ಜಿತ್ ಹೇಳುತ್ತಾರೆ.

ವಂಚಕತನದ ಪ್ರದರ್ಶನ

ಈಗ ಸರಕಾರ ಇತ್ತೀಚಿಗೆ ಕೈಗೊಂಡ ಹಲವಾರು ಬೆಲೆಯೇರಿಕೆ ಕ್ರಮಗಳಿಂದಾಗಿ ಪ್ರತಿಪಕ್ಷಗಳ ಧಾಳಿಗಳನ್ನು ಎದುರಿಸಬೇಕಾಗಿ ಬಂದಿದೆ. ಕಳೆದ ಅಕ್ಟೋಬರ್‌ನಲ್ಲಿ ಲೋಕಸಭಾ ಚುನಾವಣೆಗಳು ಮುಗಿದ ಕೂಡಲೇ ವಾಜಪೇಯಿ ಸರಕಾರ ಡೀಸೆಲ್ ಬೆಲೆಗಳಲ್ಲಿ ಶೇ.40 ತೀವ್ರ ಏರಿಕೆ ಮಾಡಿ ಆ ಮೂಲಕ ಸಾಗಾಣಿಕೆ ದರಗಳನ್ನು, ಕೃಷಿ ಉತ್ಪಾದನೆಯ ವೆಚ್ಚವನ್ನು ಹೆಚ್ಚಿಸಿತು, ಇತರ ಎಲ್ಲಾ ಸರಕುಗಳ ಬೆಲೆಗಳೂ ಏರುವಂತೆ ಮಾಡಿತು. ನಂತರ ಒಂದಲ್ಲ ಎರಡು ಬಾರಿ ರೇಶನ್ ವ್ಯವಸ್ಥೆಯಲ್ಲಿ ಅಕ್ಕಿ, ಗೋಧಿ, ಸಕ್ಕರೆ ಮತ್ತಿತರ ಸರಕುಗಳ ಬೆಲೆಗಳನ್ನು ಹೆಚ್ಚಿಸಿ ನೇರವಾಗಿ ಜನಸಾಮಾನ್ಯರ ಜೀವನ ಮಟ್ಟದ ಮೇಲೆಯೇ ಪ್ರಹಾರ ಮಾಡಿತು. ಇಷ್ಟರಿಂದಲೂ ಅದು ತೃಪ್ತವಾದಂತೆ ಕಾಣಿಸಲಿಲ್ಲ. ಆಂಧ್ರಪ್ರದೇಶದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಮುಗಿದ ಕೂಡಲೇ ಸೀಮೆಎಣ್ಣೆ, ಅಡುಗೆ ಅನಿಲ ದರಗಳಲ್ಲಿ ಭಾರಿ ಏರಿಕೆ ಮಾಡಿ ಬಡವರು ಮಾತ್ರವಲ್ಲ, ಮಧ್ಯಮ ವರ್ಗದವರ ಬೆನ್ನು ಮುರಿಯಲೂ ಮುಂದಾಯಿತು. ದಿಲ್ಲಿಯಲ್ಲಿ ಕೇಂದ್ರ ಸರಕಾರದಡಿ ಬರುವ ದಿಲ್ಲಿ ಹಾಲು ಯೋಜನೆಯಲ್ಲಿ ಹಾಲಿನ ದರಗಳನ್ನು ಒಂದೇ ಏಟಿಗೆ ದ್ವಿಗುಣಗೊಳಿಸಲಾಯಿತು. ಇದರಿಂದ ಹಲವಾರು ಬಡಮಕ್ಕಳು ಇದುವರೆಗೆ ದೊರೆಯುತ್ತಿದ್ದ ಅಲ್ಪಸ್ವಲ್ಪ ಹಾಲಿನಿಂದಲೂ ವಂಚಿತರಾಗುವಂತಾಗಿದೆ.

ನಂತರ ರಸಗೊಬ್ಬರ ಮುಂತಾದವುಗಳಿಗೆ ಕೊಡುವ ಅಗತ್ಯವಾದ ಸಬ್ಸಿಡಿಗಳನ್ನು ಕಡಿತ ಮಾಡಲಾಯಿತು. ಇದರಿಂದ ಕೃಷಿ ಉತ್ಪಾದನೆ ವೆಚ್ಚ ಇನ್ನಷ್ಟು ಏರಿ ಆಹಾರ ಪದಾರ್ಥಗಳು ಇನ್ನಷ್ಟು ಜನಗಳ ಕೈಗೆಟುಕದಂತಾಗುತ್ತದೆ.

ಕಾಳಸಂತೆಕೋರರಿಗೆ ಸುಗ್ಗಿ

ಈ ಬೆಲೆಯೇರಿಕೆಗಳಲ್ಲಿಯೂ ಅದು ಎಂತಹ ವಂಚಕತನವನ್ನು ಪ್ರದರ್ಶಿಸಿತು ಎಂಬುದೂ ಈಗ ಎಲ್ಲರಿಗೂ ಗೊತ್ತಿದೆ. ಆದರೆ ಈ ಏರಿಕೆಗಳನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ ಎಂದು ಪದೇ ಪದೇ ಪ್ರಧಾನಿಗಳು, ಹಣಕಾಸು ಮಂತ್ರಿಗಳು, ಅಷ್ಟೇ ಏಕೆ, ರಾಮನಾಯಕ್‌ರಂತಹ ಪುಟಗೋಸಿಗಳು ಕೂಡಾ ಹೇಳುತ್ತಿದ್ದಾರೆ. ಇದು ಜನಗಳ ಶೋಚನೀಯ ಪರಿಸ್ಥಿತಿಗಳ ಬಗ್ಗೆ ಇವರ ನಿರ್ಲಕ್ಷ್ಯವನ್ನು ಎತ್ತಿ ತೋರುತ್ತದೆ ಎಂದು ಬಲವಾಗಿ ಟೀಕಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಈ ಏರಿಕೆಗಳಿಂದ ಸಂತೋಷವಾಗಿರುವುದು ಬಹುರಾಷ್ಟ್ರೀಯ ಕಂಪನಿಗಳು, ದೇಶೀ ಬಂಡವಾಳಗಾರರು, ವ್ಯಾಪಾರಿಗಳು ಮತ್ತು ಕಾಳಸಂತೆಕೋರರು ಮಾತ್ರ, ಅವರೆಲ್ಲಾ ಸರಕಾರವನ್ನು ಹಾಡಿಹೊಗಳುತ್ತಿದ್ದಾರೆ ಎಂದಿದ್ದಾರೆ.

ಇದು ದೇಶದಲ್ಲಿ ಬಡತನದ ದರವನ್ನು ಇನ್ನಷ್ಟು ಹೆಚ್ಚಿಸಲಿದೆ. 1988-89 ರ ವೇಳೆಗೆ ಬಡತನ ದರ ಶೇ.22 ಕ್ಕಿಳಿದಿತ್ತು. ಆದರೆ ಹೊಸ ಆರ್ಥಿಕ ನೀತಿಗಳಿಂದಾಗಿ ಅದು 1994-95 ರಲ್ಲಿ ಶೇ. 39 ಕ್ಕೆ ಏರಿತು ಎಂದು ನಮಗೆಲ್ಲಾ ಗೊತ್ತಿದೆ. ವಾಜಪೇಯಿ ಸರಕಾರದ ನೀತಿಗಳು ಇದನ್ನು ಇನ್ನಷ್ಟು ಉಲ್ಬಣಗೊಳಿಸಲಿವೆ.

ಉದಾಹರಣೆಗೆ, ಕೇರಳದಲ್ಲಿ ಜನರಿಗೆ ಅತ್ಯುತ್ತಮ ರಕ್ಷಣೆ ನೀಡಿರುವ ವಿಶ್ವಬ್ಯಾಂಕ್ ಕೂಡಾ ಶ್ಲಾಘಿಸಿರುವ ಮಾವೇಲಿ ಸ್ಟೋರ್‌ಗಳ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲೆ ವಾಜಪೇಯಿ ಸರಕಾರದ ಈ ನೀತಿಗಳು ತೀವ್ರ ಪ್ರಹಾರ ನಡೆಸಿವೆ. ಆದ್ದರಿಂದ ಪಕ್ಷ-ಬೇಧವಿಲ್ಲದೆ ಸ್ವತಃ ಅಲ್ಲಿನ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಏಪ್ರಿಲ್ 18 ರಂದು ಅವರು ಸಂಸತ್ತಿನ ಮುಂದೆ ಧರಣಿ ನಡೆಸಿದ್ದಾರೆ.

ನಿರ್ಣಾಯಕ ಪ್ರಶ್ನೆ

ಈಗಿರುವ ನಿರ್ಣಾಯಕ ಪ್ರಶ್ನೆ - ಎನ್.ಡಿ.ಎ. ನಲ್ಲಿರುವ ಬಿಜೆಪಿ ಮಿತ್ರರು ಏನು ಮಾಡುತ್ತಾರೆ ಎಂಬುದು. ನಿಜ, ತೆಲುಗುದೇಶಂ ಪಕ್ಷ ಮತ್ತು ಕೆಲವು ಎನ್.ಡಿ.ಎ. ಅಂಗ ಪಕ್ಷಗಳೂ ಸರಕಾರದ ಈ ಕ್ರಮಗಳ ವಿರುದ್ಧ ಪ್ರತಿಭಟಿಸಿವೆ. ಆದರೆ ಒಟ್ಟಾರೆಯಾಗಿ ಅವರ ನಿಲುವು ಉಪೇಕ್ಷೆಯದ್ದೆಂದೇ ಹೇಳಬೇಕಾಗುತ್ತದೆ. ಸರಕಾರದ ಮೇಲೆ ಅವುಗಳ ಪ್ರಭಾವ ಏನು ಎಂದು ಜಗತ್ತಿಗೇ ಗೊತ್ತು. ಅವರಿಗೆ ಮನಸ್ಸಿದ್ದರೆ ಸರಕಾರ ತಲೆಬಾಗುವಂತೆ ಮಾಡಲು ಖಂಡಿತಾ ಸಾಧ್ಯವಿದೆ. ಆದರೆ ಇದುವರೆಗೆ ಅವರು ಮಾತಿನ ಪ್ರತಿಭಟನೆಗಿಂತ ಹೆಚ್ಚೇನೂ ಮಾಡಿಲ್ಲ.

ಈ ಮಾತಿನ ಪ್ರತಿಭಟನೆಗಳ ನಿಜ ಬೆಲೆ ಎಷ್ಟು ಎಂದು ಅರಿಯದಷ್ಟು ಜನಸಾಮಾನ್ಯರು ತಿಳಿಗೇಡಿಗಳಲ್ಲ. ಈಗಾಗಲೇ ಮಾರ್ಚ್ 10 ರಂದು ಆಂಧ್ರಪ್ರದೇಶದಲ್ಲಿ ಇದು ಕಂಡು ಬಂದಿದೆ. ಅಂದು ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ತೆಲುಗುದೇಶಂ ಮತ್ತು ಬಿಜೆಪಿ ಪಡೆದ ಫಲಿತಾಂಶ ನಿರೀಕ್ಷೆಯ ಮಟ್ಟಕ್ಕಿಂತ ಬಹಳ ಕೆಳಗಿತ್ತು. ಬಿಹಾರದಲ್ಲಿ ಬಹುಮತ ಗಳಿಸುವ ಎನ್.ಡಿ.ಎ. ಪಕ್ಷಗಳ ನಿರೀಕ್ಷೆ ಮಣ್ಣು ಪಾಲಾಯಿತು. ಹೇಗೆ ಈ ಬಿಜೆಪಿ ಮಿತ್ರಪಕ್ಷಗಳು ತಮ್ಮ ಸಾಮೂಹಿಕ ನೆಲೆಗಳನ್ನು ಕಳಕೊಳ್ಳುತ್ತಿವೆ ಎಂಬುದಕ್ಕೆ ಇವು ಉದಾಹರಣೆಗಳು. ಅವು ತಮ್ಮ ಈ ಉಪೇಕ್ಷೆಯ ನಿಲುವನ್ನು ಹೀಗೆಯೇ ಮುಂದುವರೆಸಿದರೆ ಪ್ರತಿಭಟನೆಯ ಗಾಳಿ ಸುಂಟರಗಾಳಿಯಾಗಿ ಬೆಳೆಯಲು ಬಹಳ ಸಮಯವೇನೂ ಹಿಡಿಸದು ಎಂದು ಸುರ್ಜಿತ್ ಎಚ್ಚರಿಸಿದ್ದಾರೆ. ತಮ್ಮ ನಿಲುವೇನು ಎಂದು ಅವರೀಗ ಜನಗಳ ಮುಂದೆ ಸ್ಪಷ್ಟಪಡಿಸಬೇಕಾಗಿದೆ.

ದೆಹಲಿ: ಹರ್ಕಿಶನ್‌ಸಿಂಗ್ ಸುರ್ಜಿತ್ ಮತ್ತು ಪ್ರಕಾಶ್ಕಾರಟ್ ನೇತೃತ್ವದಲ್ಲಿ ಭಾರೀ ಮೆರವಣಿಗೆ



ಕಛೇರಿ ಪ್ರವೇಶಿಸಲಾಗದೆ ಮನೆಗೆ ಮರಳಿದ ಜಿಲ್ಲಾಧಿಕಾರಿಗಳು

ತೆಲುಗುದೇಶಂ ಪಕ್ಷ ಆಷಾಡಭೂತಿತನದಲ್ಲಿ ಕಾಂಗ್ರೆಸ್ಸನ್ನು ಮೀರಿಸುವಂತೆ ಕಾಣುತ್ತಿದೆ. ರಾಜ್ಯದಲ್ಲಿ ರೈತರು ಆತ್ಮಹತ್ಯೆಗಿಳಿದರೆ ಅವರ ಸಮಸ್ಯೆಗಳನ್ನು ಪರಿಶೀಲಿಸುವ ಬದಲು ಮನೋವ್ಯಾಧಿ ತಜ್ಞರನ್ನು ಕಳಿಸುವ ಈ ಕಂಪ್ಯೂಟರ್ ಪ್ರಿಯ ಮುಖ್ಯಮಂತ್ರಿ ಏಪ್ರಿಲ್ 17 ರಂದು ಸಿಪಿಐ(ಎಂ) ನೇತೃತ್ವದ ಬೆಲೆಯೇರಿಕೆ - ವಿರೋಧಿ ಪ್ರತಿಭಟನೆಯನ್ನು ಹತ್ತಿಕ್ಕಲು ನಿರ್ದಯ ಲಾಠೀ ಪ್ರಹಾರಕ್ಕಿಳಿದದ್ದು ಆಶ್ಚರ್ಯದ ಸಂಗತಿಯೇನಲ್ಲ.

ಮಾರ್ಚ್ ತಿಂಗಳಲ್ಲೇ ಈತನ ಬೆಂಬಲದ ಕೇಂದ್ರ ಸರ್ಕಾರ ಸೀಮೆಎಣ್ಣೆ, ಅಡುಗೆ ಅನಿಲಗಳ ಬೆಲೆಯೇರಿಕೆಯ ಕ್ರಮ ಕೈಗೊಳ್ಳಲು ಮುಂದಾದಾಗ ತನ್ನ ರಾಜ್ಯದಲ್ಲಿ ಪಂಚಾಯತ್ ಚುನಾವಣೆಗಳ

ಆ ಕ್ರಮಗಳನ್ನು ಕೈಗೊಳ್ಳಬಾರದೆಂದು ಪ್ರಭಾವಬೀರಿದರು. ಚುನಾವಣೆಗಳು ಮುಗಿದ ನಂತರ ವಾಜಪೇಯಿ ಸರಕಾರ ರೇಷನ್ ವಸ್ತುಗಳ ಬೆಲೆಯೇರಿಕೆಯೊಂದಿಗೆ ಈ ಬೆಲೆಯೇರಿಕೆಗಳನ್ನು ತಂದಾಗ ಕೇವಲ ಮಾತಿನ ಪ್ರತಿಭಟನೆ ಸಲ್ಲಿಸಿ ಸುಮ್ಮನಾದರು. ಜನಗಳೇ ಪ್ರತಿಭಟನೆಗೆ ಮುಂದಾದಾಗ ಅದಕ್ಕೆ ಅವಕಾಶವಾದರೂ ನೀಡುವ ಬದಲು ಪೋಲೀಸರು ಸಿಕ್ಕಾಪಟ್ಟೆ ಲಾಠೀ ಪ್ರಹಾರ ಮಾಡಲು ಆದೇಶ ನೀಡಿದರು. ಆದರೆ ದಮನವನ್ನು ಲೆಕ್ಕಿಸದೆ ಆಂಧ್ರಪ್ರದೇಶದ ಜನತೆ ಏಪ್ರಿಲ್ 17 ರಂದು ರಾಜ್ಯದ 23 ಜಿಲ್ಲಾ ಕಲೆಕ್ಟರ್ ಕಚೇರಿಗಳಲ್ಲಿ ಕೆಲಸ ನಡೆಯದಂತೆ ಪಿಕೆಟಿಂಗ್ ನಡೆಸಿ ತೆಲುಗು ದೇಶಂ ಪಕ್ಷದ ಗೋಸುಂಬೆತನವನ್ನು ಬಯಲಿಗೆಳೆದರು.

ಒಂಭತ್ತು ಎಡ ಪಕ್ಷಗಳು - ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ.ಎಲ್., ನ್ಯೂ ಡೆಮಾಕ್ರಸಿ), ಸಿಪಿಐ(ಎಂ.ಎಲ್.-ಯೂನಿಟಿ ಇನಿಷಿಯೇಟಿವ್), ಸಿಪಿಐ(ಎಂ.ಎಲ್.-ಜನಶಕ್ತಿ), ಎಂ.ಸಿ.ಪಿ.ಐ., ಸಿಪಿಐ(ಎಂ.ಎಲ್.-ಲಿಬರೇಷನ್), ಎಸ್.ಯು.ಸಿ.ಐ., ಮಾರ್ಕ್ಸಿಸ್ಟ್-ಲೆನಿನಿಸ್ಟ್ ಸಮಿತಿ - ಬೆಲೆಯೇರಿಕೆಗಳ ವಿರುದ್ಧ ಪ್ರತಿಭಟಿಸಿ ಜಿಲ್ಲಾ ಕಲೆಕ್ಟರ್ ಕಚೇರಿಗಳ ಪಿಕೆಟಿಂಗ್‌ಗೆ ಕರೆನೀಡಿದ್ದವು. ಏಪ್ರಿಲ್ 6 ರಿಂದ 12 ರವರೆಗೆ ರಾಜ್ಯಾದ್ಯಂತ ಹಲವು ಹಳ್ಳಿಗಳಲ್ಲಿ ಪಾದಯಾತ್ರೆ, ಜಾಥಾ ಇತ್ಯಾದಿಗಳ ಮೂಲಕ ನಡೆದ ಪ್ರಚಾರ-ಪ್ರಕ್ಷೋಭೆ ಭಾರಿ ಜನಸ್ಪಂದನಗಳಿಸಿತು.

ಏಪ್ರಿಲ್ 17 ರಂದು ಕೆಲವೆಡೆ 8 ಗಂಟೆಗೆ ಜನ ಕಲೆಕ್ಟರ್ ಕಚೇರಿಗಳ ಮುಂದೆ ಘೆರಾಯಿಸಿದರು. ಖಮ್ಮಂ, ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳ ಕಲೆಕ್ಟರುಗಳು ಪಿಕೆಟಿಂಗ್ ಭೇದಿಸಲಾರದೆ ತಮ್ಮ ಮನೆಗಳಿಗೆ ಹಿಂದಿರುಗಿದರು. ವಿಶಾಖಪಟ್ಟಣಂ, ಶ್ರೀಕಾಕುಲಂ, ವಾರಂಗಲ್, ಮಹಬೂಬನಗರ, ತಿರುಪತಿ ಮತ್ತು ನಿಜಾಮಬಾದ್‌ನಲ್ಲಿ ಪೋಲೀಸ್ ಲಾಠಿ ಪ್ರಹಾರ ನಡೆಸಿ ನೂರಾರು ಪ್ರತಿಭಟನೆಕಾರರನ್ನು ಗಾಯಗೊಳಿಸಿದರು. ಇವರಲ್ಲಿ ಪ್ರತಿಭಟನಾಕಾರರ ಮುಖಂಡರು, ಮಹಿಳೆಯರೂ ಇದ್ದರು. ಕೆಲವೆಡೆ ಮುಖಂಡರನ್ನು, ಪ್ರತಿಭಟನಾಕಾರರನ್ನು ಬಂಧಿಸಲಾಯಿತು. ಸಿಪಿಐ(ಎಂ) ರಾಜ್ಯ ಸಮಿತಿ ಈ ಬೇಕಾಬಿಟ್ಟಿ ಲಾಠಿ ಪ್ರಹಾರವನ್ನು, ದಮನಕ್ರಮಗಳನ್ನು ಬಲವಾಗಿ ಖಂಡಿಸುತ್ತಾ ಈ ಹಂತದಲ್ಲಾದರೂ ಕೇಂದ್ರ, ರಾಜ್ಯ ಸರ್ಕಾರಗಳು ಬೆಲೆಯೇರಿಕೆ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದೆ.

ಒಂದು ರೂಪಾಯಿಯ ದೇಶ ಕೇವಲ ಒಂದು ರೂಪಾಯಿ

ಈ ಪುಟ್ಟ ದೇಶ ನನ್ನ ಎದೆಯಾಳಕ್ಕಿಳಿಯಲು ನಾನು ಕೊಟ್ಟದ್ದು ಕೇವಲ ಒಂದು ರೂಪಾಯಿ ಮಾತ್ರ.

ನಿಗಿ ನಿಗಿ ಸುಡುವ ಸೂರ್ಯನ ಎಲ್ಲಾ ತಾಪವನ್ನೂ ಹೀರಿ ಚಿಮ್ಮುವುದೇ ಮೇ ಫ್ಲವರ್. ಇಂತಹ ಹೂವುಗಳು ಸಾವಿರ ಸಾವಿರವಾಗಿ ಅರಳುವ ಹೊತ್ತಲ್ಲಿ ನಡೆದ ಮೇ ಉತ್ಸವವೇ ನನಗೂ ಕ್ಯೂಬಾಗೂ ನಂಟನ್ನು ಬೆಸೆಯಿತು. ಜಗದುದ್ದ ಜಗದಗಲ ಹರಡಿಹೋದ ನೊಂದವರು ನಮ್ಮ ನೋವುಗಳನ್ನೆಲ್ಲಾ ಮರೆತು ಹಾಡಿ ಕುಣಿಯುವ ಹೊತ್ತು - ಮೇ ದಿನ. ಯೌವ್ವನಕ್ಕೆ ನಾನು ಕಾಲಿಡುತ್ತಿದ್ದ ದಿನಗಳಲ್ಲಿ 'ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು - ಕಪ್ಪು ಮುಖ, ಬೆಳ್ಳಿ ಗಡ್ಡ, ಉರಿಯುತಿರುವ ಕಣ್ಣುಗಳು' ಎಂಬಂತೆ ನೂರಾರು ಸಂಖ್ಯೆಯಲ್ಲಿ ಈ ದಿನಕ್ಕಾಗಿ ತೇಲಿಬರುವ ಜನರನ್ನು ಕಂಡು ಬೆರಗಾಗುತ್ತಿದ್ದೆ.

'ಎಲ್ಲ ನೆಲದ ಕಾರ್ಮಿಕರೇ ಒಂದಾಗಿ, ನೀವು ಕಳೆದುಕೊಳ್ಳುವುದೇನಿಲ್ಲ ಸಂಕೋಲೆಗಳನ್ನು ಹೊರತು' - ಎಂದು ಕರೆ ನೀಡಿದಾತನ ಮೇಲೆ ಅಚಲ ನಂಬಿಕೆಯಿಟ್ಟು ಬಂದವರು ಅವರು. ತಮ್ಮ ನೋವುಗಳನ್ನು ಮರೆತು ತಮ್ಮಂತೆಯೇ ನೋವುಂಡವರ ಜೊತೆ ಬೆರೆತು, ಹಾಡು ಕುಣಿತಗಳ ಮಧ್ಯೆ ಮತ್ತೆ ಒಂದು ವರ್ಷ ಹೋರಾಟದ ಸಾಗರದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಛಲ ಹೊತ್ತು ತೆರಳುವವರು.

ಇಂತಹ ಮೇ ದಿನವನ್ನು ಅಚ್ಚರಿಯ ಕಣ್ಣುಗಳಿಂದ ನೋಡುತ್ತಾ ಅದರಲ್ಲಿ ನಡೆಯುವ ಹಾಡು ಕುಣಿತದಲ್ಲಿ ಒಂದಾಗಿ ಮನೆಗೆ ಮರಳುವಾಗ ಸಂಗಾತಿಯೊಬ್ಬರು ನನಗೆ ನೀಡಿದ್ದು - ಆ ಒಂದು ರೂಪಾಯಿಯ ಕೂಪನ್. ಕ್ಯೂಬಾ ದೇಶದ ಬೆಂಬಲಾರ್ಥವಾಗಿ ಒಂದು ರೂ. ಮೇ ದಿನ ಹಾಡು ಕುಣಿತಗಳ ಜೊತೆಗೆ ಇಂತಹ ಹಲವು ನಂಟು ಬೆಸೆಯುವ ದಿನವೂ ಹೌದು. ಹೋರಾಟದ ಕಿಚ್ಚು ಹೊತ್ತಿಸುವ ಪುಸ್ತಕಗಳು, ತಮಗೆ ಆದರ್ಶವಾದವರ ಚಿತ್ರಗಳು, ಕಲಾಕೃತಿಗಳು, ಎಲ್ಲೆಲ್ಲೂ ಕರಪತ್ರಗಳು. ನೊಂದ ಸಂಘಟನೆಗಳಿಗಾಗಿ, ಮುಷ್ಕರ ಕುಳಿತವರ ನೆರವಿಗಾಗಿ ಹಣ ಸಂಗ್ರಹಿಸಲು ಕೂಪನ್‌ಗಳು.

ಆದರೆ ಈಗ ಇವರು ಕೇಳುತ್ತಿರುವುದು ಒಂದು ದೇಶಕ್ಕಾಗಿ. ಇದು ನನ್ನನ್ನು ಬೆರಗೊಳಿಸಿದ ಸಂಗತಿ. ಎಲ್ಲಿಯ ಕ್ಯೂಬಾ, ಎಲ್ಲಿಯ ಭಾರತ, ಎಲ್ಲಿಯ ಬೆಂಗಳೂರು. ಆ ದೇಶಕ್ಕೇಕೆ ಒಂದು ರೂಪಾಯಿಯ ನೆರವು. ಈ ಪ್ರಶ್ನೆ ನನ್ನ ತಲೆಯಲ್ಲಿ ಮೊಳೆತಿದ್ದೇ ತಡ ಕ್ಯೂಬಾ ಹಾಗೂ ನನ್ನ ನಡುವಿನ ಗೋಡೆಗಳು ಇಲ್ಲವಾಗುತ್ತಾ ಹೋದವು. ಗೆಳೆಯನ ಮನೆಯ ದಾರಿ ದೂರವಲ್ಲ ಎಂಬಂತೆ ಹಾದಿ ಹತ್ತಿರಾಗತೊಡಗಿತು. ಕ್ಯೂಬಾ ನನ್ನ ನೆರೆಮನೆಯಾಯಿತು. ನನ್ನೊಳಗಿಳಿಯಿತು. ನನ್ನೊಳಗಿನ ಹಾಡಾಯಿತು.

ಹೀಗೆ ಯೋಚಿಸುವಾಗಲೆಲ್ಲಾ ನನಗೆ ಸು.ರಂ. ಎಕ್ಕುಂಡಿ ನೆನಪಾಗುತ್ತಾರೆ. ಶೇಕ್ಸ್‌ಪಿಯರ್‌ನ'ಹ್ಯಾಮ್ಲೆಟ್' ನಾಟಕವನ್ನು ನೋಡುತ್ತಾ ಒಬ್ಬ ಹಳ್ಳಿಯಾತ ಬಿಕ್ಕಿ ಬಿಕ್ಕಿ ಅಳುತ್ತಾನೆ. ಆಗ ಶೇಕ್ಸ್‌ಪಿಯರ್ ವಿಸ್ಮಿತರಾಗಿ ಕೇಳುತ್ತಾರೆ Who is he to Hekuba and Hekuba to him.

ರೊಮೇನಿಯಾದ ಒಡಲಲ್ಲಿ ಅರಳಿ ಜಗತ್ತನ್ನೇ ಬೆರಗಾಗಿಸಿದ ಜಿಮ್ನಾಸ್ಟ್ ನದಿಯಾ ಕಮಾನ್ಸೆಯ ಬಗ್ಗೆ ನಾನು ಕವನ ಬರೆದಾಗ ಎಕ್ಕುಂಡಿ ಈ ಮಾತು ಹೇಳಿದ್ದರು. ಕಾಣದ ಇಂಥ ಸಂಬಂಧದ ತಂತುಗಳು ಈ ಜಗತ್ತಿನ ಮೂಲೆ ಮೂಲೆಯಲ್ಲಿ ಹರಡಿರುತ್ತದೆ ಎಂದಿದ್ದರು. ಈಗ ಕ್ಯೂಬಾ ಮತ್ತು ನಾನು.

ಒಂದು ರೂಪಾಯಿ ಕೊಟ್ಟಾಗಲೇ ಮೊದಲ ಬಾರಿಗೆ ಕ್ಯೂಬಾ ಹೆಸರು ಕೇಳಿದ ನಾನು ಮತ್ತೆ ಯಾರಾದರೂ ಕ್ಯೂಬಾ ಹೆಸರು ಎತ್ತಿದಾಗ, ಪತ್ರಿಕೆಗಳಲ್ಲಿ ಕ್ಯೂಬಾ ಹೆಸರು ಕಂಡರೆ ಅರೆ! ಇದು ನಾನು ಒಂದು ರೂಪಾಯಿ ಕೊಟ್ಟ ದೇಶ ಎನಿಸುತ್ತಿತ್ತು. ಆ ಒಂದು ರೂಪಾಯಿಯ ದೇಶ ಸುದ್ದಿಯಾಗಿ ಪತ್ರಿಕೆಯಲ್ಲಿ ಮುಖ ತೋರಿಸುತ್ತಿರುವುದಾದರೂ ಏತಕ್ಕೆ? ಎಂದು ಕುತೂಹಲಗೊಂಡು ಓದುತ್ತಾ, ಓದುತ್ತಾ ಹೋದಂತೆ, ಆ ಒಂದು ರೂಪಾಯಿಯ ದೇಶ ನನ್ನೊಳಗೆ ಒಂದು ಜಾಗವನ್ನು ಹುಡುಕಿಕೊಂಡಿತು. ಈಗ ಅದು ನನ್ನೊಳಗಿನ ಹಾಡು.

ಮತ್ತೆ ಬಂದಿತು ಮೇ ದಿನ ಜಗದುದ್ದ ಜಗದಗಲ ಹರಡಿಹೋದ ನೊಂದವರು ತಮ್ಮ ನೋವುಗಳನ್ನು ಮರೆತು ಹಾಡಿ ಕುಣಿಯುವ ದಿನ-ಮೇ-ದಿನ. ಮೇ ದಿನಾಚರಣೆಗಳು ಹಲವು ವಿಚಾರಗಳನ್ನು ಹಂಚುವ ದಿನವೂ ಹೌದು. ಇದು ಎಂತಹ ಪರಿಣಾಮ ಉಂಟು ಮಾಡುತ್ತದೆ ಎಂಬುದನ್ನು ಒಂದು 'ರೂಪಾಯಿಯ ದೇಶ' ಎಂಬ ಈ ಲೇಖನ ಬಿಚ್ಚಿಡುತ್ತದೆ.



ಆ ಒಂದು ರೂಪಾಯಿ ಕೇವಲ ಕ್ಯೂಬಾವನ್ನು ಮಾತ್ರವಲ್ಲ ಅದಮ್ಯ ಕನಸುಗಾರ ಚೆಗೆವಾರನನ್ನು ಹಸಿರು ಬಟ್ಟೆಯ ಹರಕು ಗಡ್ಡದ ಫಿಡೆಲ್‌ನನ್ನು, ಗ್ರಾನ್ಮಾ ನೌಕೆಯನ್ನೂ, ನೆರೂದಾನ ಕಾವ್ಯವನ್ನು ಸದಾ ಜೊತೆಗಾರನಾಗಿ ನಿಂತ ಮೆಕ್ಸಿಕೋವನ್ನು, 'ಚೆ'ಯ ಅರ್ಜೆಂಟೀನಾವನ್ನು, ಆತ ಇಲ್ಲವಾದ ಬೊಲಿವಿಯಾವನ್ನು, ಲ್ಯಾಟಿನ್ ಅಮೇರಿಕಾದ ಒಳಬೇಗುದಿಯನ್ನು, ಅಷ್ಟೇ ಅಲ್ಲ- ಅಮೇರಿಕಾ ಎಂಬ ದೊಡ್ಡಣ್ಣನನ್ನೂ ಪರಿಚಯ ಮಾಡಿಕೊಟ್ಟಿತು.

'ಬೆಟ್ಟಗುಡ್ಡಗಳಲ್ಲಿ ಕಾಡು ಕಣಿವೆಗಳಲ್ಲಿ, ಚೆಗೆವಾರನ ಕೈಯಲ್ಲಿ ಇದ್ದದ್ದು ಕೋವಿ ಮತ್ತು ಕಾವ್ಯ ಎಂದು ಬಣ್ಣಿಸಿದ್ದರು ಎಕ್ಕುಂಡಿ. ಆಗ ತಾನೇ 'ಈ ರಾತ್ರಿ ನಾನು ಬರೆಯುತ್ತೇನೆ ಅತ್ಯಂತ ನೋವಿನ ಸಾಲುಗಳನ್ನು...., ಎಂಬ ನೆರೂದಾನ ಕವನದಲ್ಲಿ ಇಳಿಯುತ್ತಿದ್ದ ನಾನು 'ಚೆ' ಎಂಬ ಕನಸುಗಾರನೊಂದಿಗೆ ಕಳೆದುಹೋದೆ. ಪಕ್ಕದ 'ಚೆ' ಜೊತೆಗೆ ತುಡುಗರ ದಂಡು.

'ಕನಸುಗಾರರಲ್ಲದವರಿಂದ ಕ್ರಾಂತಿ ಸಾಧ್ಯವಿಲ್ಲ' ಎಂದು ಖಡಕ್ಕಾಗಿ ನಂಬಿದ್ದರು ಎಕ್ಕುಂಡಿ. ಅಂತೆಯೇ ಮೇ ದಿನಾ ಚರಣೆಗೆ ಹರಿದು ಬಂದ ಕಾರ್ಮಿಕರು, ಕಲಾವಿದರು ಹಾಗೂ ನಾನು. ಕನಸು ಗಾರನ ಹಿಂದೆ ' ಇರುವೆಯಂತೆ ಹರಿವ ಸಾಲು.....'

ಕ್ಯೂಬಾ ಅಂದಿನಿಂದಲೂ ನನ್ನೊಂದಿಗಿದೆ ಕನಸಾಗಿ, ಹಾಡಾಗಿ, ಬಂಡೇಳುವ ಹುಮ್ಮಸ್ಸಾಗಿ, ಕವಿತೆಯ ಸಾಲುಗಳಾಗಿ. ನನಗೆ ಫಿಡೆಲ್, ಚೆ, ಮಂಡೇಲ ಎಲ್ಲರೂ ಸೋನೆ ಹನಿಗಳಾಗಿ ಕಂಡಿದ್ದಾರೆ. ಈ ನೆಲಕ್ಕೆ ಹಸಿರು ಮುಕ್ಕಳಿಸುವ ತಾಕತ್ತು ಕೊಟ್ಟಿದ್ದರೆ ಅದು ಇಂತಹ ಅನೇಕಾನೇಕ ಸೋನೆ ಹನಿಗಳು ಎಂಬ ನಂಬಿಕೆ. ಸೋನೆ ಹನಿಗಳು ಉದುರಿ ಎದೆಗೂಡು ಸೇರಿ ಬೆಚ್ಚನೆಯ ಹಾಡಲ್ಲಿ
ಹನಿಗಳು ಉದುರಿ ಎದೆಗೂಡು ಸೇರಿ ಬೆಚ್ಚನೆಯ ಹಾಡಲ್ಲಿ
ಹಾಡಾಯಿತು... ನನ್ನ ಸಂಕಲನದ ಸಾಲು ಇದು.

ಇವರೆಲ್ಲರೂ ಎದೆಯಲ್ಲಿ ಕಾವ್ಯ, ಕೈಯಲ್ಲಿ ಖಡ್ಗ ಹಿಡಿದ ಪಂಪನ ಬಂಧುಗಳು. ಈ ಜಗತ್ತಿನಲ್ಲಿ ಪಂಪನದ್ದೇ ಒಂದು ಸೈನ್ಯವಿದೆ. ಎದೆಯಲ್ಲಿ ಕಾವ್ಯದ ಎಸಳುಗಳನ್ನಿಟ್ಟುಕೊಂಡು ಕೈಯಲ್ಲಿ ಖಡ್ಗ ಹಿಡಿದ ಎಷ್ಟೋಂದು ಜನ ಆ ಸೇನೆಯಲ್ಲಿದ್ದಾರೆ. ಆ 'ಚೆ' ಯಿಂದ ಹಿಡಿದು ಬೆಂಜಮಿನ್ ಮೊಲಾಯಿಸ್‌ನವರಿಗೆ.

ಜಗತ್ತಿನ ಕನಸುಗಾರರ ನಡುವೆ ಗೆರೆಗಳಿಲ್ಲ ಎಂಬುದು ಮತ್ತೆ ಮತ್ತೆ ಸಾಬೀತಾಗಿದೆ. ಜಗತ್ತಿನ ತುಂಬಾ ಹಲವಾರು ಲೆಬನಾನ್‌ಗಳು ಸೃಷ್ಟಿಯಾದಾಗ, ನೀನು ಕಪ್ಪ ಎನ್ನುವ ಮನಸ್ಸುಗಳು, ಸರ್ಕಾರಗಳು ಸೃಷ್ಟಿಯಾದಾಗ ಓಂದೊಂದು ಮನೆಯಲ್ಲಿ ಒಬ್ಬೊಬ್ಬ ಚೆ....' ಮೂಡುವ ಕನಸುಗಳೂ ಬೆಳೆದಿವೆ.

'ಮಣಿ' ಎನ್ನುವ ಅಮೇರಿಕಾ 'ಮಣಿಯಲಾರೆ' ಎನ್ನುವ ಕ್ಯೂಬಾ ಇಂದು ಜಗತ್ತಿನ ಆ ತುದಿಯ ಕಥೆಯಾಗಿ ಉಳಿದಿಲ್ಲ. ತನ್ನ ಕಾಲ ಮೇಲೆ ತಾನು ನಿಲ್ಲುವ ಬಯಕೆಗಳು ಮೂಡಿದ ಕಡೆಯೆಲ್ಲಾ ಈ ಕ್ಯೂಬಾ- ಅಮೇರಿಕಾ ಸೃಷ್ಟಿಯಾಗಿವೆ. ದೇಶಗಳ ನಡುವೆ, ದೇಶಗಳ ಒಳಗೆ, ಮನೆಯೊಳಗೆ, ಹಾಗೆ ಮನಸ್ಸಿನ ಒಳಗೂ...

ಆ ಒಂದು ರೂಪಾಯಿ ಏನೆಲ್ಲಾ ಮಾಡಿತು. ಕನಸುಗಳನ್ನು ಕೊಟ್ಟಿತು. ಅಂತೆಯೇ ಅದರತ್ತ ಹಾರುವ ರೆಕ್ಕೆಗಳನ್ನೂ ಕೊಟ್ಟಿತು. ಆ ರೆಕ್ಕೆಗಳೇ ನನ್ನನ್ನು ಕ್ಯೂಬಾದ ಒಳಗೆ ಇಳಿಸಿತು.

(ಲೋಹಿಯಾ ಪ್ರಕಾಶನ, ಬಳ್ಳಾರಿ ಪ್ರಕಟಿಸಿರುವ 'ನನ್ನೊಳಗಿನ ಹಾಡು ಕ್ಯೂಬಾ' ಪುಸ್ತಕದ ಆಯ್ದ ಭಾಗ)

ಕಾದು ನಿಂತಿದೆ ಮೇ ದಿನ

ನೂರಾರು ವರುಷಗಳ ಹಿಂದೆ
ಮಾಲಕರ ಗುಂಡುಗಳು
ಶೋಷಿತರ ಗುಂಡಿಗೆಯ ಸೀಳಿ
ನೆತ್ತರ ಚಿಲುಮೆಗಳ
ಚಿಲ್ಲನೆ ಚಿಮ್ಮಿಸಿದಾಗ
ಚಿಕಾಗೋದ ಬೀದಿಗಳಲ್ಲಿ
ಹೊಸ ಚರಿತೆಯ
ಚಿತ್ತಾರಗಳ ಬರಹ
ದುಡಿಯುವ ಜನತೆಯ ಎದೆಯಾಳದೊಳಗೆ
ವಿಶ್ವ ಭಾವನೆಯ ಜೀವ.
ಸಮರಶೀಲತೆಯ ಭಾವ
ಕುಡಿಯೊಡೆಯ ತೊಡಗಿದಾಗ
ಭಾರತದ ನೆಲದಲ್ಲಿ
ಕ್ರಾಂತಿ ಸೂರ್ಯನ ಕಿರಣ ಕಾಣಲು
ಕಾದು ನಿಂತಿದೆ ಮೇ ದಿನ.

'ಉದಯ'

ಒಂದು ಸಾಂಸ್ಕೃತಿಕ ಉತ್ಸವವಾಗಿ ಮೇ ದಿನಾಚರಣೆ

ಕೆ.ಜಿ.ಎಫ್‌ನಲ್ಲಿ ಮೇ ದಿನಾಚರಣೆಯೆಂಬುದು ಕಾರ್ಮಿಕರು ಮಾತ್ರವಲ್ಲ ಕಾರ್ಮಿಕ ವಿಸ್ತರಣಗಳ ಮನೆಮಕ್ಕಳಾದಿಯಾಗಿ ಹೆಂಗಸರು, ವೃದ್ಧರು, ಎಲ್ಲರೂ ಭಾಗವಹಿಸುವ ಅಪೂರ್ವ ಉತ್ಸವ. ಕರ್ನಾಟಕದ ಯಾವುದೇ ಭಾಗದಲ್ಲಿ ಕಾಣದ ಕೇಳದ ರೀತಿಯಲ್ಲಿ ಆಚರಿಸಲ್ಪಡುತ್ತಿದ್ದ ಸಾಮಾಜಿಕ ಹಬ್ಬ.

ತಂಗವಯಲ್ ಎಂದು ಕಾರ್ಮಿಕರು ಕರೆಯುವ ಈ ಬಂಗಾರದ ಗಣಿ ಪ್ರದೇಶದಲ್ಲಿ ಕಾರ್ಮಿಕರು ಹಲವು ಬ್ಲಾಕ್‌ಗಳನ್ನೊಳಗೊಂಡ ಪೇಟೆಗಳಲ್ಲಿ ವಾಸಿಸುತ್ತಾರೆ. ಇದರಲ್ಲಿ ಪ್ರತಿ ಪೇಟೆಯ ಪ್ರತಿ ಬ್ಲಾಕ್‌ನಲ್ಲಿಯೂ ಕೆಂಪುತೋರಣ, ಮೇ ಫ್ಲವರ್ ಎಂದು ಹೆಸರಾದ ಗುಲ್‌ಮೊಹರ್ ಹೂಗಳ ಅಲಂಕಾರ, ಮನೆಗಳ ಮೇಲೆ ಕೆಂಪುಬಾವುಟ ಪ್ರತಿ ಮನೆಯಸಾಲಿನಲ್ಲಿ ಒಂದು ಹಸಿರು ಚಪ್ಪರ. ಅಲ್ಲಿ ಕ್ರಾಂತಿಯ ನಾಯಕ ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಸ್ಟಾಲಿನ್‌ರವರ ಚಿತ್ರಗಳು ಜೊತೆಗೆ ಹಗಲೂ ರಾತ್ರಿ ಕ್ರಾಂತಿಗೀತೆಗಳ ಧ್ವನಿ ಮುದ್ರಿತ ಗೀತೆಗಳು, ಸಂಜೆ ನಾಟಕ ಅಥವಾ ಇತ್ತೀಚೆಗೆ ಪ್ರಗತಿಪರ ಸಿನಿಮಾಗಳ ವಿಡಿಯೋ ಪ್ರದರ್ಶನ ಇದನ್ನೆಲ್ಲಾ ಆಚರಿಸಲು ಪ್ರತಿ ಬ್ಲಾಕ್‌ನಲ್ಲಿ ಮೇ ದಿನ ಸಮಿತಿಗಳ ರಚನೆ ಇದು ಕೇವಲ ನೆನ್ನೆ ಮೊನ್ನೆಯದಲ್ಲ 1945ರಲ್ಲಿ ಆರಂಭವಾಗಿ ನಿರಂತರವಾಗಿ ನಡೆಯುತ್ತಾ ಬಂದ ಆಚರಣೆ.

ಇದೇ ಸಮಯದಲ್ಲಿಯೇ ಕೆಂಬಾವುಟವನ್ನೇರಿಸುವುದು, ವಾರ, ಹತ್ತು ದಿನಗಳ ಕಾಲ ಇತರ ಬಂಡವಾಳಶಾಹಿ ಪಕ್ಷಗಳ ಗೂಂಡಾಗಳ ದಾಳಿಯಿಂದ ಅದನ್ನು ರಕ್ಷಿಸುವುದು ಇದಕ್ಕಾಗಿ ಪ್ರತಿ ವರ್ಷವು 10-12 ಪೊಲೀಸು ಕೇಸುಗಳು ಇವು ರಾಜಕೀಯ ಹೋರಾಟದ ಒಂದು ಭಾಗವಾಗಿಯೇ ನಡೆಯುತ್ತಾ ಬಂದಿದೆ.

ಮೇ 88 ರಲ್ಲಿ ನಡೆದ ಮೇ ದಿನಾಚರಣೆಯ ವಿವರವನ್ನು ನೋಡಿದರೆ ಸಾಕು ಈ ಆಚರಣೆಯ ಸಾರ್ವಜನಿಕ ಮಹತ್ವ ತಿಳಿಯುತ್ತದೆ.

ಮೇ ದಿನಕ್ಕಾಗಿ 4 ಪುಟಗಳ ಹಸ್ತ ಪತ್ರಿಕೆಯೊಂದು ಇಂದಿನ ಮೇ ದಿನದ ಘೋಷಣೆಯನ್ನು ವಿವರಿಸಿತು.

ಮೇ ದಿನದಂದು ಬೆಳಗ್ಗೆ 6 ಗಂಟೆಗೆ ಆರಂಭ ಮಾಡಿ ಕಾರ್ಮಿಕ ಸಂಘದ ಕಛೇರಿಯ ಬಳಿ ಕೆಂಬಾವುಟವನ್ನು ಹಾರಿಸುವುದು. ನಂತರ ವಿವಿಧ ಪೇಟೆಗಳಲ್ಲಿ ವಿವಿಧ ಬ್ಲಾಕ್‌ಗಳಲ್ಲಿ ಒಂದೊಂದಾಗಿ ಕೆಂಬಾವುಟ ಹಾರಿಸುತ್ತಾ ಹೋಗುವುದು. ಪ್ರತಿ ಬ್ಲಾಕ್‌ನಲ್ಲಿಯೂ ಕೆಂಪು ಸಮವಸ್ತ್ರಧಾರಿ ಬಾಲಕರಿಂದ ಕೆಂಪುವಂದನೆ, ಮೇ ದಿನದ ಬಗ್ಗೆ ಭಾಷಣ, ಸಿಹಿ ಹಂಚಿಕೆ ಮಧ್ಯಾಹ್ನ 3 ಗಂಟೆಗೆ ರ‍್ಯಾಲಿ. ಇದರಲ್ಲಿ 3-4 ಟೇಪುಗಳ ಮೇಲೆ ವಿಶ್ವ ಶಾಂತಿ ಮೊದಲಾದ ಟ್ಯಾಬ್ಲೋಗಳು. 2,500 ಬಾವುಟಗಳು 200 ಕೆಂಪು ದಳದ ಸ್ವಯಂ ಸೇವಕರನ್ನೊಳಗೊಂಡು ಇಡೀ ನಗರದಲ್ಲಿ ಸಂಚರಿಸಿ ಕಿಂಗ್ ಜಾರ್ಜ್ ಮೈದಾನದಲ್ಲಿ ಬಹಿರಂಗ ಸಭೆ. ಇಲ್ಲಿ ಎರಡೂ ಕಡೆ ಸೀರಿಯಲ್ ಸೆಟ್‌ಗಳಿಂದ ಅಲಂಕೃತವಾದ ಕುಡುಗೋಲು ಸುತ್ತಿಗೆಗಳ ಬೃಹತ್ ಚಿತ್ರಗಳು ಇದು ಮೇ ದಿನಗಳಲ್ಲಿ ಆಚರಣೆಯಾದರೆ, ಮುಂದಿನ ದಿನಗಳ ಒಂದೊಂದು ದಿನ ಒಂದೊಂದು ಬ್ಲಾಕ್‌ನಲ್ಲಿ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ನಾಟಕ, ಚರ್ಚಾ ಸ್ಪರ್ಧೆಗಳು.

ಮೇ ಡೇ ಚೀಟಿ

ಕೆ.ಜಿ.ಎಫ್. ನ ಕಾರ್ಮಿಕರನ್ನು ಮೇ ದಿನ ಹೇಗೆ ಆವರಿಸಿದೆ ಎಂಬುದಕ್ಕೆ ಅಲ್ಲಿನ ವಿವಿಧ ಬ್ಲಾಕ್‌ಗಳಲ್ಲಿ ನಡೆಯುವ 'ಮೇ ಡೇ ಚೀಟಿ' ಒಂದು ಉದಾಹರಣೆ. ಹಲವು ಮನೆಯವರು ಸೇರಿ ಪ್ರತಿ ತಿಂಗಳೂ 10 ರೂ.ನಂತೆ ಹಾಕಿ ಚೀಟಿ ಆರಂಭಿಸುತ್ತಾರೆ. ಜೂನ್ ತಿಂಗಳಲ್ಲಿ ಆರಂಭವಾಗುವ ಈ ಚೀಟಿ ಯಿಂದ ವರ್ಷವೆಲ್ಲಾ ಹಣ ಒಟ್ಟುಗೂಡಿ ಮೇ ದಿನದ ಹೊತ್ತಿಗೆ.ಸುಮಾರು ಉಳಿತಾಯವಾಗುತ್ತದೆ. ಈ ಹಣದಿಂದ ಆಯಾ ಮನೆಗೆ ಅಥವಾ ವ್ಯಕ್ತಿಗೆ ಬೇಕಾದ ವಸ್ತುಗಳನ್ನು ಕೊಂಡು ಮೇ ದಿನೋತ್ಸವದಂದು ಹಂಚಿಕೆ. ಅದು ಕುರ್ಚಿಯಾಗಿರಬಹುದು, ಕೈಗಡಿಯಾರವಾಗಬಹುದು. ಇಂತಹದನ್ನು ಎಲ್ಲಿಯಾದರೂ ಕೇಳಿದ್ದಿರಾ?

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee, Editor : G.N. NAGARAJ